ಆರ್ಥಿಕಾಭಿವೃದ್ಧಿಯಲ್ಲಿ ಸಹಕಾರ ಸಂಘಗಳ ಪಾತ್ರ : ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ ನಿಯಮಿತ, ಹುಕ್ಕೇರಿ ಒಂದು ಅಧ್ಯಯನ.

: ಸಂಶೋಧಕರು :

ಬಸವರಾಜ ಮಹಾದೇವ ಜಿನರಾಳಿ

: ಮಾರ್ಗದರ್ಶಕರು :

ಶಾಮಲಾ ಬಿ. ದಾಸೋಗ

ಶ್ರೀ ಬಿ.ಆರ್.ದರೂರ ಸಂಶೋಧನಾ ಕೇಂದ್ರ ಹಾರೂಗೇರಿ

ಅಧ್ಯಯನಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ಅಭಿವೃದ್ಧಿ ಅಧ್ಯಯನ ವಿಷಯದಲ್ಲಿ ಎಂ.ಫಿಲ್‌ಪದವಿಗಾಗಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಪ್ರಬಂಧ.

೨೦೦೮

ಆರ್ಥಿಕಾಭಿವೃದ್ಧಿಯಲ್ಲಿ ಸಹಕಾರ ಸಂಘಗಳ ಪಾತ್ರ : ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ ನಿಯಮಿತ, ಹುಕ್ಕೇರಿ ಒಂದು ಅಧ್ಯಯನ.

: ಸಂಶೋಧಕರು :

ಬಸವರಾಜ ಮಹಾದೇವ ಜಿನರಾಳಿ

: ಮಾರ್ಗದರ್ಶಕರು :

ಶಾಮಲಾ ಬಿ. ದಾಸೋಗ

ಶ್ರೀ ಬಿ.ಆರ್.ದರೂರ ಸಂಶೋಧನಾ ಕೇಂದ್ರ ಹಾರೂಗೇರಿ

ಅಧ್ಯಯನಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ಅಭಿವೃದ್ಧಿ ಅಧ್ಯಯನ ವಿಷಯದಲ್ಲಿ ಎಂ.ಫಿಲ್‌ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಪ್ರಬಂಧ.

೨೦೦೮

: ಘೋಷಣಾ ಪತ್ರ :

"ಆರ್ಥಿಕಾಭಿವೃದ್ಧಿಯಲ್ಲಿ ಸಹಕಾರ ಸಂಘಗಳ ಪಾತ್ರ : ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ ನಿಯಮಿತ, ಹುಕ್ಕೇರಿ ಒಂದು ಅಧ್ಯಯನ" ಎಂಬ ಶಿರ್ಷಿಕೇಯ ಸಂಪ್ರಬಂಧವನ್ನು ಡಾ: ಶಾಮಲಾ ಬಿ. ದಾಸೋಗ. ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ, ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲ. ಮತ್ತು ಈ ಮೊದಲು ಇಡಿಯಾಗಿ ಇಲ್ಲವೆ ಬಿಡಿಯಾಗಿ ಪ್ರಕಟಿಸಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸ್ಥಳ : ಹಾರೂಗೇರಿ.
ದಿನಾಂಕ : ೦೪-೧೦-೨೦೦೮.

ಶ್ರೀ ಬಸವರಾಜ ಮಹಾದೇವ ಜಿನರಾಳಿ
ಎಂ.ಫಿಲ್ ವಿದ್ಯಾರ್ಥಿ,
ಶ್ರೀ ಬಿ. ಆರ್. ದರೂರ,
ಸಂಶೋಧನಾ ಕೇಂದ್ರ ಹಾರೂಗೇರಿ,

: ದೃಢೀಕರಣ ಪತ್ರ :

ಶ್ರೀ ಬಸವರಾಜ ಮಹಾದೇವ ಜಿನರಾಳಿ ಇವರು **"ಆರ್ಥಿಕಾಭಿವೃದ್ಧಿಯಲ್ಲಿ ಸಹಕಾರ ಸಂಘಗಳ ಪಾತ್ರ : ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ ನಿಯಮಿತ, ಹುಕ್ಕೇರಿ ಒಂದು ಅಧ್ಯಯನ."** ಎಂಬ ಶಿರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ದಪಡಿಸಿದ್ದಾರೆ. ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ, ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಇವರು ಈ ಮೊದಲು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲ. ಈ ಮೊದಲು ಎಲ್ಲಿಯೂ ಇಡಿಯಾಗಿ ಇಲ್ಲವೇ ಬಿಡಿಯಾಗಿ ಪ್ರಕಟಿಸಿಲ್ಲವೆಂದು ಈ ಮೂಲಕ ದೃಢೀಕರೀಸುತ್ತೇನೆ.

ಸ್ಥಳ : ಹಾರೂಗೇರಿ.
ದಿನಾಂಕ : ೦೪-೧೦-೨೦೦೮.

ಡಾ: ಶಾಮಲಾ ಬಿ. ದಾಸೋಗ
ಮಾರ್ಗದರ್ಶಕರು,
ಶ್ರೀ ಬಿ. ಆರ್. ದರೂರ
ಸಂಶೋಧನಾ ಕೇಂದ್ರ ಹಾರೂಗೇರಿ, ಮತ್ತು
ಸಮಾಜ ಶಾಸ್ತ್ರದ ಪ್ರಾಧ್ಯಾಪಕರು,
ಮರಾಠಾ ಮಂಡಳ ಕಲಾ, ವಾಣಿಜ್ಯ, ವಿಜ್ಞಾನ ಹಾಗೂ ಗೃಹ ವಿಜ್ಞಾನ
ಮಹಾವಿದ್ಯಾಲಯ ಬೆಳಗಾವಿ.

: ಕೃತಜ್ಞತೆ :

ಈ ಕಿರು ಸಂಪ್ರಬಂಧವನ್ನು ಸಿದ್ಧಪಡಿಸುವಲ್ಲಿ ನನಗೆ ಅನುಮತಿ ನೀಡಿ ಮುಕ್ತ ಮನಸ್ಸಿನಿಂದ ಸೂಕ್ತ ಸಲಹೆ ಸೂಚನೆಗಳನ್ನು ನೀಡಿರುವಂತಹ ಮಾರ್ಗದರ್ಶಕರಾದ ಡಾ: ಶಾಮಲಾ ಬಿ. ದಾಸೋಗ ಪ್ರಾಧ್ಯಾಪಕರಿಗೆ ನಾನು ಚಿರಋಣಿಯಾಗಿದ್ದೇನೆ.

ಈ ಸಂಪ್ರಬಂಧವನ್ನು ಕ್ರೋಢಿಕರಿಸುವಲ್ಲಿ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ನಿರ್ದೇಶಕರಾದ ಶ್ರೀಯುತ ಡಾ: ವ್ಹಿ. ಎಸ್. ಮಾಳಿ ಹಾಗೂ ಅಭಿವೃದ್ಧಿ ವಿಭಾಗದ ಮುಖ್ಯಸ್ಥರಾದ ಶ್ರೀಯುತ ಡಾ: ಸಿ. ಆರ್. ಗುಡಸಿ ಅವರಿಗೂ ನನ್ನ ಅನಂತ ಕೃತಜ್ಞತೆಗಳು.

ನನ್ನ ಇಡೀ ಶಿಕ್ಷಣಕ್ಕೆ ಬೆನ್ನಲುಬಾಗಿ ನಿಂತು ಪ್ರೋತ್ಸಾಹಿಸಿ ಬೆಳೆಸಿದ ಪೂಜ್ಯನೀಯ ತಂದೆಯವರಾದ ಶ್ರೀ ಮಹಾದೇವ ಸಿದ್ದಪ್ಪಾ ಜಿನರಾಳಿ ಹಾಗೂ ತಾಯಿಯವರಾದ ಶ್ರೀಮತಿ ಶಕುಂತಲಾ ಮಹಾದೇವ ಜಿನರಾಳಿ ಇವರಿಗೆ ಸದಾ ಕಾಲ ಚಿರಋಣಿಯಾಗಿದ್ದೇನೆ.

ಈ ಅಧ್ಯಯನದ ವರದಿ ತಯಾರಿಕೆಗೆ ನನ್ನನ್ನೂ ಹುರುದುಂಬಿಸಿ ಎಲ್ಲಾ ರೀತಿಯಿಂದ ಸಹಕಾರ ನೀಡಿದಂತಹ ಆತ್ಮೀಯರಾದ ಶ್ರೀ ಉಮೇಶ ಕತ್ತಿ ಹಾಗೂ ಶ್ರೀ ರಮೇಶ ಕತ್ತಿಯವರಿಗೆ ನನ್ನ ಅನಂತಾನಂತ ದನ್ಯವಾದಗಳು ಹಾಗೂ ಈ ಅಧ್ಯಯನದ ವರದಿ ತಯಾರಿಕೆಗೆ ಸಹಾಯ ಮತ್ತು ಸಹಕಾರಿಯಾದ ಶ್ರೀ ಕೆ. ಎಂ. ಬುಗಡಿಕಟ್ಟಿ ನ್ಯಾಯವಾದಿಗಳು ಮದಿಹಳ್ಳಿ, ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ನಿರ್ದೇಶಕ ಮಂಡಳಿ ಮತ್ತು ಸಿಬ್ಬಂದಿ ವರ್ಗ ಮತ್ತು ನನ್ನ ಎಲ್ಲ ಸ್ನೇಹಿತ ವರ್ಗಕ್ಕೂ ನನ್ನ ಹೃದಯ ಪೂರ್ವಕ ಕೃತಜ್ಞತೆಗಳು.

ಎಲೆ ಮರೆಯ ಕಾಯಿಯ ಹಾಗೆ ಸದಾ ಕಾಲ ಭವಿಷ್ಯದ ರೂಪ ರೇಷೆಯಲ್ಲಿ ಅತ್ಯುನ್ನತ ಪಾಲನ್ನು ತೆಗೆದುಕೊಂಡ ನನ್ನ ಶ್ರೀಮತಿ ಶೀಲಾ ಬಿ. ಜಿನರಾಳಿ, ಮುದ್ದು ಮಕ್ಕಳಾದ ಚೇತನ ಮತ್ತು ಸ್ಮಿತಾ ಹಾಗೂ ಸಹೋದರ ಶ್ರೀ ಮಲ್ಲಪ್ಪಾ ಮ. ಜಿನರಾಳಿ ಹಾಗೂ ಶ್ರೀಮತಿ ರೂಪಾ ಮ. ಜಿನರಾಳಿ ಹಾಗೂ ಈ ಸಂಪ್ರಬಂಧವನ್ನು ಬೆರಳಚ್ಚು ಮಾಡಿದ ಪ್ರಿಯಂಕಾ ಡಿ.ಟಿ.ಪಿ ಹುಕ್ಕೇರಿ (ಶಿರಗಾಂವ) ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಈ ಅಧ್ಯಯನಕ್ಕೆ ಸಹಕರಿಸಿದ ಎಲ್ಲ ಆತ್ಮೀಯರಿಗೂ ನನ್ನ ದನ್ಯವಾದಗಳನ್ನು ಸಲ್ಲಿಸಲು ಮರೆಯದೆ ಇರಲಾರೆನು.

ನಮನಗಳೊಂದಿಗೆ,

ಸ್ಥಳ : ಹಾರೂಗೇರಿ.
ದಿನಾಂಕ : ೦೪-೧೦-೨೦೦೮.

ಸಂಶೋಧನಾ ವಿದ್ಯಾರ್ಥಿ,

ಶ್ರೀ ಬಸವರಾಜ ಮಹಾದೇವ ಜಿನರಾಳಿ

: ಅಧ್ಯಯನದ ವಿನ್ಯಾಸ :

ಅಧ್ಯಾಯ–೧: ಪೀಠಿಕೆ

ಪರಿವಿಡಿ

ಅಧ್ಯಾಯ–೧

ಅಧ್ಯಾಯ – ೧

೧. ಪೀಠಿಕೆ :

ಮಾನವ ಸಂಘಜೀವಿ. ಅವನು ತನ್ನ ಅಲೇಮಾರಿ ಜೀವನವನ್ನು ತ್ಯಜಿಸಿ ಸಾಂಘಿಕ ಜೀವನವನ್ನು ಪ್ರಾರಂಭಿಸಿದ. ಆಗ ತನ್ನ ಆಸೆಗಳನ್ನು ಪೂರೈಸಿಕೊಳ್ಳಲು ಹಲವಾರು ಸಂಘ ಸಂಸ್ಥೆಗಳನ್ನು ಹುಟ್ಟು ಹಾಕಲು ಪ್ರಯತ್ನಿಸತೊಡಗಿದ. ಆಗ ಮಾನವನ ಸಮಸ್ಯೆಗಳು ಸುಗಮವಾಗಿ ಪರಿಹಾರವಾಗತೊಡಗಿದವು. ಕ್ರಮೇಣವಾಗಿ ಇದೇ ಸಂಘಟನೆಗಳು ಮುಂದೆ ರಾಜಕೀಯ ಪರಿವರ್ತನೆಯಾಗತೊಡಗಿದವು. ಇಂತಹ ಸಂಘಟನೆಗಳು ಸಹಕಾರಿ ಸಂಘಗಳಾಗಿ ಮಾರ್ಪಟ್ಟವು.

ಹತ್ತೊಂಬತ್ತನೆಯ ಶತಮಾನದಲ್ಲಿ ಐರೋಪ್ಯ ರಾಷ್ಟ್ರಗಳಲ್ಲಿ ಪ್ರಾರಂಭವಾದ ಕೈಗಾರಿಕಾ ಕ್ರಾಂತಿಯ ಮೂಲಕ ಮತ್ತು ಕಾರ್ಮಿಕರ ಪರಿಶ್ರಮದಿಂದ ಜಗತ್ತಿನಲ್ಲಿ ಹೊಸ ಶಕೆ ಪ್ರಾರಂಭಗೊಂಡಿತು. ಜನರಿಗೆ ಉದ್ಯೋಗ ಮತ್ತು ಜನತೆಗೆ ಉತ್ತಮ ವಸ್ತುಗಳು ದೊರೆಯಲು ಪ್ರಾರಂಭವಾದಂತೆ, ವ್ಯವಸ್ಥಾಪನೆಯ ಹೊಸ ವಿಚಾರಗಳು ಉದಯಿಸಿದವು. ಇಂಗ್ಲಂಡಿನ ನೇಕಾರರು, ಕಾರ್ಮಿಕರ ಕಲ್ಯಾಣಕ್ಕಾಗಿ ತಮ್ಮದೆ ಸಂಘಟನೆಯಲ್ಲಿ ಪ್ರಪ್ರಥಮವಾಗಿ ತತ್ವಗಳನ್ನು ನಿರೂಪಿಸಿಕೊಂಡು ಸಂಘವನ್ನು ಸ್ಥಾಪಿಸಿ ಕೊಳ್ಳುವುದರ ಮೂಲಕ ಸಹಕಾರಿ ಸಂಘಗಳ ಜನನಕ್ಕೆ ಕಾರಣವಾದರು.

ಸಹಕಾರಿ ತತ್ವ "ಒಬ್ಬನು ಎಲ್ಲರಿಗಾಗಿ ಎಲ್ಲರು ಒಬ್ಬನಿಗಾಗಿ" ಎಂಬ ಧ್ಯೇಯ ವಾಕ್ಯವನ್ನು ಸ್ಮರಿಸುತ್ತ ಕೊಟ್ಟಿರುವ ವಿಷಯವನ್ನು ಅಮೂಲಾಗ್ರವಾಗಿ, ಭಾವ ಪೂರ್ಣವಾಗಿ ಪರಿಶೀಲಿಸಿ ನೋಡಿದಾಗ ಕವಿಯೊಬ್ಬನ ವಾಕ್ಯ.

"ನಾನೊಬ್ಬ ನಿದ್ದೆ ಮಾಡಿದರೆ
ಅದು ನನ್ನೊಬ್ಬನ ಸುಖಕ್ಕಾಗಿ
ನಾನೊಬ್ಬ ಎಚ್ಚತ್ತು ದುಡಿದರೆ
ಅದು ಊರಿನೆಲ್ಲರ ಹಿತಕ್ಕಾಗಿ"

ಎಂಬುದು ನಿಜವೆನಿಸುತ್ತದೆ. ಸಮಾನತೆ ಆಧಾರದ ಮೇಲೆ ತಮ್ಮ ಆರ್ಥಿಕ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳಲು ಜನರು ಸ್ವ-ಇಚ್ಛೆಯಿಂದ ಸಂಘಟಿತರಾಗಿ ಕಟ್ಟಿಕೊಂಡಿರುವ ಸಂಸ್ಥೆಗಳೇ ಸಹಕಾರಿ ಸಂಘಗಳು. ಇವು ಯಶಸ್ವಿಯಾಗಿ ನಿಷ್ಠೆ ಪ್ರಾಮಾಣಿಕತೆ ಮತ್ತು ಕಾರ್ಯಕ್ಷಮತೆಗಳ ಅವಶ್ಯಕತೆ ಬಹಳಿಷ್ಟಿದೆ. ಆದರ್ಶ ವ್ಯಕ್ತಿಗಳೇ ಆದರ್ಶ ಜೀವನವನ್ನು, ಆದರ್ಶ ಸಮಾಜವನ್ನು ಕಟ್ಟಬಲ್ಲರು. ಸಹಕಾರ ಚಳುವಳಿಯ ಯಶಸ್ವಿಗೆ ನೈತಿಕ ಮಾರ್ಗವೇ ಸರಿಯಾದ ಮಾರ್ಗ. ಜನರು ತಮ್ಮ ಭಾವನೆಗಳನ್ನು ಮತ್ತು ಸಮಸ್ಯೆಗಳನ್ನು ಪರಸ್ಪರ ಮುಖಾಮುಖಿಯಾಗಿ ಚರ್ಚಿಸಿ ತಿರ್ಮಾನ ತೆಗೆದುಕೊಳ್ಳಲು ಇರುವ ಮುಕ್ತ ಅವಕಾಶ, ಪ್ರಜಾಪ್ರಭುತ್ವದ ಮುಖ್ಯ ಲಕ್ಷಣ. ಇದು ಸಹಕಾರಿ ತತ್ವಗಳಲ್ಲಿಯ ಒಂದು ತತ್ವವು ಹೌದು. ಇದು ಭಾರತೀಯ ಸಂಸ್ಕೃತಿಯಲ್ಲಿ ಪ್ರಾಚೀನ ಕಾಲದಿಂದಲೂ ಆಧ್ಯಾತ್ಮಿಕವಾಗಿ ಆಚರಣೆಯಲ್ಲಿರುವ ಒಂದು ರೂಢಿ. "ಸರ್ವೇಜನಾ

ಸುಖಿನೋಭವಂತು" ಎಂಬುದು ನಮ್ಮ ಸಂಸ್ಕೃತಿ ಇಂದಿನ ಪ್ರಸ್ತುತ ಅವಧಿಯಲ್ಲಿ ಸಹಕಾರವು ಆರ್ಥಿಕ ಸಾಮಾಜಿಕ ರಾಜಕೀಯ ರಂಗಗಳಲ್ಲಿ ಅಪಾರವಾದ ಸಹಾಯ ಸಲ್ಲಿಸಿದೆ ಎಂದು ಹೇಳಬಹುದು.[2]

೧.೨ ಸಹಕಾರಿ ಚಳುವಳಿಯ ಸೈದ್ಧಾಂತಿಕ ತಿರುಳು:

ಯಾವುದೇ ಚಳುವಳಿಯು ಜನಸಮೂಹದಲ್ಲಿ ಬೆಳೆದು ಅವರ ಅಶೋತ್ತರಗಳನ್ನು ಈಡೇರಿಸಬೇಕಾದರೆ, ಅದಕ್ಕೆ ತನ್ನದೇ ಆದ ಗಟ್ಟಿ ಸೈದ್ಧಾಂತಿಕ ನೆಲೆಗಳು ಇರಬೇಕಾಗುತ್ತದೆ. ಸೈದ್ಧಾಂತೇತರ ಚಳುವಳಿ ಎಂದೂ ಬೆಳೆಯಲಾರದು ಮತ್ತು ಅದರ ಕಲ್ಪನೆ ಅರಾಜಕತೆಯಲ್ಲಿ ಅಂತ್ಯಗೊಳ್ಳುತ್ತದೆ. ಈ ಹಿನ್ನಲೆಯಲ್ಲಿ ಸಹಕಾರ ಚಳುವಳಿಯ ಸೈದ್ಧಾಂತಿಕ ನೆಲೆಗಳನ್ನು ಅರಿಯುವದು ಅತಿ ಅವಶ್ಯಕ.

೧.೨. ಅ) ಸ್ವಯಂ ಸಂಘಟನೆ :

ಸಹಕಾರ ಚಳುವಳಿಯು ವ್ಯಕ್ತಿಗಳ ಸ್ವಯಂ ಸಂಘಟನೆಯಾಗಿದೆ. ಅಂದರೆ ಸಹಕಾರವು ಯಾವುದೇ ವ್ಯಕ್ತಿಗೆ ಸದಸ್ಯತ್ವವನ್ನು ಪಡೆದುಕೊಳ್ಳಲು ಒತ್ತಾಯ ಮಾಡುವದಿಲ್ಲ.

೧.೨. ಆ) ಪ್ರಜಾಪ್ರಭುತ್ವದ ಸಂಘಟನೆ :

ಸಹಕಾರಿ ಸಂಘಟನೆಗಳಲ್ಲಿ ಜನರು ಬಂಡವಾಳದ ಆಧಾರದ ಮೇಲಿಂದ ಸಂಘಟಿತಗೊಂಡಿರುವದಿಲ್ಲ. ಸಹಕಾರಿ ಸಂಘಗಳಲ್ಲಿ ಪ್ರತಿಯೊಬ್ಬ ಸದಸ್ಯನು ಒಂದೇ ಮತವನ್ನು ಪಡೆದಿರುತ್ತಾನೆ. ಒಬ್ಬ ಸದಸ್ಯನು ಎಷ್ಟೇ ಶೇರುಗಳನ್ನು ಖರೀದಿಸಿದರೂ ಅವನಿಗೆ ಒಂದೇ ಮತದ ಹಕ್ಕು ಇರುತ್ತದೆ. ಸಾಮಾನ್ಯ ಕಾರ್ಯಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಮಾತನಾಡುವ ಹಕ್ಕು ಇರುತ್ತದೆ. ಆದ್ದರಿಂದ ಸಹಕಾರಿ ಸಂಘಟನೆಗೆ ಪ್ರಜಾಪ್ರಭುತ್ವ ಸಂಘಟನೆಗಳು ಎಂದು ಕರೆಯುತ್ತಾರೆ.

೧.೨. ಇ) ಪರಸ್ಪರ ಸಹಾಯದ ಮುಖಾಂತರ ಸ್ವ-ಸಹಾಯ :

ಸಹಕಾರಿ ಸಂಘಟನೆಯ ಸದಸ್ಯರು ತಮ್ಮ ಆರ್ಥಿಕ ಇಚ್ಛೆಯನ್ನು ಬೆಳೆಸಿಕೊಳ್ಳುವ ಮತ್ತು ಈಡೇರಿಸಿಕೊಳ್ಳುವ ಮಹತ್ವಾಕಾಂಕ್ಷಿಯಿಂದ ಸಂಘಟಿತಗೊಂಡಿರುತ್ತಾರೆ. ಸಹಕಾರಿ ಸಂಘಟನೆಯು ಸ್ವಯಂ ಸಂಘಟನೆಯಾಗಿದ್ದು, ವ್ಯಕ್ತಿಗಳು ಈ ಸಂಘಟನೆಯಲ್ಲಿ ಪರಸ್ಪರ ಸಹಾಯದಿಂದ ಸ್ವ-ಕಾರ್ಯ ತತ್ವಗಳನ್ನು ಕಾರ್ಯರೂಪದಲ್ಲಿ ತರುತ್ತಾರೆ. ಅಂದರೆ ಸಹಕಾರ ಸಂಘಟನೆಯ ಮೂಲ ತತ್ವವು ಪ್ರತಿಯೊಬ್ಬರು ಎಲ್ಲರಿಗಾಗಿ ಎಲ್ಲರು ಪ್ರತಿಯೊಬ್ಬರಿಗಾಗಿ ಅನ್ನುವದೇ ಆಗಿದೆ. ಈ ಉದ್ದೇಶದಿಂದ ಸಂಘಟಿತಗೊಂಡ ಸದಸ್ಯರು ಒಬ್ಬರಿಗೊಬ್ಬರು ಸಹಾಯ ಮಾಡುತ್ತಾರೆ.

೧.೨ ಈ) ಸರ್ವ ಸದಸ್ಯರ ಕಲ್ಯಾಣ :

ಸಹಕಾರಿ ಸಂಘಟನೆಯ ಮುಖ್ಯ ಉದ್ದೇಶ ಸರ್ವ ಸದಸ್ಯರ ಕಲ್ಯಾಣ ಇಂತಹ ಸಂಘಟನೆಯಲ್ಲಿ ಪ್ರತಿಯೊಬ್ಬ ಸದಸ್ಯನು ತನ್ನ ವೈಯಕ್ತಿಕ ಆಸಕ್ತಿಯನ್ನು ಎಲ್ಲ ಸದಸ್ಯರ ಸಲುವಾಗಿ ತ್ಯಾಗ ಮಾಡುತ್ತಾನೆ. ಸರ್ವ ಸದಸ್ಯರ ಕಲ್ಯಾಣ ಮತ್ತು ವೈಯಕ್ತಿಕ ಕಲ್ಯಾಣಗಳ ನಡುವೆ ಸಂಬಂಧ

ಇರುವುದರಿಂದ ಸಂತೋಷದ ಹೊಂದಾಣಿಕೆ ಮೂಡಿಬರುತ್ತದೆ. ಇದರ ಉದ್ದೇಶವೆಂದರೆ ಸರ್ವರ ಒಳ್ಳೆಯದಕ್ಕಾಗಿ ಸಮೂಹ ಚಟುವಟಿಕೆಗಳನ್ನು ಏರ್ಪಡಿಸುವದು.

೧.೨. ಉ) ಸೇವಾ ಮನೋಭಾವನೆ :

ಪ್ರೋ. ಡಲ್‌ಮಕಜಿ ಅವರ ಸಹಕಾರವು ಕೇವಲ ಉದ್ಯೋಗಕಷ್ಟೇ ಮೀಸಲಾಗಿರದೆ, ಸಭ್ಯತೆಯನ್ನು, ಒಡನಾಡಿತನವನ್ನು ಮತ್ತು ಸಹಕಾರ ಭಾವನೆಗಳನ್ನು ಉತ್ತೇಜಿಸುವಂತಹ ಸಾಧನವಾಗಿದೆ ಎಂದು ಹೇಳಿದ್ದಾರೆ. ಸಹಕಾರಿ ಸಂಘಟನೆಗಳು ಸಾಲ ಕೊಡುವವರ ಮುಖಾಂತರ ಲಾಭ ಪಡೆಯುವ ಉದ್ದೇಶಕ್ಕಾಗಿ ಅಸ್ತಿತ್ವದಲ್ಲಿದ್ದ ಸಂಘಟನೆಯಾಗಿರದೆ, ಸಾಹುಕಾರರ ಮತ್ತು ಲೇವಾದೇವಿ ಭಾರವಾದ ಬಡ್ಡಿಯಿಂದ ಶೋಷಣೆಗೆ ಒಳಗಾಗುತ್ತಿರುವ ವ್ಯಕ್ತಿಗಳನ್ನು ಪಾರು ಮಾಡಿ ಸಂರಕ್ಷಿಸುತ್ತದೆ.

೧.೨. ಊ) ಲಾಭ ಹಂಚಿಕೆ :

ಇನ್ನೂಳಿದ ಉದ್ಯೋಗಗಳಂತೆ ಲಾಭ ಗಳಿಸುವದು ಸಹಕಾರಿ ಸಂಘಟನೆಯ ಮುಖ್ಯ ಉದ್ದೇಶವಾಗಿರದಿದ್ದರೂ ಬಂದ ಲಾಭವನ್ನು ಸಂಘದ ಶೇರುದಾರರಿಗೆ ಅವರ ವ್ಯವಹಾರಕ್ಕನುಗುಣವಾಗಿ ಹಂಚುವದು.

೧.೨. ಎ) ಮುಕ್ತ ಸದಸ್ಯತ್ವ :

ಸಹಕಾರಿ ಸಂಘಟನೆಗಳು ಸದಸ್ಯರ ಒಳ್ಳೆಯದಕ್ಕಾಗಿ ಅಸ್ತಿತ್ವದಲ್ಲಿ ಬಂದಿವೆ. ಪರಸ್ಪರ ಸಹಾಯದಿಂದ ಕೂಡಿ ಕೆಲಸ ಮಾಡುವದೇ ಸಹಕಾರಿ ಸಂಘಟನೆಯ ತತ್ವ, ಈ ತತ್ವಗಳನ್ನು ಅಳವಡಿಸಿಕೊಂಡು ಸಾಮಾನ್ಯ ಆಸಕ್ತಿಯಿಂದ ಕಾರ್ಯ ನೆರವೇರಿಸಲು ಬಯಸಿ ಬಂದ ಯಾವುದೇ ವ್ಯಕ್ತಿ ಇದರ ಸದಸ್ಯನಾಗುತ್ತೇನೆ. ಅನುಕೂಲತೆಯನ್ನು ಪಡೆಯಲು ಬಯಸಿ ಬಂದ ವ್ಯಕ್ತಿಗೆ ಇಂತಹ ಸಂಘಟನೆಯಲ್ಲಿ ಸದಸ್ಯತ್ವ ದೊರಕುತ್ತದೆ. ಆದ್ದರಿಂದ ಸಹಕಾರಿ ಸಂಘಟನೆಗಳ ಬಾಗಿಲಗಳು ಪ್ರತಿಯೊಬ್ಬ ಸದಸ್ಯನಿಗೆ ತೆರೆದಿರುತ್ತವೆ. ಮತ್ತು ಲಿಂಗ ಬೇಧಗಳನ್ನು ಪರಿಗಣಿಸದೇ ವ್ಯಕ್ತಿಯು ತನ್ನ ಸಾಮಾನ್ಯ ಅವಶ್ಯಕತೆಯನ್ನು ಈಡೇರಿಸಿಕೊಳ್ಳಲು ಇಂತಹ ಸಂಘಟನೆಯಲ್ಲಿ ಸದಸ್ಯತ್ವವನ್ನು ಪಡೆಯಬಹುದು.

೧.೨. ಏ) ಮಿತವ್ಯಯ :

ಸಹಕಾರಿ ಸಂಘವು ತನ್ನ ಸದಸ್ಯರ ಮಿತವ್ಯಯ ಮನೋಭಾವನೆಯನ್ನು ಬೆಳೆಸಿಕೊಳ್ಳುವಂತೆ ಯಾವಾಗಲು ಪ್ರಯತ್ನಿಸುತ್ತದೆ. ಮಿತವ್ಯಯವು ಸಾಲದ ಬಾರವನ್ನು ಕಡಿಮೆ ಮಾಡುತ್ತದೆ. ಈ ರೀತಿ ಮಿತವ್ಯಯವು ಸಹಕಾರಿ ಸಂಘದ ಅವಿಭಾಜ್ಯ ಅಂಗ. ಯಾವುದೇ ವ್ಯಕ್ತಿ ಸದಸ್ಯನಾಗಲು ಬಂದರೆ ಅವನಿಗೆ ಮಿತವ್ಯಯದ ಪಾಠವನ್ನು ಕಲಿಸುತ್ತದೆ.

೧.೨. ಐ) ಪ್ರಚಾರ :

ಸಾಮಾನ್ಯವಾಗಿ ಸಹಕಾರಿ ಸಂಘಟನೆಯ ಸದಸ್ಯತ್ವವನ್ನು ಪಡೆದುಕೊಂಡವರು ಬಡವರು, ಅಶಿಕ್ಷಿತರು ಮತ್ತು ಅಜ್ಞಾನಿಗಳು ಆಗಿರುತ್ತಾರೆ. ಇವರಿಗೆ ಸಹಕಾರದ ಬಗೆಗೆ ತಿಳುವಳಿಕೆ ಇರುವದು

ವಿರಳ. ಆದ್ದರಿಂದ ಸಹಕಾರಿ ಸಂಘಟನೆಯು ಇಂತಹ ವ್ಯಕ್ತಿಗಳಿಗೆ ಸಂಘಟನೆಯ ಅರಿವನ್ನು ಮೂಡಿಸಿ ಜ್ಞಾನವನ್ನು ಒದಗಿಸುವ ಪ್ರಯತ್ನ ಮಾಡುತ್ತದೆ.

೧.೨. ಒ) ಪರಿಮಿತ ಬಡ್ಡಿ :

ಸಹಕಾರಿ ಸಂಘಗಳು ಸದಸ್ಯರು ರೂಪಿಸಿದ ಶೇರು ಬಂಡವಾಳದ ಮೇಲೆ ಸಾಲವನ್ನು ನೀಡಿ, ಅದಕ್ಕೆ ಪರಿಮಿತವಾದ ಬಡ್ಡಿಯನ್ನು ಹೇರುವದು. ಇದರಿಂದ ಬಡಜನರಿಗೆ ಯಾವುದೇ ಹೆಚ್ಚಿನ ಭಾರವಾಗುವದಿಲ್ಲ.

೧.೨. ಓ) ಬಂಧುತ್ವ :

ಬಂಧುತ್ವ ಇಲ್ಲದೇ ಇದ್ದರೆ ಯಾವುದೇ ಕಾರ್ಯವು ಆಗುವದಿಲ್ಲ. ಅದರಲ್ಲಿಯು ಸಹಕಾರಿ ಸಂಘಗಳಲ್ಲಿ ಮುಖ್ಯವಾಗಿ ಬಂಧುತ್ವ ಅವಶ್ಯವಾಗಿದೆ. ಏಕೆಂದರೆ ಸಹಕಾರಿ ಚಳುವಳಿಯಲ್ಲಿ ವಿವಿಧ ವರ್ಗಗಳ ಜನರು ಇರುವುದರಿಂದ ಅವರಲ್ಲಿ ಬಂಧುತ್ವ ಅವಶ್ಯವಾಗಿ ಬೇಕು.

೧.೨. ಔ) ಸಮಾನತೆ :

ಸಹಕಾರಿ ಸಂಘದ ಅತಿ ಮಹತ್ವದ ತತ್ವ ಸಮಾನತೆಯಾಗಿರುವದು. ಇಲ್ಲಿ ಯಾವುದೇ ರೀತಿಯ ಭೇದ ಭಾವವಿಲ್ಲದೆ ಸಮಾನತೆಯ ಮೂಲ ಅಂಶವಾಗಿದೆ. ಎಲ್ಲ ಜನರ ಅಭಿವೃದ್ಧಿಗೆ ಸಹಕಾರ ಸರ್ವ ಅಂಶಗಳನ್ನು ಕಲ್ಪಿಸಿಕೊಡುತ್ತದೆ.

೧.೨. ಅಂ) ಉಳಿತಾಯಕ್ಕೆ ಪ್ರೋತ್ಸಾಹ :

ಜನತೆಯಲ್ಲಿ ಉಳಿತಾಯದ ಮನೋಭಾವನೆಯನ್ನು ಬೆಳೆಸುವದೇ ಮುಖ್ಯ ಗುರಿ. 'ಗಳಿಕೆಯಲ್ಲಿದ್ದು ಉಳಿಕೆಯಲ್ಲಿ' ಎಂಬುವದೇ ಸಹಕಾರದ ಮಾತಾಗಿದೆ. ಗಳಿಕೆಯನ್ನು ಮಾಡಲು ಪ್ರೋತ್ಸಾಹವನ್ನು ನೀಡುವದು, ಒಂದು ಗಳಿಕೆಯಲ್ಲಿಯು ಉಳಿತಾಯ ಮಾಡುವದು, ಸಹಕಾರ ಕಲ್ಪಿಸಿಕೊಡುವದು, ಇದರಿಂದ ಜನರಲ್ಲಿ ಸ್ವಾವಲಂಬನೆ ಗುಣವನ್ನು ಬೆಳೆಸುತ್ತದೆ.

ಈ ರೀತಿಯಾಗಿ ಸಹಕಾರವು ಸೈದ್ಧಾಂತಿಕ ನಿಯಮಗಳನ್ನು ಹೊಂದಿರುತ್ತದೆ. ಅದರ ಅನುಗುಣವಾಗಿ ಪ್ರತಿಯೊಂದು ಸಂಘಗಳು ಇಂದು ಕಾರ್ಯನಿರ್ವಹಿಸುತ್ತವೆ.[೧]

೧.೩. ಸಾಹಿತ್ಯದ ಪುನರಾವಲೋಕನ :

ಸಹಕಾರಕ್ಕೆ ಸಂಬಂಧಿಸಿದಂತೆ ಈಗಾಗಲೇ ಹಲವಾರು ಅಧ್ಯಯನಗಳನ್ನು ಅನೇಕ ವಿದ್ವಾಂಸರು ಕೈಕೊಂಡಿದ್ದಾರೆ. ಜಾಜಿಯವರು ಕೃಷಿ ಅಭಿವೃದ್ಧಿಯಲ್ಲಿ ಸಾಲ ನೀಡುವ ಸಹಕಾರಿ ಸಂಘಗಳ ಪಾತ್ರ ೧೯೭೬ ರಲ್ಲಿ ಅಧ್ಯಯನ ಮಾಡಿದ್ದಾರೆ. ಅವರು ವ್ಯವಸಾಯಕ್ಕೆ, ರೈತರಿಗೆ ಯಾವ ಸಮಯದಲ್ಲಿ ಸಾಲದ ಅವಶ್ಯಕತೆ ಇರುತ್ತದೆ. ಅದರಂತೆ ಸಂಘಗಳು ರೈತರಿಗೆ ಯಾವ ರೀತಿಯ ಸಾಲವನ್ನು ನೀಡುತ್ತವೆ. ಎಂಬುದನ್ನು ಅಂಕಿ ಅಂಶಗಳ ಮುಖಾಂತರ ತಿಳಿಸಿದ್ದಾರೆ. ಆಧುನಿಕ ಕೃಷಿಗೆ ಹೋಲಿಸಿದರೆ ಇವರ ಅಧ್ಯಯನ ಅಷ್ಟೊಂದು ಪ್ರಯೋಜನಕಾರಿಯಾಗಿಲ್ಲ. ಇದು ಹಳೆಯ ಅಂಕಿ ಅಂಶಗಳನ್ನು ಒಳಗೊಂಡ ಪ್ರಾಚೀನ ವಿಶ್ಲೇಷಣೆಯನ್ನು ಹೊಂದಿದೆ. ಮಹಾರಾಷ್ಟ್ರದಲ್ಲಿ ಗ್ರಾಮೀಣ ಮತ್ತು ಸಹಕಾರಿ ನಾಯಕತ್ವ, ಶ್ರೀ ವಸಂತದಾದಾ ಪಾಟೀಲರು ಒಂದು

ಅಧ್ಯಯನವನ್ನು ೧೯೯೨ ರಲ್ಲಿ ಮಾಡಿದ್ದಾರೆ. ಇವರ ಅಧ್ಯಯನವು ಗ್ರಾಮೀಣ ನಾಯಕತ್ವ ಮತ್ತು ಸಹಕಾರಿ ನಾಯಕತ್ವಕ್ಕೆ ಮಾತ್ರ ಹೆಚ್ಚಿನ ಒತ್ತು ನೀಡಿದ್ದಾರೆ. ನಾಯಕತ್ವ ಮತ್ತು ಸಹಕಾರ ಎಂಬ ಅಂಶಗಳನ್ನು ಅವರು ಚೆನ್ನಾಗಿ ವಿವರಿಸಿದ್ದಾರೆ. ಆದರೆ ಜನರು ಸಹಕಾರ ಸಂಘಗಳಿಂದ ಆದಾಯ ಮತ್ತು ಜೀವನ ಮಟ್ಟವನ್ನು ಯಾವರೀತಿಯಾಗಿ ಹೆಚ್ಚಿಸಿಕೊಳ್ಳುತ್ತಾರೆ, ಎಂಬುದನ್ನು ತಿಳಿಸುವಲ್ಲಿ ಅವರು ವಿಫಲರಾಗಿದ್ದಾರೆ. ಆಂಧ್ರಪ್ರದೇಶದ ಸಹಕಾರ ಆಡಳಿತ ಜಿಲ್ಲಾ ಕೇಂದ್ರ ಒಂದು ಅಧ್ಯಯನವನ್ನು ೧೯೯೨ ರಲ್ಲಿ ರವೀಂದ್ರ ಪ್ರಸಾದರು ಮಾಡಿದ್ದಾರೆ. ಅವರು ಸಹಕಾರ ಆಡಳಿತ ಯಾವ ರೀತಿ ತಮ್ಮ ಆರ್ಥಿಕ ಅಭಿವೃದ್ಧಿಯನ್ನು ಗೊ ಳಿಸುತ್ತದೆ. ಎಂಬುದನ್ನು ತಿಳಿಸಿದ್ದಾರೆ. ಇವರ ಅಧ್ಯಯನ ಕ್ಷೇತ್ರ ಅತ್ಯಂತ ಸೀಮಿತವಾಗಿರುತ್ತದೆ.

ಈ ರೀತಿಯಾಗಿ ದೇಶದಲ್ಲಿ ವಿವಿಧ ರಾಜ್ಯಗಳಲ್ಲಿ ಅನೇಕ ವಿದ್ವಾಂಸರು ಸಹಕಾರದ ಬಗ್ಗೆ ಅಧ್ಯಯನ ನಡೆಸಿದ್ದಾರೆ. ನಮ್ಮ ರಾಜ್ಯದ ವಿದ್ವಾಂಸರು ಸಹಿತ ಸಹಕಾರಕ್ಕೆ ಸಂಬಂಧಿಸಿದಂತೆ ಹಲವಾರು ಅಧ್ಯಯನಗಳನ್ನು ಮಾಡಿರುವರು. ಅದರಲ್ಲಿ ಎಸ್.ಎಸ್. ಹೂಗಾರ, ಮಿಸ್. ವಿದ್ಯಾ. ಡಿ. ನಾಯಕ, ಪಾಂಡುರಂಗ ವೆಂಕಟರಮಣ ನಾಯಕ, ಎಸ್.ಎ. ಗಣಿ, ಎ.ಪಿ. ಬಿರಾದರ ಪಾಟೀಲ ಪ್ರಮುಖರಾಗಿದ್ದಾರೆ.

ಎಸ್. ಎಸ್. ಹೂಗಾರ ಅವರು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಹಣಕಾಸಿನ ವಿಶ್ಲೇಷಣೆಗಳಿಗೆ ಕರ್ನಾಟಕ ಒಂದು ಅಧ್ಯಯನವನ್ನು ಅವರು ಮಾಡಿದ್ದಾರೆ. ಅವರು ಕೇಂದ್ರ ಸಹಕಾರಿ ಬ್ಯಾಂಕಿನ ಪ್ರಾರಂಭ ಮತ್ತು ಆಂದೋಲನದ ಬಗ್ಗೆ ತಿಳಿಸಿದ್ದಾರೆ. ಅವರು ತಮ್ಮ ಅಧ್ಯಯನಕ್ಕೆ ಕೇವಲ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕನ್ನು ಕೇಂದ್ರವಾಗಿ ಇಟ್ಟುಕೊಂಡು ಅಂಕಿ ಅಂಶಗಳನ್ನು ವಿಶ್ಲೇಷಿಸಿದ್ದಾರೆ. ಇವರು ಇತರೆ ಸಹಕಾರಿ ಪತ್ತಿನ ಸಂಘಗಳ ಬಗ್ಗೆ ಯಾವುದೇ ಮಾಹಿತಿಯನ್ನು ನೀಡಿರುವದಿಲ್ಲ. ಅದಲ್ಲದೇ ಪತ್ತೇತರ ಸಂಘಗಳ ಬಗ್ಗೆ ತಿಳಿಸಿಕೊಡುವಲ್ಲಿ ವಿಫಲವಾಗಿದ್ದಾರೆ. ಅದರಂತೆ ೧೯೯೦ ರಲ್ಲಿ ನಗರ ಸಹಕಾರಿ ಬ್ಯಾಂಕುಗಳು ವಿಶೇಷವಾಗಿ ಅಂಕೋಲಾ ನಗರ ಸಹಕಾರಿ ಬ್ಯಾಂಕಿನ ಒಂದು ಅಧ್ಯಯನವನ್ನು ಮಿಸ್. ವಿದ್ಯಾ. ಡಿ. ನಾಯಕ ಮಾಡಿದ್ದಾರೆ. ಇವರು ನಗರ ಬ್ಯಾಂಕುಗಳ ಪ್ರಪಂಚದಲ್ಲಿ ಯಾವಾಗ ಪ್ರಾರಂಭವಾದವು. ಅವುಗಳು ಭಾರತದಲ್ಲಿ ಪ್ರಾರಂಭ ಮತ್ತು ಬೆಳವಣಿಗೆಯ ಬಗ್ಗೆ ತಿಳಿಸಿದ್ದಾರೆ. ಇವರು ಕೃಷಿ ಪತ್ತಿನ ಸಂಘಗಳ ಬಗ್ಗೆಯಾಗಲಿ ವ್ಯವಸಾಯ ಸಹಕಾರಿ ಸಂಘಗಳ ಬಗ್ಗೆ ಯಾವದೇ ಮಾಹಿತಿ ನೀಡಲು ವಿಫಲವಾಗಿದ್ದಾರೆ.

ಅದರಂತೆ ಪಾಂಡುರಂಗ ವೆಂಕಟರಾಮಣ ನಾಯಕ ಅವರು ಉತ್ತರ ಕನ್ನಡ ಜಿಲ್ಲಾ ನಗರ ಸಹಕಾರಿ ಬ್ಯಾಂಕುಗಳ ಅಧ್ಯಯನವನ್ನು ೧೯೯೫ ರಲ್ಲಿ ಮಾಡಿದ್ದಾರೆ. ಇವರು ನಗರ ಸಹಕಾರಿ ಬ್ಯಾಂಕುಗಳ ಸಂಘಟನೆ, ರಚನೆ ಮತ್ತು ಚಳುವಳಿಯ ಬಗ್ಗೆ ಅಧ್ಯಯನ ಮಾಡಿದ್ದಾರೆ. ಇವರ ಅಧ್ಯಯನ ಆ ಜಿಲ್ಲೆಗೆ ಮಾತ್ರ ಸೀಮಿತವಾಗಿದೆ. ಇವರು ಇನ್ನಿತರ ಸಹಕಾರಿ ಸಂಘಗಳ ಬಗ್ಗೆ ಚಿತ್ರಣ ಕೊಡಲು ವಿಫಲವಾಗಿದ್ದಾರೆ. ಅದರಂತೆ ೧೯೮೯ ರಲ್ಲಿ ವಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ತಾಲೂಕಿನ ಪ್ರಾಥಮಿಕ ಸಹಕಾರಿ ಪತ್ತಿನ ಸಂಘಗಳ ಒಂದು

ಅಧ್ಯಯನವನ್ನು ಎಸ್. ಎ. ಗಣಿ ಯವರು ಮಾಡಿದ್ದಾರೆ. ಇವರು ಪ್ರಪಂಚದಲ್ಲಿ, ಭಾರತದಲ್ಲಿ, ಕರ್ನಾಟಕದಲ್ಲಿ ಮತ್ತು ವಿಜಾಪುರ ಜಿಲ್ಲೆಯಲ್ಲಿ ಸಹಕಾರ ಆಂದೋಲನದ ಆರಂಭ ಮತ್ತು ಬೆಳವಣಿಗೆಯನ್ನು ತಿಳಿಸಿದ್ದಾರೆ. ಆದರೆ ಇವರ ಅಧ್ಯಯನವು ಅಂಕಿ ಅಂಶಗಳನ್ನು ವಿಶ್ಲೇಷಿಸುವಲ್ಲಿ ವಿಫಲವಾಗಿದೆ. ಅವರು ಕೇವಲ ಬಸವನ ಬಾಗೇವಾಡಿ ತಾಲೂಕಿನ ಕೋಲಾರ, ಗೂಳಸಂಗಿ ವ್ಯವಸಾಯ ಸೇವಾ ಸಂಘಗಳ ಬಗ್ಗೆ ಮಾತ್ರ ಅಂಕಿ ಅಂಶಗಳನ್ನು ವಿಶ್ಲೇಷಿಸಿದ್ದಾರೆ. ಇವರ ಅಧ್ಯಯನವು ಪತ್ತೆತರ ಸಹಕಾರಿ ಸಂಘಗಳ ಬಗ್ಗೆ ತಿಳಿಸಿಕೊಡುವಲ್ಲಿ ವಿಫಲವಾಗಿದೆ. ಅದರಂತೆ ೧೯೯೦ ರಲ್ಲಿ ಕೃಷಿ ಮಾರುಕಟ್ಟೆಯಲ್ಲಿ ಸಹಕಾರದ ಪಾತ್ರ ಗದಗ ಕೋ-ಆಫ್‌ರೇಟಿವ್ಸ ಕಾಟನ ಸೊಸಾಯಿಟಿ ಲಿ. ಒಂದು ಅಧ್ಯಯನ ಮಾಡಿದ್ದಾರೆ. ಇವರು ಸಹಕಾರಿ ರಂಗದಲ್ಲಿ ಕೃಷಿ ಮಾರುಕಟ್ಟೆಯು ಯಾವ ರೀತಿಯಾಗಿ ರೈತರ ಆದಾಯವನ್ನು ಹೆಚ್ಚಿಸಿಕೊಳ್ಳವಲ್ಲಿ ಸಹಾಯ ಮಾಡುತ್ತದೆ, ಎಂಬುದನ್ನು ತಿಳಿಸಿ ಗದಗ ಮಿಲ್ಲಿನ ಅಂಕಿ ಅಂಶಗಳನ್ನು ವಿಶ್ಲೇಷಿಸಿದ್ದಾರೆ. ಆದರೆ ಅವರು ಸಹಕಾರದ ಮಹತ್ವವನ್ನು ವಿವರಿಸಿಲ್ಲ.

ಅದರಂತೆ ೧೯೯೦ ರಲ್ಲಿ ಎ. ಪಿ. ಬಿರಾದರ ಪಾಟೀಲರು ಸಹಕಾರಿ ಸಕ್ಕರೆ ಕಾರಖಾನೆಗಳ ಬೆಳಗಾವಿ ಜಿಲ್ಲೆಯ ಒಂದು ಅಧ್ಯಯನವನ್ನು ಮಾಡಿದ್ದಾರೆ. ಅವರು ಸಕ್ಕರೆ ಕಾರ್ಖಾನೆಗಳು ಸಹಕಾರದ ರಂಗದಲ್ಲಿ ಎಷ್ಟೊಂದು ಅನೂಕೂಲಕರ ಮತ್ತು ಲಾಭದಾಯಕ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಆದರೆ ಇವರ ಅಧ್ಯಯನವು ಬೆಳಗಾವಿ ಜಿಲ್ಲೆಗೆ ಮಾತ್ರ ಸಿಮೀತವಾಗಿದೆ. ಅದಲ್ಲದೆ, ಹೆಚ್ಚಿನ ಮಾಹಿತಿಯನ್ನು ಒದಗಿಸುವಲ್ಲಿ ವಿಫಲವಾಗಿದೆ. ಅದಲ್ಲದೆ ೧೯೯೭ ರಲ್ಲಿ ಬಸವರಾಜ ಅರ್ಜುನಪ್ಪಾ ಅಳ್ಳಗಿ ಅವರು ಸಹಕಾರಿ ಪತ್ತಿನ ಸಂಘಗಳು ಶ್ರೀ ಸಿದ್ದೇಶ್ವರ ಸಹಕಾರಿ ಬ್ಯಾಂಕ ನಿಯಮಿತ ವಿಜಾಪುರ ಒಂದು ಅಧ್ಯಯನವನ್ನು ಮಾಡಿದ್ದಾರೆ. ಇವರು ಸಹಕಾರಿ ರಂಗದ ಬೆಳವಣಿಗೆ ಮತ್ತು ಆಂದೋಲನದ ಬಗ್ಗೆ ತಿಳಿಸಿದ್ದಾರೆ. ಆದರೆ ಇವರ ಅಧ್ಯಯನವು ಸಂಕುಚಿತವಾಗಿದೆ. ಅದಲ್ಲದೇ ಪತ್ತು ನೀಡದ ಸಹಕಾರ ಸಂಘಗಳ ಬಗ್ಗೆ ತಿಳಿಸಿಕೊಡುವಲ್ಲಿ ವಿಫಲವಾಗಿದೆ.

೧.೪. ಪ್ರಸ್ತುತ ಅಧ್ಯಯನ :

ಪ್ರಸ್ತುತ ಅಧ್ಯಯನವಾದ **'ಆರ್ಥಿಕಾಭಿವೃದ್ಧಿಯಲ್ಲಿ ಸಹಕಾರ ಸಂಘಗಳ ಪಾತ್ರ ವಿಶೇಷವಾಗಿ ಹುಕ್ಕೇರಿ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘ** ನಿಯಮಿತ, **ಹುಕ್ಕೇರಿ'** ಒಂದು ಅಧ್ಯಯನವು ಸಹಕಾರಿ ಕ್ಷೇತ್ರದ ಎಲ್ಲ ವಿಧಗಳಲ್ಲಿ ಸಂಪೂರ್ಣ ವಿವರಣೆಯನ್ನು ನೀಡಿರುತ್ತದೆ. ಸಹಕಾರಿ ಚಳುವಳಿಯ ಆರಂಭ, ಅವುಗಳ ತತ್ವಗಳು ಕೃಷಿ ಮತ್ತು ಕೃಷಿಯೇತರ ಪತ್ತಿನ ಸಂಘಗಳು ಕರ್ನಾಟಕದಲ್ಲಿ ಮತ್ತು ಬೆಳಗಾವಿ ಜಿಲ್ಲೆಯಲ್ಲಿ ಯಾವ ರೀತಿಯಾಗಿ ಕಾರ್ಯ ನಿರ್ವಹಿಸುತ್ತವೆ. ಅದರಂತೆ ಸಹಕಾರ ಸಂಘಗಳ ಪ್ರಗತಿ ಸಹಕಾರ ಸಂಘಗಳ ರಚನೆಯ ಬಗ್ಗೆ ಸಂಪೂರ್ಣ ವಿವರಣೆಯನ್ನು ಹೊಂದಿರುತ್ತದೆ. ಹುಕ್ಕೇರಿ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘ ನಿಯಮಿತ ಹುಕ್ಕೇರಿ ಇದರ ಕಾರ್ಯ ನಿರ್ವಹಣೆಯ ಬಗ್ಗೆ ಸಂಪೂರ್ಣ ವಿವರಣೆಯನ್ನು ಈ ಅಧ್ಯಯನವು ಒಳಗೊಂಡಿದೆ.

೧.೫. ಅಧ್ಯಯನದ ಉದ್ದೇಶಗಳು :

೧. ಗ್ರಾಮೀಣಾಭಿವೃದ್ಧಿಯಲ್ಲಿ ಸಹಕಾರ ರಂಗದ ಪಾತ್ರವನ್ನು ತಿಳಿದುಕೊಳ್ಳುವದು.

೨. ಪ್ರಸ್ತುತ ಹುಕ್ಕೇರಿ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘವು ತನ್ನ ಕ್ಷೇತ್ರದ ಜನರ ಆರ್ಥಿಕ ಸಾಮಾಜಿಕ ಕ್ಷೇತ್ರಗಳನ್ನು ಉನ್ನತಮಟ್ಟಕ್ಕೇರಿಸಲು ಯಾವ ರೀತಿಯಾಗಿ ತನ್ನ ಪಾತ್ರವನ್ನು ನಿರ್ವಹಿಸುತ್ತದೆ ಎಂಬುದನ್ನು ತಿಳಿದುಕೊಳ್ಳುವದು.

೩. ಪ್ರಸ್ತುತ ಹುಕ್ಕೇರಿ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘ ನಿಯಮಿತ ಹುಕ್ಕೇರಿ ಇದರ ಕಾರ್ಯ ವೈಖರಿಯ ಬಗ್ಗೆ ತಿಳಿದುಕೊಳ್ಳುವದು.

೪. ಜನರ ಆರ್ಥಿಕಾಭಿವೃದ್ಧಿಯಲ್ಲಿ ಈ ಸಂಘವು ವಿದ್ಯುಚ್ಛಕ್ತಿ ವಿತರಣೆಯ ಕಾರ್ಯವನ್ನು ಯಶಸ್ವಿಯಾಗಿ ಮುನ್ನಡೆಸುತ್ತದೆ ಎಂಬುದನ್ನು ತಿಳಿಯುವದು.

೧.೬. ಪೂರ್ವ ಗ್ರಹಿಕೆಗಳು :

೧. ಸಹಕಾರಿ ಚಳುವಳಿಯಿಂದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯಾಗುವದು.

೨. ಸಹಕಾರಿ ಚಳುವಳಿಯಿಂದ ಸಾಮಾನ್ಯ ಜನರಲ್ಲಿ ಪ್ರಜಾಪ್ರಭುತ್ವದ ಕಲ್ಪನೆ ಮೂಡುತ್ತದೆ.

೩. ಹುಕ್ಕೇರಿ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘವು ವಿದ್ಯುಚ್ಛಕ್ತಿಯನ್ನು ಗ್ರಾಹಕರ ಅಭಿರುಚಿಗೆ ಅನುಗುಣವಾಗಿ ವಿತರಿಸಲು ಸಮರ್ಥವಾಗಿದೆ.

೪. ಸಂಘದ ವಿದ್ಯುಚ್ಛಕ್ತಿ ವಿತರಣೆಯ ಆಡಳಿತದ ನೀತಿಗಳು ಅತ್ಯಂತ ಪರಿಣಾಮಕಾರಿಯಾಗಿವೆ.

೫. ಸಂಘದ ವಿದ್ಯುಚ್ಛಕ್ತಿ ವಿತರಣೆಯ ಕಾರ್ಯಕ್ಕೆ ಸರಕಾರ ಪ್ರೋತ್ಸಾಹ ನಿಡುತ್ತಿದೆ.

೧.೭. ಅಧ್ಯಯನದ ವಿಧಾನ :

ಈ ಅಧ್ಯಯನಕ್ಕೆ ಬೇಕಾಗುವ ಅಂಕಿ ಅಂಶಗಳನ್ನು ಪ್ರಾಥಮಿಕ ಮತ್ತು ದ್ವಿತಿಯ ಅಥವಾ ಅನುಷಂಗಿಕ ಪದ್ದತಿಗಳ ಮೂಲಕ ಪಡೆಯಲಾಗಿದೆ. ಪ್ರಾಥಮಿಕ ಅಂಕಿ ಅಂಶಗಳನ್ನು ಸಹಕಾರಿ ನಾಯಕರು, ವ್ಯವಸ್ಥಾಪಕರು, ವಿಶೇಷಾಧಿಕಾರಿಗಳಿಂದ ಮತ್ತು ಹೆಸ್ಕಾಂ ಅಧಿಕಾರಿಗಳೊಡನೆ ಚರ್ಚಿಸಿ ನೇರವಾಗಿ ಪಡೆಯಲಾಗಿದೆ.

ಅದರಂತೆ ಅನುಷಂಗಿಕ ಅಂಕಿ ಅಂಶಗಳನ್ನು ಸಂಘದ ವಾರ್ಷಿಕ ವರದಿಗಳು, ವಿವಿಧ ಯೋಜನಾಧಿಕಾರಿಗಳು, ಕಾನೂನು ಸಲಹೆಗಾರರು ಲೆಕ್ಕ ಪರಿಶೋಧಕರು, ಗ್ರಂಥಾಧಿಕಾರಿಗಳು, ಸಂಸ್ಥೆಯ ಸಿಬ್ಬಂಧಿಯವರಿಂದ, ಗುಮಾಸ್ತರಿಂದ ಇದಲ್ಲದೆ ಸಂಬಂಧ ಪಟ್ಟ ಇಲಾಖೆಗಳಾದ ಸಂಯುಕ್ತ ನಿಭಂದಕರು, ಸಹಕಾರ ಸಂಘಗಳು, ಪಟ್ಟಣ ಬ್ಯಾಂಕುಗಳ ವಿಭಾಗ ಬೆಂಗಳೂರು. ಉಪನಿಭಂಧಕರು ಸಹಕಾರ ಸಂಘಗಳು ಬೆಳಗಾವಿ, ಆರ್ಥಿಕ ಮತ್ತು ಸಾಂಘಿಕ ನಿರ್ದೇಶನಾಲಯ ಬೆಂಗಳೂರು, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ ಬೆಳಗಾವಿ ಇವರ ಕಛೇರಿಗಳಿಂದ, ಅದಲ್ಲದೇ ಕರ್ನಾಟಕ ಎಲೆಕ್ಟ್ರಿಸಿಟಿ ರೆಗ್ಯುಲೇಟರಿ ಕಮೀಶನ, ಅವರ ವಿದ್ಯುತ್ ದರಗಳ ವರದಿಗಳು ಮತ್ತು ಪುಸ್ತಕಗಳು, ದಿನಪತ್ರಿಕೆಗಳ ಮುಖಾಂತರ ಮತ್ತು ಲೇಖನಗಳ ಮೂಲಕ ಅಂಕಿ ಅಂಶಗಳನ್ನು ಪಡೆದುಕೊಳ್ಳಲಾಗಿದೆ.

೧.೮. ಅಧ್ಯಯನದ ಕ್ಷೇತ್ರ :

ಈ ಪಸ್ತುತ ಅಧ್ಯಯನಕ್ಕಾಗಿ ಹುಕ್ಕೇರಿ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘ ನಿಯಮಿತ ಹುಕ್ಕೇರಿ. ಈ ಸಂಸ್ಥೆಯನ್ನು ಅಧ್ಯಯನಕ್ಕಾಗಿ ಆಯ್ದುಕೊಳ್ಳಲಾಗಿದೆ. ಈ ಸಂಘವು ಕರ್ನಾಟಕ ರಾಜ್ಯದಲ್ಲಿಯೇ ಸಹಕಾರ ಕ್ಷೇತ್ರದಲ್ಲಿ ವಿದ್ಯುಚ್ಛಕ್ತಿ ವಿತರಣೆ ಮಾಡುವ ಏಕೈಕ ಸಂಘವಿರುತ್ತದೆ. ಈಗಾಗಲೇ ಗ್ರಾಮೀಣಾಭಿವೃದ್ಧಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಆರ್ಥಿಕಾಭಿವೃದ್ಧಿಯಲ್ಲಿ ಒಂದು ಮಾದರಿ ಸಂಸ್ಥೆಯಾಗಿ ಬೆಳೆದು ನಿಂತಿದೆ. ಈ ನಿಟ್ಟಿನಲ್ಲಿ ಆ ಸಂಸ್ಥೆಯ ಪ್ರಗತಿ, ಸಾಧನೆ, ಸಮಸ್ಯೆಗಳನ್ನು ತಿಳಿದುಕೊಳ್ಳಲು ಈ ಸಂಘವನ್ನು ಆಯ್ದುಕೊಳ್ಳಲಾಗಿದೆ.

೧.೯. ಅಧ್ಯಯನದ ವ್ಯಾಪ್ತಿ :

ಅ. ಈ ಅಧ್ಯಯನದಲ್ಲಿ ೧೯೭೦-೭೧ ರಿಂದ ೨೦೦೭-೦೮ ವರೆಗಿನ ಅಂಕಿ ಅಂಶಗಳನ್ನು ದಾಖಲಿಸಲಾಗಿದೆ.

ಬ. ಪ್ರಸ್ತುತ ಅಧ್ಯಯನವು ಹುಕ್ಕೇರಿ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘದ ಕಾರ್ಯಕ್ಷೇತ್ರಕ್ಕೆ ಸಿಮೀತವಾಗಿದೆ.

೧.೧೦. ಅಂಕಿ ಅಂಶಗಳ ವಿಶ್ಲೇಷಣೆ :

ಈ ಅಧ್ಯಯನದಲ್ಲಿ ಅಂಕಿ ಅಂಶಗಳ ವಿಶ್ಲೇಷಣೆಗಳನ್ನು ಅವಶ್ಯವಿದ್ದಲ್ಲಿ ಕೋಷ್ಠಕಗಳ ಮೂಲಕ ತೋರಿಸಲಾಗಿದೆ. ಅದರಂತೆ ಅಂಕಿ ಅಂಶಗಳ ವಿವರಣೆಯು ಮತ್ತು ಪರಿಣಾಮಗಳನ್ನು ವಿವರಿಸುವಲ್ಲಿ ಸಂಖ್ಯಾ ಶಾಸ್ತ್ರದ ಸಾಮಾನ್ಯ ಮೂಲಗಳಾದ ಸರಾಸರಿ ಮತ್ತು ಪ್ರತಿಶತ ಪದ್ಧತಿಗಳನ್ನು ಅಳವಡಿಸಿಕೊಳ್ಳಲಾಗಿದೆ.

೧.೧೧. ಅಧ್ಯಯನದ ಯೋಜನೆ :

ಈ ಅಧ್ಯಯನವು ಕ್ರಮಬದ್ಧವಾಗಿ ಐದು ಅಧ್ಯಯನಗಳನ್ನು ಒಳಗೊಂಡಿರುತ್ತದೆ. ಮೊದಲನೆಯ ಅಧ್ಯಾಯವು ಪೀಠಿಕೆ, ಸಹಕಾರ ಚಳುವಳಿಯ ಸೈದ್ಧಾಂತಿಕ ತಿರುಳು, ಅಧ್ಯಯನದ ಉದ್ದೇಶ, ಪೂರ್ವ ಗ್ರಹಿಕೆಗಳು, ಅಧ್ಯಯನದ ವಿಧಾನ, ಕ್ಷೇತ್ರ, ವ್ಯಾಪ್ತಿ, ಅಂಕಿ ಅಂಶಗಳ ವಿಶ್ಲೇಷಣೆ ಮತ್ತು ಅಧ್ಯಯನದ ಯೋಜನೆಗಳನ್ನು ಒಳಗೊಂಡಿರುತ್ತದೆ.

ಎರಡನೆಯ ಅಧ್ಯಾಯವು ಸಹಕಾರ ರಂಗ, ಇದರಲ್ಲಿ ಸಹಕಾರದ ವ್ಯಾಖ್ಯೆಗಳು, ಪ್ರಪಂಚದಲ್ಲಿ ಸಹಕಾರದ ಚಳುವಳಿ, ಯೋಜನಾವಧಿಯಲ್ಲಿ ಸಹಕಾರದ ಪ್ರಗತಿ, ಕರ್ನಾಟಕದಲ್ಲಿ ಸಹಕಾರದ ಚಳುವಳಿ, ಬೆಳಗಾವಿ ಜಿಲ್ಲೆಯಲ್ಲಿ ಸಹಕಾರ ಚಳುವಳಿ, ಸಹಕಾರದ ರಚನೆ, ಸಹಕಾರಿ ಸಂಘಗಳ ಪ್ರಕಾರಗಳ ಬಗ್ಗೆ ವಿವರಿಸಲಾಗಿದೆ.

ಮೂರನೆಯ ಅಧ್ಯಾಯವು ಹುಕ್ಕೇರಿ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘ ನಿಯಮಿತ ಹುಕ್ಕೇರಿ ಇದರ ಪಾತ್ರ, ಇದರಲ್ಲಿ ಪೀಠಿಕೆ, ಸ್ಥಾಪನೆ, ಭೌಗೋಳಿಕ ಸ್ಥಾನಮಾನ, ಸಂಘದ ಉದ್ದೇಶ

ಮತ್ತು ಗುರಿಗಳು, ಸಂಘದ ವಿಭಾಗಗಳು, ಸದಸ್ಯತ್ವ, ಸಂಘದ ಕಾರ್ಯಕ್ಷೇತ್ರ, ಹಣಕಾಸು ವ್ಯವಸ್ಥೆ, ವಿದ್ಯುತ್ ಖರೀದಿ ಮತ್ತು ಮಾರಾಟದ ದರಗಳು, ವಿದ್ಯುತ್ ವಿತರಣಾ ವ್ಯವಸ್ಥೆ, ಸಂಘದ ವಿದ್ಯುತ್ ಸಲಕರಣೆಗಳ ಉತ್ಪಾಧನಾ ಘಟಕಗಳು, ಸಂಘದ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆ, ಸಂಘದ ಪ್ರಸ್ತುತ ಸ್ಥಿತಿ ಮತ್ತು ಆರ್ಥಿಕ ಪ್ರಗತಿ ನೋಟವನ್ನು ಒಳಗೊಂಡಿದೆ.

ನಾಲ್ಕನೆಯ ಅಧ್ಯಾಯವು ಸಂಘದ ಕಾರ್ಯ ವೈಖರಿಯ ವೈಶಿಷ್ಟ್ಯತೆಗಳು ಇದರಲ್ಲಿ ಸಂಘದ ಸಂಘಟನೆ, ನಿರ್ದೇಶಕ ಮಂಡಳಿ, ಸಿಬ್ಬಂದಿ ವರ್ಗ ನೆರೆಯ ವಿದ್ಯುಚ್ಛಕ್ತಿ ವಿತರಿಸುವ ಇತರೆ ತಾಲೂಕುಗಳೊಡನೆ ಹೋಲಿಕೆ, ಸಂಘದ ಮುಂದಿರುವ ಸಮಸ್ಯೆಗಳು, ಸಂಘವು ಗ್ರಾಹಕರಿಂದ ಬಾಕಿ ವಸೂಲಿಗೆ ಕೈಕೊಂಡ ಕ್ರಮಗಳು ಮತ್ತು ಇತರೆ ಸೇವೆಗಳನ್ನು ಒಳಗೊಂಡಿದೆ.

ಐದನೆಯ ಅಧ್ಯಾಯವು ಸಮಾರೋಪ ಮತ್ತು ಸಲಹೆಗಳನ್ನು ಒಳಗೊಂಡಿರುತ್ತದೆ.

ಆಕರಗಳು:

೧. ಜಿ.ಎಲ್.ಬಡೀಗೇರ : ಭಾರತದಲ್ಲಿ ಗ್ರಾಮೀಣಾಭಿವೃದ್ಧಿ
ಸಂಗಮೇಶ್ವರ ಪ್ರಕಾಶನ ಸಂಕೇಶ್ವರ ೧೯೯೮. ಪು.ಸ.೧೫೬.

೨. ಆಯ್.ವಿ.ಇಸ್ಲಾಂಪುರೆ : ಸಹಕಾರಿ ಸಾಗಿ ಬಂದ ಶತಮಾನದ ದಾರಿ
ಸಹಕಾರ ಸಂಭ್ರಮ ಸಂಚಿಕೆ, ೨೦೦೫ ಪು.ಸ.೩೫.

೩. ಪಿ.ಎಚ್.ಡಿ.ಗ್ರಂಥಗಳು

ಅ. ಎ ಪಿ.ಬಿರಾದಾರ ಪಾಟೀಲ : ಸಹಕಾರಿ ಸಕ್ಕರೆ ಕಾರಖಾನೆಗಳ ಬೆಳಗಾವಿ ಜಿಲ್ಲೆಯ ಒಂದು ಅಧ್ಯಯನ

ಬ. ಮಿಸ್.ವಿದ್ಯಾ ಡಿ.ನಾಯಕ : ಅಂಕೋಲಾ ನಗರ ಸಹಕಾರಿ ಬ್ಯಾಂಕಿನ ಒಂದು ಅಧ್ಯಯನ ೧೯೯೦.

ಕ. ಪಾಂಡುರಂಗ ವೆಂಕಟರಮಣ ನಾಯಕ : ಉತ್ತರ ಕನ್ನಡ ಜಿಲ್ಲಾ ನಗರ ಸಹಕಾರಿ ಬ್ಯಾಂಕುಗಳ ಅಧ್ಯಯನ ೧೯೯೫.

ಡ. ಎಸ್ ಎಸ್.ಹೂಗಾರ : ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಹಣಕಾಸಿನ ವಿಶ್ಲೇಷಣೆಗಳಿಗೆ ಕರ್ನಾಟಕ ಒಂದು ಅಧ್ಯಯನ.

[illegible]

ಅಧ್ಯಾಯ-೨

ಸಹಕಾರ ರಂಗ

ಪರಿವಿಡಿ

ಅಧ್ಯಾಯ–೨

ಸಹಕಾರ ರಂಗ

ಅಧ್ಯಾಯ – ೨
ಸಹಕಾರ ರಂಗ

೨.೧ ಪೀಠಿಕೆ :

ಮಾನವ ಪರಿಸರದ ಕೂಸು. ಅವನು ಸಂಘಜೀವಿಯು ಹೌದು, ಆಧುನಿಕ ಸಂದರ್ಭದಲ್ಲಿ ಮನುಷ್ಯನ ಬದುಕು ತುಂಬ ಸಂಕೀರ್ಣಮಯವಾಗಿದೆ. ಹಲವು ಹತ್ತು ಸಮಸ್ಯೆಗಳಿಂದ ಅದು ಸಂಧಿಗ್ದವೂ ಆಗಿದೆ. ಆಧುನಿಕ ತಂತ್ರಜ್ಞಾನದ ಯುಗದಲ್ಲಿರುವ ಅವನಿಗೆ ಇದೀಗ ಅನೇಕ ಸೌಲಭ್ಯಗಳು ಲಭಿಸಿವೆ. ಜೊತೆಗೆ ಸಮಸ್ಯೆಗಳು ಹಬ್ಬಿವೆ. ಈ ಸಮಸ್ಯೆಗಳಿಂದ ಪಾರಾಗಲು ಅವನಿಗೆ ಇನ್ನೋಬ್ಬರ ಸಹಾಯಬೇಕು. ಸಹಕಾರವಂತೂ ಬೇಕೇಬೇಕು. ಅಂತೆಯೇ ಮಾನವ ಕೂಡಿ ಬಾಳುವದನ್ನು ಸಹಜವಾಗಿಯೇ ರೂಢಿಸಿಕೊಂಡಿದ್ದಾನೆ.

ಇಂದು ಜನತೆಯಲ್ಲಿ ಜಾಗೃತಿ ಮೂಡಿದೆ. ಪರಸ್ಪರ ಕೂಡಿ ಬಾಳುವ ಮನೋಭಾವ ಬಲಗೊಂಡಿದೆ. **'ಕೂಡಿ ಬಾಳಿದರೆ ಸ್ವರ್ಗ ಸುಖ'** ಎಂಬ ಮಾತನ್ನು ಅರಿತು ಮನವರಿಕೆ ಮಾಡಿಕೊಂಡ ಮಾನವ, ಸಹಕಾರದಿಂದ ಬಾಳಿದರೆ ಮಾತ್ರ ಅಭಿವೃದ್ಧಿ ಸಾಧ್ಯ ಎಂಬುದನ್ನು ತಿಳಿಯಬೇಕಾಗಿದೆ. **'ನೀ ನನಗಾದರೆ ನಾ ನಿನಗೆ'** ಎಂಬ ಸತ್ಯವು ಅವನಲ್ಲಿ ಮೂಡಬೇಕಾಗಿದೆ.

ಮಾನವ ತನ್ನ ಹಲವಾರು ಬಯಕೆಗಳನ್ನು ಈಡೇರಿಸಿಕೊಳ್ಳಬೇಕಾದರೆ, ವಿವಿಧ ರೀತಿಗಳಿಂದ ಪ್ರಯತ್ನಿಸುತ್ತಾನೆ. ಹೀಗೆ ಮಾನವನ ಜೀವನವು ಹಲವಾರು ಬಯಕೆಗಳನ್ನು ಒಳಗೊಂಡಿದೆ. ಕೊನೆಗೆ ಅವನು ತನ್ನ ಬಯಕೆಗಳನ್ನು ಈಡೇರಿಸಿಕೊಳ್ಳಲು ಮತ್ತೊಬ್ಬರ ಮೇಲೆ ಅವಲಂಬಿತನಾಗಿ ಸಹಕಾರ ತತ್ವದ ಮೂಲಕ ಈಡೇರಿಸಿಕೊಳ್ಳುತ್ತಾನೆ. ಅದಕ್ಕಾಗಿ ಸಹಕಾರ ಮಾನವನ ಬಯಕೆಗಳನ್ನು ಈಡೇರಿಸಿಕೊಳ್ಳುವ ಸಾಧನವೆಂದು ಹೇಳಬಹುದು. ಆದ್ದರಿಂದ ಸಹಕಾರವು ಮಾನವನ ಜೀವನವನ್ನು ಮುನ್ನಡೆಸುವ ಒಂದು ಉತ್ತಮ ಮಾರ್ಗವೆಂದು ಹೇಳಬಹುದು.

೨.೨. ಸಹಕಾರದ ವ್ಯಾಖ್ಯೆಗಳು :

ಸಹಕಾರದ ಬಗ್ಗೆ ಹಲವಾರು ಲೇಖಕರು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯೆಗಳನ್ನು ಮತ್ತು ವಿವರಗಳನ್ನು ಕೊಟ್ಟಿದ್ದಾರೆ.

ಇ.ಎಚ್. ಕಾಲ್ವರ್ಟ :

"ತಮ್ಮ ಆರ್ಥಿಕ ಹಿತಾಸಕ್ತಿಗಳನ್ನು ವೃದ್ಧಿಸಲು ವ್ಯಕ್ತಿಗಳು, ಸಮಾನತೆಯ ತಳಹದಿಯ ಮೇಲೆ, ಮಾನವರಾಗಿ ಒಂದುಗೂಡಿ ಸ್ವಯಂ ಪ್ರೇರಣೆಯಿಂದ ಕಟ್ಟಿರುವ ಸಂಘಕ್ಕೆ ಸಹಕಾರ ಸಂಸ್ಥೆ ಎಂದೆನ್ನುತ್ತಾರೆ."

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಪ್ರೊ. ಸಲಿಗನ್.

"ಸಹಕಾರವು ಅದರ ತಾಂತ್ರಿಕ ಅರ್ಥದಲ್ಲಿ ಉತ್ಪಾದನೆ ಮತ್ತು ವಿತರಣೆಯ ಸ್ಪರ್ದೆಯನ್ನು ಹೆಚ್ಚಿಸುವ ಮತ್ತು ಎಲ್ಲ ಪ್ರಕಾರದ ಮಧ್ಯವರ್ತಿಗಳನ್ನು ತೆಗೆದು ಹಾಕುವ ಸಾಧನ" ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಎಂ. ಟಿ. ಹೆರ್‍ರಿಕ್ :

"ವ್ಯಕ್ತಿಗಳು ತಮ್ಮ ಸ್ವಶಕ್ತಿಯಿಂದ ತಮ್ಮ ಸಾಮರ್ಥ್ಯವನ್ನು ಸಂಪನ್ಮೂಲಗಳನ್ನು ಅಥವಾ ಎರಡನ್ನೂ ಸಾಮೂಹಿಕ ಲಾಭಕ್ಕಾಗಿ ಉಪಯೋಗಿಸಿಕೊಳ್ಳಲು ಸ್ವ-ಇಚ್ಛೆಯಿಂದ ಸಂಘಟಿತಗೊಳ್ಳುವ ವ್ಯಕ್ತಿಯ ವ್ಯವಸ್ಥಿತ ಚಟುವಟಿಕೆಗಳಿಗೆ ಸಹಕಾರ ಚಳುವಳಿ ಎಂದು ಹೇಳಬಹುದು" ಎಂದಿದ್ದಾರೆ.

ಡಾ|| ಸಿ. ಆರ್. ಫೇ :

"ನಿರ್ಗತಿಕರು ಮತ್ತು ದುರ್ಬಲ ವರ್ಗದವರು ಒಂದುಗೂಡಿ ಸಾಮೂಹಿಕ ವ್ಯವಹಾರಗಳಿಗಾಗಿ ಸಂಘಟಿಸಿಕೊಂಡ ಉದ್ಯಮ ವ್ಯವಹಾರವು ಸಹಕಾರಿ ಸಂಸ್ಥೆಯಾಗಿದೆ." ಎಂದು ಹೇಳಿದ್ದಾರೆ.

ಸರ್. ಎಮ್. ಡಾರ್ಲಿಂಗ್ :

"ಸಹಕಾರವು ಒಂದು ಪದ್ದತಿಗೂ ಹೆಚ್ಚಿನ ವಿಷಯವಾಗಿದೆ. ಅದು ಹೃದಯ ಮತ್ತು ಮನಸ್ಸಿನ ಮೇಲೆ ಪ್ರಭಾವ ಹೊಂದಿರುವ ಶಕ್ತಿ, ಅದು ಆರ್ಥಿಕ ವ್ಯವಹಾರಗಳಿಗೆ ಅನ್ವಯಿಸುವ ಒಂದು ಧರ್ಮ, ಅದು ಸಂಪೂರ್ಣತೆ ಮತ್ತು ಸೇವೆಯ ತತ್ವ" ಎಂದು ಹೇಳಿದ್ದಾರೆ.

ಒಟ್ಟಾರೆಯಾಗಿ ಹೇಳಬೇಕೆಂದರೆ "ಸಮಾನತೆ ಹಾಗೂ ಪರಸ್ಪರ ಸಹಾಯ ಈ ತತ್ವಗಳ ಮೇಲೆ ತಮ್ಮನ್ನು ತಾವೇ ಶೋಷಣೆಯಿಂದ ರಕ್ಷಿಸಿಕೊಳ್ಳಲು ಮತ್ತು ತಮ್ಮ ಸರ್ವಸಾಮಾನ್ಯ ಆರ್ಥಿಕ ಹಿತಾಸಕ್ತಿಗಳನ್ನು ಅಭಿವೃದ್ಧಿ ಪಡಿಸಲು ಆರ್ಥಿಕವಾಗಿ ದುರ್ಬಲರು ಹಾಗೂ ಶೋಷಿತರು ಒಂದುಗೂಡಿ ಮಾಡುವ ಪ್ರಯಾಸವೇ ಸಹಕಾರ" ಎಂದು ಹೇಳಬಹುದು.

೨.೩. ಪ್ರಪಂಚದಲ್ಲಿ ಸಹಕಾರ ಚಳುವಳಿ :

ಇಂಗ್ಲಂಡ ದೇಶದಲ್ಲಿ ೧೮ ನೇ ಶತಮಾನದಲ್ಲಿ ಕೈಗಾರಿಕಾ ಕ್ರಾಂತಿಯಾಯಿತು ಈ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ದೊಡ್ಡ ದೊಡ್ಡ ಯಂತ್ರಗಳ ಕಾರ್ಖಾನೆಗಳು ಪ್ರಾರಂಭವಾದವು. ಇದರಿಂದ ಅಲ್ಲಿನ ಜನರ ಮನಸ್ಸಿನ ಮೇಲೆ ಆಘಾತ ಉಂಟಾಯಿತು. ಯಾಕೆಂದರೆ, ಗ್ರಾಮಾಂತರ ಜನರು ತಮ್ಮ ಮೂಲಭೂತ ಉದ್ಯೋಗಗಳನ್ನು ಕಳೆದುಕೊಂಡು ನಿರ್ಗತಿಕರಾದರು. ಇದರ ಪರಿಣಾಮವಾಗಿ ೨೮ ರಾಕಡೆಲ್ ಅಗ್ರಗ್ರಾಮಿಗಳು ರಾಕೆಡೆಲ್ ಈಕ್ವಟೇಬಲ್ ಸೊಸೈಟಿಯನ್ನು ೧೮೪೪ ರಲ್ಲಿ ಪ್ರಾರಂಭಿಸಿದರು. ಇವರು ಪ್ರಪಂಚದಲ್ಲಿಯೇ ಸಹಕಾರ ಸಂಘಗಳ ಮತ್ತು ಇಂಗ್ಲಂಡಿನಲ್ಲಿ ಅನುಭೋಗ ಸಹಕಾರಿ ಸಂಘಗಳ ಸ್ಥಾಪಕರಾಗಿದ್ದಾರೆ.

ಐರೋಪ್ಯ ರಾಷ್ಟ್ರಗಳಲ್ಲಿ ಒಂದಾದ ಕೃಷಿ ಪ್ರಧಾನವಾದ ಜರ್ಮನ ದೇಶದಲ್ಲಿ ರೈತರ ಸ್ಥಿತಿ ಚಿಂತಾಜನಕ ಸ್ಥಿತಿಯಲ್ಲಿದ್ದಾಗ, **'ರೇಫಿಜನ್'** ಎಂಬ ಮಹಾನ ವ್ಯಕ್ತಿ ಹಳ್ಳಿಗಳಲ್ಲಿ ಸಾಲ ಕೊಡುವ ಸಂಘಗಳನ್ನು ಸ್ಥಾಪಿಸಿ, ಅವುಗಳ ಮೂಲಕ ರೈತರಿಗೆ ಸಾಲಕೊಟ್ಟು ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸುವಲ್ಲಿ ಯಶಸ್ವಿಯಾದನು. ಅದೇ ರೀತಿ **'ಹರ್ಮನ ಶುಲ್ಜ'** ಎಂಬುವವರು ನಗರ ಸಹಕಾರಿ ಪತ್ತಿನ ಸಂಘಗಳನ್ನು ಸ್ಥಾಪಿಸಿ, ನಗರದಲ್ಲಿಯ ಜನತೆಯ ಆರ್ಥಿಕ ಅಭಿವೃದ್ಧಿಗೆ ಕಾರಣೀಭೂತರಾಗಿದ್ದಾರೆ. ಇವು ಶ್ರೀಮಂತರ ಕಪಿ ಮುಷ್ಟಿಯಿಂದ ಅಮಾಯಕ ಜನರನ್ನು ರಕ್ಷಿಸುವ ಉದ್ದೇಶದಿಂದ ಇವುಗಳ ಪ್ರಾರಂಬಿಸಲ್ಪಟ್ಟವು. ಈ ರೀತಿಯಾಗಿ ಪ್ರಪಂಚದಲ್ಲಿ ಸಹಕಾರದ ಚಳುವಳಿಯು ಪ್ರಾರಂಭವಾಯಿತು.

ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಸರಕಾರದ ಪರಿಣಾಮವಾಗಿ ೧೮೪೪ ರಿಂದ ೧೯೩೪ ರ ವರೆಗೆ ವಿವಿಧ ಹಂತಗಳಲ್ಲಿ ಬದಲಾವಣೆಗಳಾದವು. ಈ ಎಲ್ಲ ಅಂಶಗಳನ್ನು ಗಮನಿಸಿ ಅಂತರಾಷ್ಟ್ರೀಯ ಸಹಕಾರಿ ಮೈತ್ರಿ ಸಂಘವು ರಾಕಡೆಲ್ ತತ್ವದ ಪುನರ್ ಪರಿಶೀಲನೆಗಾಗಿ ಒಂದು ತಜ್ಞ ಸಮೀತಿಯನ್ನು ೧೯೩೧ ರಲ್ಲಿ ನೇಮಿಸಿತು. ಇದು ೧೯೩೪ ರಲ್ಲಿ ತನ್ನ ವರದಿಯನ್ನು ಒಪ್ಪಿಸಿತು. ಈ ವರದಿಯನ್ನು ಅಂತರಾಷ್ಟ್ರೀಯ ಸಹಕಾರಿ ಮೈತ್ರಿ ಸಂಘವು ೧೯೩೭ ರಲ್ಲಿ ಪ್ಯಾರಿಸನಲ್ಲಿ ಸಭೆ ಸೇರಿ ಚರ್ಚಿಸಿತು. ಈ ವರದಿಯು ಅಷ್ಟೊಂದು ಸಮಂಜಸವೆನಿಸದ ಕಾರಣ ೧೯೬೪ ರಲ್ಲಿ ಭಾರತದ ಪ್ರೊ. ಡಿ.ಜಿ. ಕರ್ವೆಯರ ಅಧ್ಯಕ್ಷತೆಯಲ್ಲಿ ತಜ್ಞ ಸಮಿತಿಯೊಂದನ್ನು ೫ ಜನ ಸದಸ್ಯಗಳನ್ನೊಳಗೊಂಡು ನೇಮಿಸಿತು. ಇದು ಒಂದು ವರದಿಯನ್ನು ಸಿದ್ದಪಡಿಸಿತು. ತದನಂತರ ಈ ವರದಿಯನ್ನು ೧೯೬೬ ರಲ್ಲಿ ವಿಯನ್ನಾದಲ್ಲಿ ಸಭೆ ಸೇರಿದ ಅಂತರಾಷ್ಟ್ರೀಯ ಸಹಕಾರ ಕಾಂಗ್ರೆಸ್ ಈ ವರದಿಯನ್ನು ಅನುಮೋದಿಸಿತು.

ಈ ಒಂದು ವರದಿಯು ಸಹಕಾರ ತತ್ವಗಳು, ಮೊದಲನೆಯ ರಾಕಡೆಲ್ ತತ್ವಗಳಿಗೆ ಪೂರಕವಾಗಿದ್ದವು.

೧೯೬೬ ರ ಸಮಿ ತಿಯ ತತ್ವಗಳು ಈ ಕೆಳಗಿನಂತಿವೆ.

೧. ಸ್ವಯಂ ಪ್ರೇರಿತ ಮತ್ತು ತೆರೆದ ಸದಸ್ಯತ್ವ.
೨. ಪ್ರಜಾಪ್ರಭುತ್ವದ ರೀತಿಯ ನಿರ್ವಹಣೆ ಮತ್ತು ನಿಯಂತ್ರಣ.
೩. ಶೇರು ಬಂಡವಾಳಗಳ ಮೇಲೆ ಸೀಮಿತ ಬಡ್ಡಿ.
೪. ಹೆಚ್ಚಳದ ನ್ಯಾಯ ಸಮ್ಮತ ಹಂಚಿಕೆ.
೫. ನಗದು ವ್ಯವಹಾರ.
೬. ಪರಸ್ಪರ ಸಹಕಾರ ಮತ್ತು ಸ್ವಸಹಾಯ.
೭. ರಾಜಕೀಯ ಮತ್ತು ತಾಟಸ್ಥ್ಯ ನೀತಿ.
೮. ಸಹಕಾರ ಶಿಕ್ಷಣ.
೯. ಸಹಕಾರ ಸಂಘಗಳಲ್ಲಿ ಪರಸ್ಪರ ಸಹಕಾರ.

ಈ ಮೇಲಿನ ರೀತಿಯಲ್ಲಿ ಪ್ರಪಂಚದ ಸಹಕಾರದ ಚಳುವಳಿಯು ಪ್ರರಂಭವಾಯಿತು.

[illegible]

[illegible]

[illegible]

೨.೪. ಭಾರತದಲ್ಲಿ ಸಹಕಾರದ ಚಳುವಳಿ :

ಭಾರತವು ೧೯ನೆಯ ಶತಮಾನದ ಕೊನೆಯ ಭಾಗದಲ್ಲಿ ತೀವ್ರ ಗ್ರಾಮೀಣ ಸಾಲಭಾರದ ಸಮಸ್ಯೆಯನ್ನು ಎದುರಿಸಬೇಕಾಗಿ ಬಂದಿತು. ಇದಕ್ಕೆ ಪರಿಹಾರ ಮಾರ್ಗವನ್ನು ಕಂಡು ಹಿಡಿಯಲು ಅಂದಿನ ಮದರಾಸು ಸರಕಾರ ಸರ್. ಫ್ರೆಡ್ರಿಕ್ ನಿಕೊಲ್ಸನ್‌ರನ್ನು ಕೃಷಿ ಸಾಲಸೊಲಗಳ ಬಗ್ಗೆ ಅಭ್ಯಾಸ ಮಾಡಿಕೊಂಡು ಬರಲು ಯೂರೋಪಿಗೆ ಕಳುಹಿಸಿಕೊಟ್ಟಿತು.ಗ್ರಾಮೀಣ ಸಾಲಗಾರಿಕೆಯನ್ನು ನಿರ್ಮೂಲನೆ ಮಾಡಿ, ಸುಲಭ ದರದಲ್ಲಿ ಕೃಷಿ ಸಾಲವನ್ನು ಒದಗಿಸಲು ಸಹಕಾರವು ಉತ್ತಮ ಸಾಧನವಾಗಬಹುದೆಂದು ನಿಕೊಲ್ಸನರು ೧೮೯೫ ರಲ್ಲಿ ವರದಿ ಒಪ್ಪಿಸಿದರು. ಇದೇ ಸಮಯಕ್ಕೆ ಹಳೆಯ ಸಂಯುಕ್ತ ಪ್ರಾಂತಗಳಲ್ಲಿ ಸರ್. ಡ್ಯೊಪರನೆಕ ಅವರು ಹಾಗೂ ಪಂಜಾಬ ಪ್ರಾಂತದಲ್ಲಿ ಸರ್. ಎಡ್ವರ್ಡ ಮೆಕ್ಲಗಾನ್ ಮತ್ತು ಕ್ಯಾಪ್ಟನ್ ಕ್ರೊಸ್ವ ವೇಯಿಟರವರುಗಳು ಸಾಲ ಸಂಘಗಳನ್ನು ವ್ಯವಸ್ಥೆಗೊಳಿಸಿದ್ದರು. ಇದರ ಜೊತೆಗೆ ೧೯೦೧ ರ ಕ್ಷಾಮ ಪರಿಹಾರ ಸಮಿತಿಯು ಸಾಲ ನೀಡಿಕೆಯ ಸಂಸ್ಥೆಗಳನ್ನು ಸ್ಥಾಪಿಸುವಂತೆ ಸರಕಾರಕ್ಕೆ ಶಿಫಾರಸ್ಸು ಮಾಡಿತು. ಹೀಗೆ ನಮ್ಮ ದೇಶದಲ್ಲಿ ಸಹಕಾರ ಚಳುವಳಿಯ ಉಗಮಕ್ಕೆ ಈ ಎಲ್ಲ ಪ್ರಯತ್ನಗಳು ಸೋಪಾನ ಪ್ರಾಯವಾದವು. ಈ ಹಿನ್ನಲೆಯಲ್ಲಿಯೇ ಸರಕಾರವು ಕೃಷಿ ಸಾಲ ಸೌಲಭ್ಯ ವಿಸ್ತರಣೆಯ ಅಗತ್ಯವನ್ನು ಮನಗಂಡು ೧೯೦೪ ರಲ್ಲಿ ಸಹಕಾರ ಸಂಘಗಳ ಕಾನೂನನ್ನು ಜಾರಿಗೆ ತಂದಿತು. ಇದರೊಂದಿಗೆ ನಮ್ಮ ದೇಶದಲ್ಲಿ ಸಹಕಾರ ಚಳುವಳಿಯು ೧೯೦೪ ರಲ್ಲಿ ನಿಜವಾಗಿ ಪ್ರಾರಂಭವಾಯಿತು.

೧೯೦೪ ರ ಸಹಕಾರ ಸಂಘಗಳ ಕಾನೂನಿನ ಮುಖ್ಯ ಉದ್ದೇಶ, ರೈತರು, ಕಸಬುದಾರರು ಮತ್ತು ಮಿತಸಾಧನೆಗಳುಳ್ಳ ಜನರುಗಳಲ್ಲಿ ಮಿತವ್ಯಯ, ಸ್ವಸಹಾಯ ಮತ್ತು ಸಹಕಾರ ಪದ್ಧತಿಯನ್ನು ಅನುಸರಿಸುವಂತೆ ಪ್ರೇರೇಪಿಸುವದು. ಈ ಧ್ಯೇಯಗಳನ್ನು ಹೊಂದಿದ ಅನೇಕ ಸಂಘಗಳು ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ಸ್ಥಾಪಿಸಲ್ಪಟ್ಟವು. ಈ ಕಾನೂನಿನಲ್ಲಿ ಕೆಲವೊಂದು ದೋಷಗಳಿದ್ದವು. ಅವುಗಳೆಂದರೆ ಕೇವಲ ಸಂಸ್ಥೆಗೆ ಈ ಸಂಘಗಳ ವ್ಯವಹಾರಗಳನ್ನು ಪರಿಶೀಲಿಸಲು ಅವಕಾಶವಿರಲಿಲ್ಲ ಹಾಗೂ ಸಂಘಗಳ ವ್ಯಾಪ್ತಿ ಸೀಮಿತವಾಗಿರಬೇಕೆಂಬ ನಿಯಮ ಅಷ್ಟೊಂದು ಅನೂಕೂಲವಾಗಿರಲಿಲ್ಲ.

ಈ ಮೇಲಿನ ದೋಷಗಳನ್ನು ಸರಿಪಡಿಸಲು ೧೯೧೨ ರಲ್ಲಿ ವಿಶಾಲ ತಳಹದಿಯ ಮೇಲೆ ಮತ್ತೊಂದು ಸಹಕಾರ ಸಂಘಗಳ ಕಾನೂನನ್ನು ಜಾರಿಗೆ ತರಲಾಯಿತು. ಈ ಕಾನೂನು ಹಲವು ಪ್ರಕಾರದ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಅವಕಾಶ ಮಾಡಿಕೊಟ್ಟಿದ್ದರಿಂದ ದೇಶದಲ್ಲಿ ಸಹಕಾರ ಚಳುವಳಿಯ ವಿಕಾಸಗೊಳ್ಳಲು ಅನುಕೂಲವಾಯಿತು. ವಿವಿಧ ರೀತಿಯ ಸಹಕಾರಿ ಸಂಘಗಳು ಸ್ಥಾಪಿಸಲು ಸಹಕಾರದ ವ್ಯವಸ್ಥೆಯನ್ನು ತೀವ್ರಗೊಳಿಸಲು ೧೯೧೪ ರಲ್ಲಿ ಸರ್ ಎಡ್ವರ್ಡಮೆಕ್ಲಗಾನ್ ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿಯು ಸಹಕಾರ ಚಳುವಳಿಯನ್ನು ಇನ್ನೂ ತೀವ್ರಗೊಳಿಸಲು ಕೆಲವು ಉಪಯುಕ್ತ ಸಲಹೆಗಳನ್ನು ಮಾಡಿತು.

ಭಾರತ ಸಹಕಾರ ಚಳುವಳಿಯ ೧೯೧೯ ರಲ್ಲಿ ಒಂದು ಹೊಸ ಘಟ್ಟವನ್ನು ಪ್ರವೇಶಿಸಿತು. ಏಕೆಂದರೆ, ೧೯೧೯ ರ ಭಾರತ ಸರಕಾರದ ಕಾನೂನಿನ ಪ್ರಕಾರ ಸಹಕಾರವು ರಾಜ್ಯಗಳಿಗೆ ಸೇರಿದ ವಿಷಯವಾಯಿತು. ಇದರಿಂದ ಚಳುವಳಿಯು ತುಂಬಾ ಯುಶಸ್ವಿಯಾಗಿ ಮುಂದುವರೆಯಿತು. ಆದರೆ ೧೯೩೦ ರ ಆರ್ಥಿಕ ಮುಗ್ಗಟ್ಟು ಚಳುವಳಿಗೆ ಅಡ್ಡಿಯುಂಟು ಮಾಡಿತು. ೧೯೩೭ ರ ನಂತರ ಅದು ಸವಕಾಶವಾಗಿ ಚೇತರಿಸಿಕೊಳ್ಳಲು ಪ್ರಾರಂಭಿಸಿತು. ದ್ವಿತಿಯ ಮಹಾಯುದ್ಧ ಮತ್ತು ಆ ನಂತರದ ಪರಿಸ್ಥಿತಿಯು ಚಳುವಳಿಗೆ ನವಚೇತನವನ್ನು ತಂದುಕೊಟ್ಟಿತು.

೧೯೪೭ ರಲ್ಲಿ ಸ್ವಾತಂತ್ರ್ಯ ಪಡೆದ ನಂತರ ಭಾರತದಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಅನೇಕ ಕ್ರಮಗಳನ್ನು ಕೈಕೊಂಡಿದ್ದರಿಂದ, ಭಾರತದಲ್ಲಿ ಸಹಕಾರಿ ಆಂದೋಲನವು ತೀವ್ರ ಗತಿಯಿಂದ ಬೆಳೆಯಲಾರಂಬಿಸಿತು. ಅದರಂತೆ ೧೯೫೧ ರಲ್ಲಿ ಭಾರತೀಯ ರಿಸರ್ವ ಬ್ಯಾಂಕ ಕೈಗೊಂಡ 'ಅಖಿಲ ಭಾರತ' ಗ್ರಾಮಾಂತರ ಪತ್ತಿನ ಪರೀಶೀಲನೆಯು ೧೯೫೪ ರಲ್ಲಿ ಪ್ರಸೀದಿಸಲ್ಪಟ್ಟಿತು. ಈ ಒಂದು ವರದಿಯಲ್ಲಿ ಕೃಷಿ ಪತ್ತಿನ ರಾಷ್ಟ್ರೀಯ ನಿಧಿ. ಮತ್ತು ಕೃಷಿ ಪತ್ತಿನ ರಾಷ್ಟ್ರೀಯ ಸ್ಥಾಯಿ ನಿಧಿ. ಮತ್ತು ಸ್ಟೇಟ ಬ್ಯಾಂಕುಗಳನ್ನು ಸ್ಥಾಪಿಸಬೇಕೆಂಬ ಸಲಹೆಯನ್ನು ನೀಡಿತು. ಈ ರೀತಿಯಾಗಿ ಪಂಚವಾರ್ಷಿಕ ಯೋಜನೆಗಳು ಭಾರತದಲ್ಲಿ ಪ್ರಾರಂಭವಾದ ನಂತರ ಸಹಕಾರದ ಅಭಿವೃದ್ಧಿ ತೀವ್ರಗೊಂಡಿತು.

ಭಾರತದಲ್ಲಿ ಸಹಕಾರದ ಬೆಳವಣಿಗೆ ಸ್ವಾತಂತ್ರ್ಯ ಪೂರ್ವ ಮತ್ತು ನಂತರದಲ್ಲಿ ಯಾವ ರೀತಿಯಾಗಿತ್ತು ಎಂಬುದನ್ನು ಈ ಮುಂದಿನಂತೆ ನೋಡಬಹುದು.

೨.೫. ಭಾರತದಲ್ಲಿ ಸಹಕಾರದ ಬೆಳವಣಿಗೆ :

೨.೫. ಅ) ಭಾರತದ ಸ್ವಾತಂತ್ರ್ಯ ಪೂರ್ವ ಸಹಕಾರದ ಬೆಳವಣಿಗೆ :

ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಜನರು ಒಟ್ಟುಗೂಡಿ ಕೆಲಸ ಮಾಡುತ್ತಿದ್ದದ್ದು, ವಿಚಾರ, ಮನುಧರ್ಮ ಶಾಸ್ತ್ರ, ಕೌಟಿಲ್ಯನ ಅರ್ಥಶಾಸ್ತ್ರ, ಸುಖ ನೀತಿಸಾರ ಮುಂತಾದ ಗ್ರಂಥಗಳಲ್ಲಿ ನಿರೂಪಿತವಾಗಿದೆ. ಆಗಿನ ಬ್ರಿಟಿಷ ಆಡಳಿತ ಪದ್ದತಿಯು ಸಹಕಾರ ತತ್ವಗಳನ್ನೊಳಗೋಂಡಿದ್ದ ಗ್ರಾಮ ಪಂಚಾಯತ, ಅವಿಭಕ್ತ ಕುಟುಂಬ ಪದ್ದತಿಗಳನ್ನು ನಾಶ ಮಾಡಿದರು. ನಂತರ ತಮ್ಮ ತಪ್ಪುಗಳನ್ನು ತಾವೇ ಅರಿತುಕೊಂಡು 'ಸಹಕಾರ' ಆಚರಣೆಗೆ ತರಬೇಕೆಂದು ನಿಶ್ಚಯ ಮಾಡಿದರು.

ಭಾರತದಲ್ಲಿ ಸಹಕಾರ ಸಂಘಗಳ ಕಾಯ್ದೆ ೧೯೦೪ ನ್ನು ಜಾರಿಗೆ ತರಲಾಯಿತು. ೧೮೭೯ ರಲ್ಲಿ ಡೆಕ್ಕನ ಅಗ್ರಿಕಲ್ಚರಲ್ ರಿಲೀಫ್ ಆಕ್ಟ್ ಮತ್ತು ೧೮೮೩ ರಲ್ಲಿ ಲ್ಯಾಂಡ ಇಂಪ್ರೂವಮೆಂಟ್ ಲೋನ್ಸ್ ಆಕ್ಟ್‌ಗಳು ಜಾರಿಯಲ್ಲಿ ಬಂದರೂ ಪ್ರತ್ಯಕ್ಷ ಆಚರಣೆಯಲ್ಲಿ ಅವುಗಳ ಪರಿಪೂರ್ಣತೆ ಕಂಡುಬರಲಿಲ್ಲ. ಕೃಷಿಕನಿಗೆ ಗೊಬ್ಬರ, ನೀರಿನ ಸರಬರಾಜು ಮತ್ತು ಒಕ್ಕಲುತನದ ಏಳ್ಗೆಗಾಗಿ ಸೌಲಭ್ಯಗಳನ್ನು ದೊರೆಕಿಸಿಕೊಡಲು ಇತರ ಖಾಸಗಿ ಸಂಸ್ಥೆಗಳಿಂದ ಪ್ರಯತ್ನ ನಡದೇ ಇದ್ದಿತು. ಇದನ್ನು ಕಾಯ್ದೆಯ ಚಟುವಟಿಕೆಗಳಲ್ಲಿ ತರಲು ೧೯೦೪ ರಲ್ಲಿ ಸಹಕಾರ ಸಂಘಗಳ ಕಾಯ್ದೆಯನ್ನು ಜಾರಿಗೆ ತರಲಾಯಿತು. ಈ ಕಾಯ್ದೆ ಕೃಷಿ ಉದ್ಯೋಗಕ್ಕೆ ಮಾತ್ರ ಸಿಮಿತವಾಗಿತ್ತು.

[illegible]

[illegible]

[illegible]

[illegible]

[illegible]

ಮಧ್ಯಮ ವರ್ಗದ ಜನರ, ಇತರೇ ಉದ್ಯೋಗ ಕೈಕೊಳ್ಳವವರ ಅಡಚಣೆ ನಿವಾರಣೆಗಾಗಿ ಈ ಕಾಯ್ದೆಯಲ್ಲಿ ಸೌಲಭ್ಯಗಳಿರಲಿಲ್ಲ. ಆದ್ದರಿಂದ ಸಮಾಜದ ಎಲ್ಲ ಜನರಿಗೆ ಎಲ್ಲ ಕೆಲಸಗಳಿಗೆ ಅನೂಕೂಲವಾಗುವಂತೆ ೧೯೧೨ ಸಹಕಾರಿ ಸಂಘಗಳ ಹೊಸ ಕಾಯ್ದೆಯನ್ನು ಜಾರಿಯಲ್ಲಿ ತಂದಿತು. ಅದರಂತೆ ಸರಕಾರವು ಪ್ರತ್ಯೇಕ 'ಸಹಕಾರ' ಇಲಾಖೆಯನ್ನು ಸ್ಥಾಪಿಸಿ ಅದರನ್ವಯ ಸಹಕಾರದ ಅಭಿವೃದ್ಧಿಗೆ ಹಲವಾರು ಅಧಿಕಾರಿಗಳನ್ನು ನೇಮಿಸಿತು. ಸ್ವತಂತ್ರ ಪೂರ್ವ ಭಾರತದಲ್ಲಿ ಸಹಕಾರವು ಯಾವ ರೀತಿಯಾಗಿ ಪ್ರಗತಿಯನ್ನು ಹೊಂದಿತ್ತು ಎಂಬುದನ್ನು ಈ ಮುಂದಿನ ಕೋಷ್ಟಕ ೨.೧ ರಲ್ಲಿರುವಂತೆ ನೋಡಬಹುದು.

ಈ ಹಿಂದಿನ ಕೋಷ್ಟಕ ೨.೧ ರಲ್ಲಿರುವಂತೆ ಸ್ವತಂತ್ರ ಪೂರ್ವ ಭಾರತದ ಸರಕಾರದ ಪ್ರಗತಿ ಸಾದಾರಣವೇ ಆಗಿತ್ತು. ೧೯೦೭ ರಲ್ಲಿ ಸಹಕಾರಿ ಸಂಘಗಳ ಸಂಖ್ಯೆಯು ೮೪೩ ಆಗಿತ್ತು. ಸದಸ್ಯರ ಸಂಖ್ಯೆ ೯೦,೪೪೪ ಆಗಿದ್ದರೆ, ಶೇರು ಬಂಡವಾಳ ರೂ. ೫೫೯ ಸಾವಿರ ರೂ. ಗಳಾಗಿತ್ತು. ಕಾಯ್ದಿಟ್ಟ ನಿಧಿಯು ಮತ್ತು ಇತರ ನಿಧಿಯು ರೂ. ೫,೯೦೦/- ಗಳಾಗಿತ್ತು. ಒಟ್ಟಾರೆ ೧೯೦೭ ರಲ್ಲಿ ಕ್ರಿಯಾ ಬಂಡವಾಳ ರೂ. ೨,೩೭೨ ಸಾವಿರ ರೂ ಗಳಾಗಿತ್ತು.

೧೯೪೭ ರಲ್ಲಿ ಸಹಕಾರಿ ಸಂಘಗಳ ಸಂಖ್ಯೆಯು ೧,೩೮,೬೬೫ ಕ್ಕೆ ಹೆಚ್ಚಾದವು.ಇದೆ ಸಮಯದಲ್ಲಿ ಸದಸ್ಯರ ಸಂಖ್ಯೆಯು ೧,೦೩,೧೫೧ ಕ್ಕೆ ಹೆಚ್ಚಾದವು. ಶೇರು ಬಂಢವಾಳವು ರೂ. ೨,೨೩,೧೩೦ ಸಾವಿರ ರೂ. ಗಳಿಗೆ ಹೆಚ್ಚಾದರೆ, ಕಾಯ್ದಿಟ್ಟ ಮತ್ತು ಇತರ ನಿಧಿಯು ರೂ. ೨,೦೫,೭೦೫ ಸಾವಿರ ರೂ. ಗಳಿಗೆ ಹೆಚ್ಚಾಯಿತು. ಅದರಂತೆ ಕ್ರಿಯಾ ಬಂಡವಾಳವು ರೂ. ೧೫,೬೦,೦೫೬ ಸಾವಿರ ರೂಗಳಿಗೆ ಹೆಚ್ಚಾಯಿತು. ಈ ಒಂದು ಅವಧಿಯಲ್ಲಿ ಒಟ್ಟು ಸಂಘಗಳೊಡಗೂಡಿ ಕೊಟ್ಟ ಸಾಲವು ೧೩,೮೨,೪೯ ಸಾವಿರ ರೂ ಗಳಾಗಿತ್ತು. ಸಾಲ ಮತ್ತು ಠೇವಣಿ ಮರು ಪಾವತಿ ರೂ. ೧೨,೧೯,೧೦೩ ಸಾವಿರ ರೂ ಗಳಾಗಿತ್ತು.ಅದರಂತೆ ಒಟ್ಟು ಸಾಲ ಬಾಕಿಯು ರೂ. ೮,೨೩,೮೮೬ ಸಾವಿರ ರೂ. ಗಳಾಗಿತ್ತು. ಒಟ್ಟಾರೆಯಾಗಿ ಎಲ್ಲ ಸಂಘಗಳಿಂದ ಬಂದ ಲಾಭವು ರೂ. ೪,೨೯,೦೫೮ ಸಾವಿರ ರೂ ಗಳಾಗಿತ್ತು.

ಭಾರತದಲ್ಲಿ ಯೋಜನೆಗಳ ಪ್ರಾರಂಭದ ಸಮಯದಲ್ಲಿ ಅಂದರೆ ೧೯೫೧ ರಲ್ಲಿ ಸಂಘಗಳ ಮತ್ತು ಸದಸ್ಯರ ಸಂಖ್ಯೆಯು ಕ್ರಮವಾಗಿ ೧,೭೮,೪೧೬ ಮತ್ತು ೧,೩೪,೩೭೮ ಆಗಿತ್ತು. ಅದರಂತೆ ಶೇರು ಬಂಡವಾಳ ಮತ್ತು ಕ್ರಿಯಾ ಬಂಡವಾಳ ಕ್ರಮವಾಗಿ ರೂ. ೪,೧೦,೨೯೩ ಸಾವಿರ ರೂ ಗಳು ಮತ್ತು ರೂ. ೨೫,೪೬,೫೯೨ ಸಾವಿರ ರೂ ಗಳಾಗಿತ್ತು. ಒಟ್ಟು ಸಾಲ ಕೊಟ್ಟಿದ್ದು ರೂ. ೨೧,೨೭,೯೩೮ ರೂ ಗಳಾಗಿದ್ದರೆ, ಸಾಲ ಬಾಕಿಯು ೧೪,೧೬,೭೯ ಸಾವಿರ ರೂ ಗಳಾಗಿತ್ತು. ಒಟ್ಟಾರೆ ಇದೇ ಸಮಯದಲ್ಲಿ ಲಾಭವು ರೂ. ೫೭,೭೩೫ ಸಾವಿರ ರೂ ಗಳಾಗಿತ್ತು. ಈ ರೀತಿಯಾಗಿ ಸ್ವಾತಂತ್ರ್ಯಕ್ಕಿಂತಲೂ ಪೂರ್ವದಲ್ಲಿ ಭಾರತದಲ್ಲಿ ಸಹಕಾರದ ಪ್ರಗತಿ ಅಷ್ಟೊಂದು ಪ್ರಗತಿಪರವಾಗಿಲ್ಲ ಅನ್ನುವದು ಕಂಡುಬರುತ್ತದೆ.

ಕೋಷ್ಟಕ ೨.೧
ಸ್ವಾತಂತ್ರ್ಯ ಪೂರ್ವಭಾರತದಲ್ಲಿ ಸಹಕಾರ ಚಳುವಳಿ

[ಸಾವಿರ ರೂಪಾಯಿಗಳಲ್ಲಿ]

ವರ್ಷದ ಕೊನೆ ಜೂನ	ಸಂಘಗಳ ಸಂಖ್ಯೆ	ಸದಸ್ಯರ ಸಂಖ್ಯೆ	ಬಂದ ಶೇರು ಬಂಡವಾಳ	ಕಾಯ್ದಿಟ್ಟ ಮತ್ತು ಇತರ ನಿಧಿ	ಕ್ರಿಯಾ ಬಂಡವಾಳ	ಸಾಲ ಕೊಟ್ಟದ್ದು	ಸಾಲ ಮತ್ತು ರೇವಣಿ ಮರುಪಾವತಿ	ಸಾಲ ಬಾಕಿ	ಸಾಲ ಮತ್ತು ರೇವಣಿ ಪಡೆದದ್ದು	ಲಾಭ
೧	೨	೩	೪	೫	೬	೭	೮	೯	೧೦	೧೧
೧೯೦೭	೮೪೩	೯೦,೪೪೪	೫೫೬	೫೯	೨,೩೭೨					
೧೯೧೧	೫,೪೩೨	೩,೧೪,೧೦೧	೩,೩೯೧	೫೬೧	೨೦,೩೬೨					
೧೯೧೫	೧೭,೧೦೯	೧೧,೫೫೨	೧೪,೪೮೫	೫,೨೩೩	೮೮,೮೧೭	೪೩,೯೬೧	೩೪,೧೮೧	೮೦,೭೪೪	೪೮,೦೭೬	೩,೦೪೭
೧೯೧೯	೩೧,೨೮೧	೨೫,೯೯೫	೨೮,೪೩೪	೧೫,೦೨೩	೧,೭೫,೫೧೪	೯೫,೫೯೫	೭೩,೦೯೦	೧,೫೦,೩೩೭	೧,೧೩,೦೭೭	೫,೨೫೮
೧೯೨೩	೫೪,೩೦೧	೫೩,೯೯೫	೫೧,೨೪೫	೩೦,೩೦೦	೩,೮೫,೩೯೩	೧,೯೭,೩೨೯	೧,೬೦,೮೦೧	೨,೯೭,೦೭೩	೨,೮೪,೩೫೩	೯,೩೨೩
೧೯೨೨	೮೭,೨೪೮	೧,೦೪,೦೬೧	೮೮,೭೩೮	೬೦,೦೫೪	೬,೭೯,೩೬೧	೪,೦೯,೨೬೬	೩,೨೩,೧೧೯	೫,೪೫,೭೬೯	೭,೩೦,೦೫೯	೧೮,೦೮೮
೧೯೩೧	೧,೦೪,೬೪೫	೧,೧೩,೭೧೯	೧,೨೪,೦೪೨	೧,೦೩,೨೧೨	೯,೧೯,೧೨೪	೪,೦೭,೬೬೨	೩,೭೯,೪೯೩	೭,೪೨,೪೪೬	೮,೮೯,೨೭೫	೨೫,೨೬೯
೧೯೩೫	೧,೦೪,೯೭೮	೧,೧೨,೯೩೨	೧,೩೪,೮೧೯	೧,೫೭,೨೨೪	೯,೬೮,೮೫೨	೩,೭೮,೨೪೦	೪,೩೩,೫೯೯	೬,೯೩,೩೮೦	೧೧,೨೨,೮೩೫	೨೪,೦೬೯
೧೯೩೯	೧,೨೫,೬೮೩	೧,೨೦,೬೧೯	೧,೪೦,೧೭೫	೧,೭೮,೮೪೬	೧೦,೬೫,೫೭೫	೪,೨೭,೯೫೦	೩,೯೭,೨೨೭	೭,೬೦,೨೯೦	೧೧,೪೩,೫೮೨	೩,೪೩೦
೧೯೪೩	೧,೪೫,೬೮೩	೧,೩೭,೧೬೭	೧,೫೭,೦೭೯	೧,೯೯,೨೨೧	೧೨,೧೧,೪೩೧	೬,೧೩,೯೨೪	೬,೨೯,೬೪೪	೭,೨೨,೫೭೯	೨೦,೬೪,೯೮೫	೨೨,೦೧೫
೧೯೪೭	೧,೩೮,೬೬೫	೧,೦೩,೧೫೧	೨,೨೩,೧೩೦	೨,೦೫,೭೦೫	೧೫,೬೦,೦೫೬	೧೩,೮೨,೪೯೯	೧೨,೧೯,೧೦೩	೮,೨೩,೮೮೬	೩೮,೬೪,೭೬೨	೪೨,೯೫೮
೧೯೫೧	೧,೭೮,೪೧೬	೧,೩೪,೩೭೮	೪,೧೦,೨೯೨	೩,೨೦,೦೬೨	೨೫,೪೬,೫೯೨	೨೧,೨೭,೯೩೮	೧೮,೮೪,೮೫೪	೧೪,೧೬,೬೨೯		೫೭,೭೩೫

ಆಧಾರ : ಭಾರತೀಯ ಪಣಕಾಸು ಮತ್ತು ಬ್ಯಾಂಕಿಂಗ ಅಂಕಿ ಅಂಶಗಳು.
ರಿಜರ್ವ ಬ್ಯಾಂಕ ಆಫ್ ಇಂಡಿಯಾ ಪ್ರಕಟಿತ ೧೯೫೧ ಪುಟ ೩೮೪ ಮತ್ತು ೩೮೫.

೨.೫. ಬ) ಸ್ವಾತಂತ್ರ್ಯ ನಂತರ ಭಾರತದಲ್ಲಿ ಸಹಕಾರದ ಪ್ರಗತಿ :

ಸ್ವತಂತ್ರ್ಯ ಭಾರತದಲ್ಲಿ ಸಹಕಾರ ಚಳುವಳಿಯ ಬೆಳವಣಿಗೆಯ ಹಂತವನ್ನು ಯೋಜನಾಬದ್ದ ಬೆಳವಣಿಗೆಯ ಹಂತ ಎಂದು ಕರೆಯುತ್ತಾರೆ. ೧೯೪೯-೫೦ ರಲ್ಲಿ ಸಹಕಾರಿ ಸಂಘಗಳ ಗುಣಮಟ್ಟವನ್ನು ಹೆಚ್ಚಿಸಲು ಅಧ್ಯಯನ ಮಾಡಿ, ಉಪಯುಕ್ತ ಸೂಚನೆಗಳನ್ನು ಕೊಡುವದಕ್ಕಾಗಿ ಗ್ರಾಮೀಣ ವಿಚಾರಣಾ ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿಯು ಗ್ರಾಮ ಸಹಕಾರಿ ಬ್ಯಾಂಕುಗಳನ್ನು ರಚಿಸುವದು ಹಾಗೂ ನಗರ ಮತ್ತು ಕೇಂದ್ರ ಬ್ಯಾಂಕುಗಳನ್ನು ವಿಸ್ತರಿಸಲು ಸಮಿತಿಯು ಶಿಫಾರಸ್ಸು ಮಾಡಿತು. ಸರಕಾರವು ಸಹಕಾರದ ಬೆಳವಣಿಗೆಗಾಗಿ ಸಾಕಷ್ಟು ಸಮಿತಿಗಳನ್ನು ನೇಮಿಸಿತು ಮತ್ತು ಸಮ್ಮೇಳನಗಳನ್ನು ನಡೆಸಿತು. ಉದಾಹರಣೆಗಾಗಿ.

೧. ಗ್ರಾಮಿಣ ಸಾಲದ ಸರ್ವೆ ಸಮಿತಿ ೧೯೫೧

೨. ಸಹಕಾರದ ಕಾರ್ಯ ಸಮಿತಿ ೧೯೫೨

೩. ರಾಷ್ಟ್ರೀಯ ಅಭಿವೃದ್ಧಿ ಕೌನ್ಸಿಲದ ಠರಾವು

೪. ಅಖಿಲ ಭಾರತ ಸಾಲ ಪುನರ ವಿಮರ್ಶೆ ಸಮಿತಿ ೧೯೬೯ ಮುಂತಾದವು.

ಈ ರೀತಿಯಾಗಿ ಸಹಕಾರ ರಂಗದಲ್ಲಿ ಕೃಷಿ. ಚಿಕ್ಕ ನೀರಾವರಿ. ವ್ಯಾಪಾರ. ಚಿಕ್ಕ ಉದ್ದಿಮೆಗಳ ಸ್ಥಾಪನೆ, ಹಂಚಿಕೆ ಪೂರೈಕೆ ಗೃಹ ಕೈಗಾರಿಕೆ, ಗ್ರಾಮಾಂತರ ವಿದ್ಯುದ್ದೀಕರಣ, ವಸತಿ ಮೊದಲಾದವು ಆರ್ಥಿಕ ರಂಗಗಳಲ್ಲಿ ಪ್ರಮುಖವಾದ ಸಂಘಟನೆಯಾಗಿವೆ.

ಭಾರತದಲ್ಲಿ ಸಹಕಾರದ ಪ್ರಗತಿಯು ವಿವಿಧ ಯೋಜನೆಗಳಲ್ಲಿ ಯಾವ ರೀತಿಯಾಗಿದೆ. ಅನ್ನುವದನ್ನು ಕೋಷ್ಟಕ ೨.೨ ರಲ್ಲಿ ತೋರಿಸಿದಂತಿದೆ.

ಮೊದಲನೆಯ ಪಂಚವಾರ್ಷಿಕ ಯೋಜನೆಗಳಲ್ಲಿ ಸಹಕಾರವು ಕೃಷಿ, ವ್ಯಾಪಾರ, ಮಾರುಕಟ್ಟೆ ಹಣಕಾಸು, ಕೈಗಾರಿಕೆ ಮುಂತಾದವುಗಳಲ್ಲಿ ಸಹಕಾರ ಜಾರಿಗೊಳಿಸಬೇಕೆಂದು ಅಭಿಪ್ರಾಯಪಟ್ಟಿತು. ಈ ಯೋಜನೆಯ ಅವಧಿಯಲ್ಲಿ ಸಹಕಾರ ಸಂಘಗಳು ಮತ್ತು ದುಡಿಯುವ ಬಂಡವಾಳ ಹೆಚ್ಚಾಯಿತು. ಕ್ರಮವಾಗಿ ಶೇ ೩೨.೨೫ ಮತ್ತು ಶೇ ೭೦ ರಂತೆ ಹೆಚ್ಚಿತು. ಅದರಂತೆ ಸಹಕಾರಿ ಸಂಘಗಳ ಶೇ ೧೫.೬ ರಷ್ಟು ಜನಸಂಖ್ಯೆಗಳನ್ನು ಒಳಗೊಂಡು ಶೇ ೭೦ ರಷ್ಟು ಗ್ರಾಮಗಳನ್ನು ತಮ್ಮ ವ್ಯಾಪ್ತಿಗೆ ಅಳವಡಿಸಿಕೊಂಡವು. ರಾಜ್ಯ ಸಹಕಾರಿ ಬ್ಯಾಂಕುಗಳ ಸಂಖ್ಯೆಯು ೬ ರಿಂದ ೯ ಕ್ಕೆ ಹೆಚ್ಚಿಸಿತು. ಪ್ರಾಥಮಿಕ ಭೂ ಅಡಮಾನ ಬ್ಯಾಂಕುಗಳ ಸಂಖ್ಯೆಯು ೧೬ ರಿಂದ ೩೦೨ ಕ್ಕೆ ಹೆಚ್ಚಾದವು. ಆದರೆ ಕೇಂದ್ರ ಸಹಕಾರ ಬ್ಯಾಂಕುಗಳ ಸಂಖ್ಯೆಯು ೫೦೫ ರಿಂದ ೪೭೮ ಕ್ಕೆ ಇಳಿಯಿತು.

ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರಕ್ಕಾಗಿ ೪೭ ಕೋಟಿ ರೂಪಾಯಿಗಳನ್ನು ಮಿಸಲಿಡಲಾಯಿತು. ೧೯೫೬ ಸಪ್ಟೆಂಬರ ೧ ರಂದು ಭಾರತದ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ಮತ್ತು ದಾಸ್ತಾನು ಮಳಿಗೆ ಮಂಡಳಿಯ ಸ್ಥಾಪನೆಯಾಯಿತು. ಅದಲ್ಲದೆ ೧೯೫೯ ರಲ್ಲಿ ಸಹಕಾರಿ ಪತ್ತಿನ ಸಮಿತಿಯು ವ್ಹಿ. ಎಲ್. ಮೆಹ್ತಾ ಅವರ ಅಧ್ಯಕ್ಷತೆಯಲ್ಲಿ ಜಾರಿಗೆ ಬಂದಿತು. ಅದು ಮಹತ್ವದ ಸಲಹೆಗಳನ್ನು ನೀಡಿತು. ಈ ಯೋಜನೆಯಲ್ಲಿ ಸಹಕಾರ ಸಂಘಗಳ

ಕೋಷ್ಟಕ ೨.೨.

೭ ನೆಯ ಯೋಜನೆಯ ಅಂತ್ಯದಲ್ಲಿ ಸಹಕಾರದ ಪ್ರಗತಿ.

ಯೋಜನೆಗಳು	ಸಹಕಾರಕ್ಕೆ ಮಾಡಿದ ವೆಚ್ಚ ಕೋಟಿ ರೂ. ಗಳಲ್ಲಿ	ಸದಸ್ಯರ ಸಂಖ್ಯೆ ಲಕ್ಷಗಳಲ್ಲಿ	ಸಂಘಗಳ ಸಂಖ್ಯೆ ಲಕ್ಷಗಳಲ್ಲಿ	ಕ್ರಿಯಾ ಬಂಡವಾಳ ಕೋ.ರೂ.ಗಳಲ್ಲಿ	ಜನ ಸಂಖ್ಯೆ ಒಳಗೊಂಡದ್ದು	ರಾಜ್ಯ ಬ್ಯಾಂಕು	ಹಳ್ಳಿಗಳು ಒಳಗೊಂಡಿದ್ದು
೧	೨	೩	೪	೫	೬	೭	೮
೧ ನೆಯ ಯೋಜನೆ	.೬೧೬	೭	೨.೪೦	೪೬೯	೧೫.೬	೨೦	೭೦%
೨ ನೆಯ ಯೋಜನೆ	೪೭	೩೪೨	೩.೦೦	೧,೩೧೨	೨೪.೦	೨೨	೭೫%
೩ ನೆಯ ಯೋಜನೆ	೭೬	೫೧೨	೩.೫೦	೨,೮೦೦	೩೮.೦	೨೩	೯೦%
ವಾರ್ಷಿಕ ಯೋಜನೆ ೨	೬೪	೬೦೧	೩.೨೬	೪,೪೭೨	೪೩.೦	೨೫	೯೨%
೪ ನೆಯ ಯೋಜನೆ	೧೭೮	೬೮೫	೩.೩೦	೬,೨೪೨	೪೫.೦	೨೫	೯೫%
೫ ನೆಯ ಯೋಜನೆ	೪೨೩	೬೫೧	೩.೩೬	೮,೫೮೬	೪೮.೦	೨೭	೯೫%
೬ ನೆಯ ಯೋಜನೆ	೯೧೪	೭೧೨	೩.೪೬	೧೦,೨೪೯	೫೨.೦	೨೮	೯೨%
೭ ನೆಯ ಯೋಜನೆ	೧೨೨೪	೭೮೦	೩.೬೫	೧೫,೪೪೯	೫೮.೦	೨೮	೯೮%

ಆಧಾರ : ಭಾರತೀಯ ರಿಜರ್ವ ಬ್ಯಾಂಕ ವರದಿ ಮತ್ತು ನಬಾರ್ಡ.
೧೯೯೧ ಪುಟ ಸಂಖ್ಯೆ ೨೭.

ಸಂಖ್ಯೆ ಶೇ. ೨೫ ರಷ್ಟು ಹೆಚ್ಚಾದವು. ಮತ್ತು ಸದಸ್ಯರ ಸಂಖ್ಯೆ ೭ ಲಕ್ಷದಿಂದ ೩೪೨ ಲಕ್ಷಗಳಿಗೆ ಹೆಚ್ಚಾಯಿತು. ಕ್ರಿಯಾ ಬಂಡವಾಳ ೪೬೯ ಕೋಟಿ ರೂ. ಗಳಿಂದ ೧,೩೧೩ ಕೋಟಿ ರೂ ಗಳಿಗೆ ಹೆಚ್ಚಾಯಿತು. ಅದರಂತೆ ರಾಜ್ಯ ಸಹಕಾರ ಬ್ಯಾಂಕುಗಳ ಸಂಖ್ಯೆಯು ೨೦ ರಿಂದ ೨೨ ಕ್ಕೆ ಹೆಚ್ಚಿದವು. ಸಹಕಾರ ಪತ್ತಿನ ರಚನೆಯಲ್ಲಿ ಶೇ ೭೫ ರಷ್ಟು ಗ್ರಾಮಗಳನ್ನೊಳಗೊಂಡ ಶೇ ೨೪ರಷ್ಟು ಜನಸಂಖ್ಯೆಯನ್ನು ತನ್ನ ವ್ಯಾಪ್ತಿಗೆ ಅಳವಡಿಸಿಕೊಂಡಿತು. ಅದರಂತೆ ಪ್ರತಿ ಜಿಲ್ಲೆಗೊಂದು ಕೇಂದ್ರ ಬ್ಯಾಂಕು ಸ್ಥಾಪನೆಯ ನೀತಿಯನ್ನು ಹಮ್ಮಿಕೊಳ್ಳಲಾಯಿತು.

ಮೂರನೆಯ ಯೋಜನೆಯಲ್ಲಿ ೭೬ ಕೋಟಿ ರೂ. ಗಳನ್ನು ಮೀಸಲಿಡಲಾಯಿತು. ೧೯೬೩ ರ ಸಹಕಾರ ಆಡಳಿತ ಸಮೀತಿಯು ಶ್ರೀ ವ್ಹಿ. ಎಲ್. ಮೆಹ್ತಾ ಅವರ ಅಧ್ಯಕ್ಷತೆಯಲ್ಲಿ ಜಾರಿಗೆ ಬಂದಿತು. ೧೯೬೪ ರಲ್ಲಿ ಎಂ. ಎಲ್. ದಂತವಾಲ ಅವರ ಅಧ್ಯಕ್ಷತೆಯಲ್ಲಿ ಸಹಕಾರ ಮಾರುಕಟ್ಟೆ ಸಮೀತಿ, ಶ್ರೀ ಆರ್. ಎನ್. ಮಿರ್ಧಾ ಅವರ ಅಧ್ಯಕ್ಷತೆಯಲ್ಲಿ ಸಹಕಾರ ಸಮಿತಿಗಳು ಜಾರಿಗೆ ಬಂದವು. ಈ ಯೋಜನೆಯಲ್ಲಿ ಶೇ ೯೦ ರಷ್ಟು ಹಳ್ಳಿಗಳನ್ನು ಒಳಗೊಂಡಂತೆ ಶೇ ೩೮ ರಷ್ಟು ಜನ ಸಂಖ್ಯೆಯನ್ನು ಸಹಕಾರ ವ್ಯಾಪ್ತಿಯಲ್ಲಿ ತರಲಾಯಿತು. ಸಹಕಾರ ಸಂಘಗಳ ಸಂಖ್ಯೆ ೩ ಲಕ್ಷಕ್ಕೆ ಹೆಚ್ಚಾಯಿತು. ಅದರಂತೆ ಸದಸ್ಯರ ಸಂಖ್ಯೆಯು ೩೪೩ ಲಕ್ಷದಿಂದ ೫೧೯ ಲಕ್ಷಕ್ಕೆ ಮತ್ತು ಇವುಗಳ ಕ್ರಿಯಾ ಬಂಡವಾಳವು ರೂ. ೧,೩೧೨ ಕೋಟಿ ರೂ. ಗಳಿಂದ ೨,೮೦೦ ಕೋಟಿ ರೂ. ಗಳಿಗೆ ಹೆಚ್ಚಾಯಿತು. ರಾಜ್ಯ ಸಹಕಾರ ಬ್ಯಾಂಕುಗಳು ಸಂಖ್ಯೆಯು ೨೨ರಿಂದ೨೩ಕ್ಕೆ ಹೆಚ್ಚಾದವು. ಯೊಜನೆಯ ಅಂತ್ಯದೊಳಗೆ ೩೪೬ ಕೆಂದ್ರ ಸಹಕಾರ ಬ್ಯಾಂಕಗಳು ೧೮ ಕೇಂದ್ರ ರಾಜ್ಯ ಭೂ ಅಡಮಾನ ಬ್ಯಾಂಕುಗಳು ಮತ್ತು ೬೭೩ ಪ್ರಾಥಮಿಕ ಭೂ ಅಡಮಾನ ಬ್ಯಾಂಕುಗಳು ಅಸ್ತಿತ್ವದಲ್ಲಿದ್ದವು.

ನಂತರ ವಾರ್ಷಿಕ ಮೂರು ಯೋಜನೆಗಳಲ್ಲಿ ಸಹಕಾರದ ಪ್ರಗತಿ ಅಷ್ಟೊಂದು ತೃಪ್ತಿಕರವಾಗಿಲ್ಲ. ಕೇವಲ ಕ್ರಿಯಾ ಬಂಡವಾಳ ಶೇ ೫೯ ರಷ್ಟು ಹೆಚ್ಚಾಯಿತು. ಅದು ಒಟ್ಟು ೨೮೦೦ ಕೋಟಿ ರೂ. ಗಳಿಂದ ರೂ. ೪,೪೭೨ ಕೋಟಿ ರೂ. ಗಳಿಗೆ ಹೆಚ್ಚಿತು. ರಾಜ್ಯ ಸಹಕಾರಿ ಬ್ಯಾಂಕುಗಳ ಸಂಖ್ಯೆ ೨೩ ರಿಂದ ೨೫ ಕ್ಕೆ ಹೆಚ್ಚಿದವು. ಅದರಂತೆ ೭೪೦ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ೩೪೧ ಕೇಂದ್ರ ಸಹಕಾರ ಬ್ಯಾಂಕುಗಳು ಈ ಯೋಜನೆಯ ಅಂತ್ಯದಲ್ಲಿ ಕಾರ್ಯ ಮಾಡುತ್ತಿದ್ದವು.

ಅದರಂತೆ ನಾಲ್ಕನೆಯ ಯೋಜನೆಯಲ್ಲಿ ಕೃಷಿ ಸಹಕಾರ ಮತ್ತು ಅನುಭೋಗ ಸಹಕಾರಕ್ಕೆ ಒತ್ತು ನೀಡಿತು. ಈ ಯೋಜನೆಯಲ್ಲಿ ಸಹಕಾರ ಸಂಘಗಳ ಸಂಖ್ಯೆ ಶೇ ೪.೨೫ ಮತ್ತು ಕ್ರಿಯಾ ಬಂಡವಾಳವು ಶೇ ೪.೧೯ ರಂತೆ ಹೆಚ್ಚಾಯಿತು. ಒಟ್ಟು ಸಹಕಾರ ಸಂಘಗಳ ಸಂಖ್ಯೆ ೩.೩೦ ಲಕ್ಷಕ್ಕೆ ಮತ್ತು ಕ್ರಿಯಾ ಬಂಡವಾಳವು ರೂ. ೬,೩೪೭ ಕೋಟಿ ರೂ. ಗಳಿಗೆ ಹೆಚ್ಚಾಯಿತು. ಈ ಯೋಜನೆಯ ಅಂತ್ಯದಲ್ಲಿ ೧೯೭೩-೭೪ ರ ವೇಳೆಗೆ ಶೇ ೯೫ ಗ್ರಾಮಗಳನ್ನೊಳಗೊಂಡು ಶೇ ೪೫ ಜನಸಂಖ್ಯೆ ಸಹಕಾರದ ವ್ಯಾಪ್ತಿಯಲ್ಲಿ ಬಂದವು. ಅದರಂತೆ ೨೬ ರಾಜ್ಯ ಸಹಕಾರ ಬ್ಯಾಂಕುಗಳು ಮತ್ತು ೩೪ ಕೇಂದ್ರ ಬ್ಯಾಂಕುಗಳು ಅಸ್ತಿತ್ವದಲ್ಲಿದ್ದವು.

ಐದನೆಯ ಪಂಚವಾರ್ಷಿಕ ಯೋಜನೆಲ್ಲಿ ಸಹಕಾರದ ಅಭಿವೃದ್ಧಿಗೆ ೪೨೩ ಕೋಟಿ ರೂ ಗಳನ್ನು ಮೀಸಲಿಡಲಾಯಿತು. ಇದು ಹಿಂದಿನಕ್ಕಿಂತಲು ಶೇ ೧೩.೭ ರಷ್ಟು ಹೆಚ್ಚಾಗಿತ್ತು. ಇಲ್ಲಿ ಸಂಘಗಳ ಸಂಖ್ಯೆ ೩.೩೬ ಕ್ಕೆ ಹೆಚ್ಚಾದರೆ, ಸದಸ್ಯರ ಸಂಖ್ಯೆಯು ೬೫೧ ಲಕ್ಷಕ್ಕೆ ಹೆಚ್ಚಾಯಿತು. ಇವುಗಳ ಕ್ರಿಯಾ ಬಂಡವಾಳವು ರೂ. ೮,೫೮೬ ಕೋಟಿ ರೂ ಹೆಚ್ಚಾಯಿತು. ಅದರಂತೆ ೯೫ ರಷ್ಟು ಗ್ರಾಮಗಳನ್ನೊಳಗೊಂಡು ಶೇ ೪೮ ರಷ್ಟು ಜನಸಂಖ್ಯೆಯನ್ನು ಸಹಕಾರದ ವ್ಯಾಪ್ತಿಗೆ ತರಲಾಯಿತು. ರಾಜ್ಯ ಸಹಕಾರಿ ಬ್ಯಾಂಕುಗಳ ಸಂಖ್ಯೆಯು ೭೨ ಕ್ಕೆ ತಮ್ಮ ಸಂಖ್ಯಾ ಬಲವನ್ನು ಹೆಚ್ಚಿಸಿಕೊಂಡವು. ೩೩೭ ಕೇಂದ್ರ ಸಹಕಾರ ಬ್ಯಾಂಕುಗಳು, ೧೯ ರಾಜ್ಯ ಭೂ ಅಭಿವೃದ್ಧಿ ಬ್ಯಾಂಕಗಳು ೭೮೦ ಪ್ರಾಥಮಿಕ ಭೂ ಅಡಮಾನ ಬ್ಯಾಂಕುಗಳು ಈ ಯೋಜನೆಯ ಅಂತ್ಯದಲ್ಲಿ ಅಸ್ತಿತ್ವದಲ್ಲಿದ್ದವು.

ಆರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರ ಅಭಿವೃದ್ಧಿಗಾಗಿ ರೂ. ೯೧೩ ಕೋಟಿ ರೂ.ಗಳನ್ನು ಮೀಸಲಿಡಲಾಯಿತು. ೩.೪೦ ಲಕ್ಷ ಸಹಕಾರ ಸಂಘಗಳು, ೭೧೨ ಲಕ್ಷ ಸದಸ್ಯರನ್ನೊಳಗೊಂಡ ೧೦.೨೩೮ ಕೋಟಿ ರೂ.ಗಳ ಕ್ರಿಯಾ ಬಂಡವಾಳವನ್ನು ಹೊಂದಿದ್ದವು. ಈ ಹಿಂದಿನಕ್ಕಿಂತಲೂ ಶೇ ೧೯.೭೮ ರಷ್ಟು ಹೆಚ್ಚಾಯಿತು. ಈ ಯೋಜನೆಯ ಅಂತ್ಯದೊಳಗೆ ೧೯ ಕೇಂದ್ರ ರಾಜ್ಯ ಭೂ ಅಡಮಾನ ಬ್ಯಾಂಕುಗಳು ಮತ್ತು ೮೯೯ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ಒಟ್ಟು ೨,೨೬೨ ಶಾಖೆಗಳು ಅಂತ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದವು.

ಏಳನೆಯ ಪಂಚವಾರ್ಷಿಕ ಯೋಜನೆಯಲ್ಲಿ ೧,೪೦೦ ಕೋಟಿ ರೂ.ಗಳನ್ನು ಸಹಕಾರಕ್ಕಾಗಿ ಮಿಸಲಿಡಲಾಯಿತು. ಅದರಂತೆ ರಾಜ್ಯಗಳಿಗೆ ೮೭೦ಕೋಟಿ ರೂ ಗಳನ್ನು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ರೂ ೩೦.೪೦ ಕೋಟಿ ರೂ ಗಳನ್ನು ಒದಗಿಸಲು ನಿರ್ದರಿಸಲಾಯಿತು. ಇಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ೨೨೦ಕ್ಕೆ ಹೆಚ್ಚಾದವು. ಸಹಕಾರಿ ನೂಲು ಕೈಗಾರಿಕೆಗಳು ಮತ್ತು ಶೈತ್ಯಾಗಾರಗಳು ೧೩೦ ಮತು ೨೫೦ ಹೆಚ್ಚಾದವು.

ಎಂಟನೆಯ ಪಂಚವಾರ್ಷಿಕ ಯೊಜನೆಯಲ್ಲಿ ಕೇಂದ್ರವು ೩,೦೫೭ ಕೋಟಿ ರೂ.ಗಳ ವೆಚ್ಚ ಮಾಡಲು ಅಂದಾಜು ಮಾಡಿದೆ. ೧೯೯೩ ರ ವೇಳೇಗೆ ಅಲ್ಪಾವಧಿ ಸಾಲವನ್ನು ೪೩.೫೦ ಕೋಟಿ ರೂ. ಗಳನ್ನು ನೀಡಿದ್ದರೆ, ೩೬೦ ಕೋಟಿ ರೂ. ಗಳನ್ನು ಮಧ್ಯಾವಧಿ ಸಾಲ ನೀಡಲಾಗಿದೆ. ಅದರಂತೆ ಇನ್ನಿತರ ಸಹಕಾರಿ ಕ್ಷೇತ್ರಗಳ ಗುರಿ ಸಾಧನೆಗೆ ಪ್ರಯತ್ನಿಸಲಾಯಿತು.

ಒಂಭತ್ತನೆಯ ಪಂಚವಾರ್ಷಿಕ ಯೋಜನೆಯಲ್ಲಿ ಜನರ ಸಹಭಾಗಿತ್ವದ ಸಂಸ್ಥೆಗಳಾದ ಪಂಚಾಯತ ರಾಜ್ಯ ಸಂಸ್ಥೆಗಳು, ಸಹಕಾರ ಸಂಘಗಳು ಮತ್ತು ಸ್ವ-ಸಹಾಯ ಗುಂಪುಗಳನ್ನು ಅಭಿವೃದ್ಧಿ ಪಡಿಸುವ ಗುರಿಯನ್ನು ಇಟ್ಟುಕೊಂಡಿತ್ತು.

ಹತ್ತನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರ ಕ್ಷೇತ್ರಕ್ಕೆ ನಬಾರ್ಡ ಅಡಿಯಲ್ಲಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಗೆ ಸರಕಾರದ ಗ್ಯಾರಂಟಿ ಗ್ರಾಮೀಣ ಬಾಂಡಗಳನ್ನು ೫೦೦೦ ಕೋಟಿ ರೂ ವರೆಗೆ ತೆರಿಗೆ ರಹಿತವಾಗಿ ಕೊಡಲು ತೀರ್ಮಾನಿಸಲಾಯಿತು. ಅದರಂತೆ ೫೦೦ ಕೋಟಿ ರೂ. ಗಳನ್ನು ಸಹಕಾರ ಕ್ಷೇತ್ರಕ್ಕೆ ಆರ್. ಬಿ. ಆಯ್. ಮತ್ತು ನಬಾರ್ಡ ಕೊಡಲು

ತೀರ್ಮಾನಿಸಲಾಯಿತು. ಸಹಕಾರದ ಎಲ್ಲ ಕ್ಷೇತ್ರವನ್ನು ಒಂದು ಛತ್ರಿ ಅಡಿ ತರುವಂತೆ ಆಯ್. ಆಯ್. ಡಿ.ಸಿ.ಎ ಅನ್ನು ಆಯೋಜಿಸಲಾಯಿತು. ಅದರಂತೆ ಸಹಕಾರ ತರಬೇತಿ ಶಿಕ್ಷಣ ಅಭಿವೃದ್ಧಿಗೆ ಒತ್ತು ನೀಡಲಾಗಿದೆ.

೨.೬. ಕರ್ನಾಟಕದಲ್ಲಿ ಸಹಕಾರದ ಚಳುವಳಿ :

ಕರ್ನಾಟಕದಲ್ಲಿ ಸಹಕಾರದ ಚಳುವಳಿಯು ಅಧಿಕೃತವಾಗಿ ೧೯೦೫ ರಲ್ಲಿ ಪ್ರಾರಂಭವಾಯಿತು. ಈ ಚಳುವಳಿಯಿಂದಾಗಿ ಜನರ ಜೀವನ ಮಟ್ಟದಲ್ಲಿ ಮತ್ತು ಆರ್ಥಿಕ ಸ್ಥಿತಿಗತಿಗಳ ಸುಧಾರಣೆಗೆ ಮಹತ್ವದ ಪಾತ್ರವಹಿಸಿತು. ಕರ್ನಾಟಕದಲ್ಲಿ ಮೊಟ್ಟ ಮೊದಲಿಗೆ ಗದಗ ಜಿಲ್ಲೆಯ ಕಣಗಿನಹಾಳದಲ್ಲಿ ಸಹಕಾರಿ ಚಳುವಳಿ ಆರಂಭಗೊಂಡಿದ್ದು ಇತಿಹಾಸ. ೦೮-೦೫-೧೯೦೫ ರಂದು ದಿ. ಸಿದ್ದನಗೌಡಾ ಪಾಟೀಲ ಅವರು ಸಹಕಾರ ಸಂಘವನ್ನು ಸ್ಥಾಪಿಸಿ ಹೊಸ ಇತಿಹಾಸ ಬರೆದರು. ತಮ್ಮ ಗ್ರಾಮದಲ್ಲಿ 'ಕಣಗಿನಹಾಳ ಪತ್ತಿನ ಸಹಕಾರ ಸಂಘ' ಎಂಬ ಹೆಸರಿನಲ್ಲಿ ಆರಂಭಿಸಿದ ಈ ಸಂಸ್ಥೆ ದೇಶದ ಪ್ರಪ್ರಥಮ ಸಹಕಾರ ಸಂಘ. ಕರ್ನಾಟಕದಲ್ಲಿ ಸಹಕಾರ ಚಳುವಳಿಯು ಪತ್ತಿನ ಸಂಘಗಳ ಆರಂಭಗಳ ಮೂಲಕವೇ ಪ್ರಾರಂಭವಾವಾಯಿತ್ತು. ಅದರಂತೆ ಬೆಂಗಳೂರು ನಗರ ಸಹಕಾರಿ ಪತ್ತಿನ ಸಂಘ ಮತ್ತು ಪ್ರಾಥಮಿಕ ಸಹಕಾರಿ ಪತ್ತಿನ ಸಂಘಗಳು ೧೯೦೫ ರಲ್ಲಿ ಪ್ರಾರಂಭವಾದವು.

ಈಗ ಸಧ್ಯಕ್ಕೆ ರಾಜ್ಯದಲ್ಲಿ ಸಹಕಾರಿ ಪತ್ತಿನ ಸಂಘಗಳು, ಗ್ರೇನಬ್ಯಾಂಕುಗಳು, ವಿವಿದ್ದೋದ್ಧೇಶ, ಮಾರುಕಟ್ಟೆ, ಸಂಸ್ಕರಣ, ವ್ಯವಸಾಯ, ಹಾಲು, ಪಶು, ನೀರಾವರಿ, ಮೀನುಗಾರಿಕೆ, ವಿದ್ಯುತ್ತಗ್ರಾಹಕ, ಗೃಹನಿರ್ಮಾಣ, ಕೈಗಾರಿಕೆ ಸಹಕಾರ, ನಗರ ಸಹಕಾರ, ವೆವರಸ ಸಹಕಾರ ಬ್ಯಾಂಕು ಮುಂತಾದವುಗಳು ಕಾರ್ಯನಿರ್ವಹಿಸುತ್ತವೆ. ಇವುಗಳಲ್ಲಿ ನಗರ ಸಹಕಾರ ಬ್ಯಾಂಕುಗಳು ಅತ್ಯಂತ ಲಾಭದ ಹಾದಿಯಲ್ಲಿ ಮುಂದುವರೆಯುತ್ತಿವೆ.

ಕರ್ನಾಟಕ ರಾಜ್ಯದಲ್ಲಿ ಸಹಕಾರಿ ಸಂಘಗಳು ಯಾವ ರೀತಿಯಾಗಿವೆ ಎಂಬುದನ್ನು ಈ ಮುಂದಿನ ಕೋಷ್ಟಕ ೨.೩, ೨.೪ ಮತ್ತು ೨.೫ ರಿಂದ ತಿಳಿದುಕೊಳ್ಳಬಹುದು. ಕೋಷ್ಟಕ ೨.೩ ರಲ್ಲಿ ಮಾರ್ಚ ೨೦೦೭ ರ ವೇಳೆಗೆ ಕರ್ನಾಟಕದಲ್ಲಿ ೨೦ ಅಪೆಕ್ಸ್ ಬ್ಯಾಂಕಗಳು, ೨೧ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ೨೬೮ ನಗರ ಸಹಕಾರಿ ಬ್ಯಾಂಕುಗಳು, ೪,೯೪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು, ೮,೩೦೮ ಹಾಲು ಉತ್ಪಾದಕರ ಸಹಕಾರಿ ಸಂಘಗಳು, ೧೧,೭೬೪ ಇತರೆ ಸಹಕಾರ ಸಂಘಗಳು, ೩೪ ಸಹಕಾರಿ ಸಕ್ಕರೆ ಕಾರ್ಖಾನೆಗಳು ಹಾಗೂ ಇನ್ನೂ ಅನೇಕ ಸಹಕಾರಿ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ. ಅದಲ್ಲದೇ ರಾಜ್ಯದಲ್ಲಿ ೨೫೯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು, ೩೦೬ ಗೃಹ ನಿರ್ಮಾಣ ಸಂಘಗಳು, ೫೦೫ ಹಾಲು ಉತ್ಪಾದಕರ ಸಹಕಾರ ಸಂಘಗಳು, ೨,೦೩೩ ಇತರೆ ಸಹಕಾರಿ ಸಂಘಗಳು ಹಾಗೂ ೩ ಸಹಕಾರಿ ಸಕ್ಕರೆ ಕಾರ್ಖಾನೆಗಳು ಮತ್ತು ಇನ್ನೂ ಕೆಲವು ಸಹಕಾರಿ ಸಂಘಗಳು ಸಮಾಪನೆಗೊಂಡಿವೆ. ಈ ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣಾಭೀವೃದ್ಧಿ ಬ್ಯಾಂಕುಗಳು, ತಾಲೂಕಾ ಕೃಷಿ ಉತ್ಪಾದನಾ ಸಹಕಾರಿ ಸಂಘಗಳು, ಪ್ರಾಥಮಿಕ ಕೃಷಿ ಪತ್ತಿನ

ಕೋಷ್ಟಕ ೨.೩

ಕರ್ನಾಟಕ ಸಹಕಾರ ಸಂಘಗಳ ಪ್ರಗತಿ.

(೩೧-೦೩-೨೦೦೭ ಕ್ಕೆ ಇದ್ದಂತೆ.)

ಅ.ನಂ	ವಿವಿಧ ಸಹಕಾರ ಸಂಘಗಳು	ಕಾರ್ಯನಿರತ	ಕಾರ್ಯಸ್ಥಗಿತ	ಸಮಾಪನೆಗೊಂಡ	ಒಟ್ಟು
೧.	ಅಪೇಕ್ಸ ಸಂಸ್ಥೆಗಳು	೨೦	–	–	೨೦
೨.	ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು	೨೧	–	–	೨೧
೩.	ನಗರ ಸಹಕಾರ ಬ್ಯಾಂಕುಗಳು	೨೬೮	೧	೧೦	೨೭೯
೪.	ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳು	೧೭೪	೧	೨	೧೭೭
೫.	ತಾಲೂಕಾ ಕೃಷಿ ಉತ್ಪಾದನಾ ಸಹಕಾರಿ ಮಾರುಕಟ್ಟೆ ಸಂಘಗಳು	೧೬೯	೨	೧೪	೧೮೫
೬.	ಇತರೆ ಮಾರಾಟ ಮತ್ತು ಕಾರ್ಯ ನಿರ್ವಹಿಸುವ ಸಹಕಾರಿ ಸಂಘಗಳು	೧೨೭	೧೪	೨೭	೧೬೮
೭.	ಜಿಲ್ಲಾ ಕೇಂದ್ರ ಸಗಟು ಸ್ಟೋರ್ಸ	೨೬	೧	೧೧	೩೮
೮.	ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು	೪೪೯೪	೩೬	೨೫೯	೪೭೮೯
೯.	ಗೃಹ ನಿರ್ಮಾಣ ಸಹಕಾರ ಸಂಘಗಳು.	೧೦೫೨	೧೫೪	೩೦೬	೧೫೧೨
೧೦.	ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ	೧೩	–	೨	೧೫
೧೧.	ಹಾಲು ಉತ್ಪಾದಕರ ಸಹಕಾರ ಸಂಘಗಳು	೮೩೦೮	೪೭೨	೫೦೫	೯೨೮೫
೧೨.	ಜಿಲ್ಲಾ ಸಹಕಾರ ಒಕ್ಕೂಟ	೨೪	–	–	೨೪
೧೩.	ಇತರೆ ಸಹಕಾರ ಸಂಘಗಳು	೧೧೭೬೪	೯೮೨	೨೦೩೩	೧೪೭೭೯
೧೪.	ಸಹಕಾರ ಸ್ಪಿನ್ನಿಂಗ ಮಿಲ್ಸ್	೧೨	–	೫	೧೭
೧೫.	ಸಹಕಾರ ಸಕ್ಕರೆ ಕಾರ್ಖಾನೆಗಳು	೩೪	–	೩	೩೭

ಆಧಾರ: www ಸಹಕಾರ ಧರ್ಪಣ. ಕರ್ನಾಟಕ ನಿಕ್. ಇನ್.

[illegible]

ಸಹಕಾರಿ ಸಂಘಗಳು, ಹಾಲು ಉತ್ಪಾದಕರ ಸಹಕಾರಿ ಸಂಘಗಳು ಹಾಗೂ ಇತರೆ ಸಹಕಾರಿ ಸಂಘಗಳ ಸ್ಥಾಪನೆಯ ಪ್ರಗತಿ ರಾಜ್ಯದಲ್ಲಿ ತೃಪ್ತಿಕರವಾಗಿದೆ.

ಕೋಷ್ಟಕ ೨.೪ ರಲ್ಲಿ ಮಾರ್ಚ ೨೦೦೭ ಕ್ಕೆ ರಾಜ್ಯದಲ್ಲಿ ಒಟ್ಟು ೮,೯೧೭ ಕ್ರೇಡಿಟ್ ಸಹಕಾರಿ ಸಂಘಗಳು ಇದ್ದವು. ದಕ್ಷಿಣ ಕರ್ನಾಟಕದಲ್ಲಿ ೩,೯೩೫ ಇದ್ದರೆ, ಉತ್ತರ ಕರ್ನಾಟಕದಲ್ಲಿ ೪,೯೮೨ ಸಂಘಗಳಿದ್ದವು. ಅತೀ ಹೆಚ್ಚು ಬೆಳಗಾವಿ ಜಿಲ್ಲೆಯಲ್ಲಿ ೧,೫೫೫ ಸಂಘಗಳಿದ್ದರೆ, ಚಾಮರಾಜ ನಗರ ಜಿಲ್ಲೆಯಲ್ಲಿ ಅತೀ ಕಡಿಮೆ ೧೦೭ ಸಂಘಗಳಿವೆ. ಹಾಗೂ ನಾನ್ ಕ್ರೇಡಿಟ್ ಸಹಕಾರಿ ಸಂಘಗಳು ರಾಜ್ಯದಲ್ಲಿ ೧೩,೦೧೬ ಇದ್ದವು. ಅವುಗಳಲ್ಲಿ ದಕ್ಷಿಣ ಕರ್ನಾಟಕದಲ್ಲಿ ೯,೫೬೨ ಸಂಘಗಳಿದ್ದರೆ, ಉತ್ತರ ಕರ್ನಾಟಕದಲ್ಲಿ ೩,೪೫೪ ಸಂಘಗಳಿವೆ. ಅತೀ ಹೆಚ್ಚು ಕೋಲಾರ ಜಿಲ್ಲೆಯಲ್ಲಿ ೧,೭೯೭ ಸಂಘಗಳಿದ್ದರೆ, ಅತೀ ಕಡಿಮೆ ಕೊಡಗು ಜಿಲ್ಲೆಯಲ್ಲಿ ೪೬ ಸಂಘಗಳಿವೆ. ಹಾಗೂ ರಾಜ್ಯದಲ್ಲಿ ಒಟ್ಟು ೨,೫೧೭ ಸಂಘಗಳು ಸಮಾಪನೆಗೊಂಡರೆ, ಅತೀ ಹೆಚ್ಚು ೨೬೫ ಗುಲ್ಬರ್ಗಾ, ಅತೀ ಕಡಿಮೆ ೨೦ ಚಿಕ್ಕಮಂಗಳೂರು ಜಿಲ್ಲೆಗಳಲ್ಲಿ ಸಮಾಪನೆಗೊಂಡಿವೆ. ಒಟ್ಟಾಗಿ ಕ್ರೇಡಿಟ್ ಸಹಕಾರಿ ಸಂಘಗಳ ಬೆಳವಣಿಗೆ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಪ್ರಗತಿ ಹೊಂದಿದ್ದರೆ, ನಾನ್ ಕ್ರೇಡಿಟ್ ಸಹಕಾರಿ ಸಂಘಗಳ ಬೆಳವಣಿಗೆ ದಕ್ಷಿಣ ಕರ್ನಾಟಕದ ಜಿಲ್ಲೆಗಳಲ್ಲಿ ಪ್ರಗತಿ ಕಂಡಿವೆ.

ಕೋಷ್ಟಕ ೨.೫ ರಲ್ಲಿ ಮಾರ್ಚ ೨೦೦೬ ಕ್ಕೆ ನಗರ ಪ್ರದೇಶದ ಸಹಕಾರಿ ಬ್ಯಾಂಕುಗಳು ೫೦ ಮುಖ್ಯ ಕಛೇರಿಗಳೊಂದಿಗೆ ೧೪೦ ಶಾಖೆಗಳನ್ನು ಹೊಂದಿ, ೩,೨೧,೫೦೫.೭೧ ರೂ ಗಳ ಠೇವಣಿ ಸಂಗ್ರಹಿಸಿ ೩,೫೮,೩೨೪.೦೦ ರೂ ಗಳನ್ನು ಸಾಲ ನೀಡಿ ಬೆಂಗಳೂರು ಜಿಲ್ಲೆ ಸಾಕಷ್ಟು ಪ್ರಗತಿ ಕಂಡಿದ್ದರೆ, ಕೋಲಾರ ಜಿಲ್ಲೆ ಯಾವುದೇ ಈ ತರಹದ ಸಹಕಾರ ಬ್ಯಾಂಕಗಳನ್ನು ಹೊಂದದೆ ಹಿಂದುಳಿದಿದೆ. ಅದಲ್ಲದೆ ಮಾರ್ಚ ೨೦೦೭ ಕ್ಕೆ ಕೋಡಗು ಜಿಲ್ಲೆ ಪ್ರಥಮ ಸ್ಥಾನದಲ್ಲಿದ್ದರೆ, ಕೋಲಾರ ಜಿಲ್ಲೆ ಕೇವಲ ಒಂದೇ ಇತರೆ ಸಹಕಾರ ಸಂಘವನ್ನು ಹೊಂದಿ, ಕೊನೆಯ ಸ್ಥಾನದಲ್ಲಿ ಇದೆ. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳ ಸಂಖ್ಯೆಯಲ್ಲಿ ಕೋಲಾರ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ತಲಾ ೧೧ ರಂತೆ ಇದ್ದರೆ, ಬೆಂಗಳೂರು ಜಿಲ್ಲೆಯಲ್ಲಿ ಕೇವಲ ೩ ಬ್ಯಾಂಕುಗಳು ಇವೆ. ಚಿಕ್ಕಮಂಗಳೂರು ಜಿಲ್ಲೆ ೧೧,೫೬೭.೬೧ ಲಕ್ಷ ರೂ ಗಳನ್ನು ಸಾಲದ ರೂಪದಲ್ಲಿ ನೀಡಿದರೆ, ಗದಗ ಜಿಲ್ಲೆ ೯೧.೦೧ ಲಕ್ಷ ರೂಗಳ ಸಾಲವನ್ನು ನೀಡಿದೆ. ಕೃಷಿ ಸಹಕಾರಿ ಸಂಘಗಳಿಂದ ಕೊಡಲ್ಪಟ್ಟ ಒಟ್ಟು ಸಾಲವನ್ನು ನೋಡಿದಾಗ ಬೆಳಗಾವಿ ಜಿಲ್ಲೆ ೨೫೩.೧೩ ಕೋಟಿ ರೂ ಗಳನ್ನು ಕೊಟ್ಟು ಪ್ರಥಮ ಸ್ಥಾನದಲ್ಲಿದ್ದರೆ ಕೋಲಾರ ಜಿಲ್ಲೆ ೦.೩೬ ಕೋಟಿ ರೂಗಳ ಸಾಲ ಕೊಟ್ಟು ಕೊನೆಯ ಸ್ಥಾನದಲ್ಲಿ ಇದೆ. ಒಟ್ಟಾಗಿ ಎಲ್ಲ ಜಿಲ್ಲೆಗಳ ಪ್ರಗತಿ ತೃಪ್ತಿದಾಯಕವಾಗಿದೆ.

[illegible]

[illegible]

[illegible]

ಕೋಷ್ಟಕ ೨.೪.

ಕರ್ನಾಟಕದಲ್ಲಿ ಸಹಕಾರ ಸಂಘಗಳು

(೩೧-೦೩-೨೦೦೭ ಕ್ಕೆ ಇದ್ದಂತೆ.)

ಕ್ರ. ಸಂ	ಜಿಲ್ಲೆಗಳು	ಕ್ರೇಡಿಟ್ ಸಹಕಾರ ಸಂಘಗಳು			ನಾನ ಕ್ರೇಡಿಟ್ ಸಹಕಾರ ಸಂಘಗಳು					ಸಮಾಪನೆಗೊಂಡ ಸಹಕಾರ ಸಂಘಗಳು		
		ವ್ಯವಸಾಯ	ವ್ಯವಸಾಯೇತರ	ಒಟ್ಟು	ಮಾರುಕಟ್ಟೆ	ಗೃಹ ನಿರ್ಮಾಣ	ಹಾಲು	ಇತರೆ	ಒಟ್ಟು	ಕ್ರೇಡಿಟ್	ನಾನ ಕ್ರೇಡಿಟ್	ಒಟ್ಟು
೧	ಬೆಂಗಳೂರ	೫೧	೫೬೫	೬೧೬	೪	೩೨೨	೩೮೨	೨೯	೭೩೭	೩೬	೧೦೬	೧೪೨
೨	ಬೆಂಗಳೂರ (ಗ್ರಾ)	೧೮೧	೪೬	೨೨೭	೯	೨೧	೧೨೮೮	೩೧	೧೩೪೯	೧೯	೮೮	೧೦೭
೩	ಚಿತ್ರದುರ್ಗ	೧೪೪	೭೧	೨೧೫	೧೧	೧೮	೧೭೧	೧೩	೨೧೩	೧೧	೪೪	೫೫
೪	ದಾವಣಗೆರೆ	೧೮೭	೧೩೬	೩೨೩	೯	೩೨	೩೦೨	೪೨	೩೮೫	೯	೯೮	೧೦೭
೫	ಕೋಲಾರ	೧೯೮	೭೧	೨೬೯	೧೧	೪೧	೧೭೯೬	೪೯	೧೮೯೭	೨೫	೧೪೯	೧೭೪
೬	ಶಿವಮೊಗ್ಗ	೧೭೭	೧೦೪	೨೮೧	೧೮	೪೪	೩೧೧	೯	೩೮೨	೧೧	೬೮	೭೯
೭	ತುಮಕೂರ	೨೪೫	೧೨೪	೩೬೯	೧೩	೩೫	೭೪೮	೧೮	೮೧೪	೬	೬೨	೬೮
೮	ಚಿಕ್ಕಮಂಗಳೂರ	೧೨೫	೨೬	೧೫೧	೨೨	೧೩	೧೮೨	೧೭	೨೩೪	೧	೧೯	೨೦
೯	ದಕ್ಷಿಣ ಕನ್ನಡ	೧೨೭	೬೫	೧೯೨	೯	೩೧	೩೩೧	೫೫	೪೨೬	೩	೨೧	೨೪
೧೦	ಉಡುಪಿ	೫೯	೪೯	೧೦೮	೩	೨೩	೨೬೬	೨೭	೩೧೯	೦	೨೩	೨೩
೧೧	ಹಾಸನ	೨೦೯	೫೫	೨೬೪	೧೩	೨೭	೭೭೧	೦	೮೧೧	೨೫	೬೯	೯೪
೧೨	ಕೊಡಗು	೭೬	೧೨೬	೨೦೨	೧೬	೧	೨೨	೭	೪೬	೭	೧೬	೨೩
೧೩	ಮಂಡ್ಯ	೨೩೯	೪೮	೨೮೭	೧೦	೩೦	೮೭೫	೫	೯೨೦	೫	೬೦	೬೫
೧೪	ಮೈಸೂರ	೨೦೩	೧೨೧	೩೨೪	೧೭	೧೩೭	೫೯೪	೧	೭೪೯	೨೮	೧೨೭	೧೫೫
೧೫	ಚಾಮರಾಜನಗರ	೯೦	೧೭	೧೦೭	೪	೮	೩೬೭	೧	೩೮೦	೪	೨೦	೨೪
	ದಕ್ಷಿಣ ಕರ್ನಾಟಕ	**೨೩೧೧**	**೧೬೨೪**	**೩೯೩೫**	**೧೬೯**	**೭೮೩**	**೮೩೦೬**	**೩೦೪**	**೯೫೬೨**	**೧೯೦**	**೯೭೦**	**೧೧೬೦**
೧೬	ಬೆಳಗಾವಿ	೬೩೫	೯೨೦	೧೫೫೫	೪೩	೧೨೦	೫೨೨	೩೨	೭೧೭	೨೧	೮೬	೧೦೭
೧೭	ಬಿಜಾಪುರ	೨೫೧	೨೪೫	೪೯೬	೬	೫೩	೬೨	೭	೧೨೮	೧೯	೧೦೮	೧೨೭
೧೮	ಬಾಗಲಕೋಟೆ	೨೦೭	೨೪೭	೪೫೪	೬	೩೩	೨೩೨	೧೬	೨೮೭	೯	೧೧೭	೧೨೬
೧೯	ಧಾರವಾಡ	೧೭೧	೧೬೩	೩೩೪	೧೭	೧೬೧	೯೫	೯	೨೮೨	೨೩	೧೬೮	೧೯೧
೨೦	ಗದಗ	೧೬೦	೧೦೬	೨೬೬	೧೨	೨೭	೧೨೬	೧೦	೧೭೫	೧೧	೭೦	೮೧
೨೧	ಹಾವೇರಿ	೨೩೭	೧೧೨	೩೪೯	೮	೨೪	೨೩೧	೩	೨೬೬	೮	೮೮	೯೬
೨೨	ಉತ್ತರಕನ್ನಡ	೧೭೬	೧೧೫	೨೯೧	೧೩	೨೫	೧೩೯	೧೪	೧೯೧	೩	೮೮	೯೧
೨೩	ಬಳ್ಳಾರಿ	೧೫೫	೬೩	೨೧೮	೧೩	೪೧	೨೪೯	೩	೩೦೬	೧೩	೮೦	೯೩
೨೪	ಬೀದರ	೧೭೭	೧೧೦	೨೮೭	೧೧	೩೭	೨೬೭	೧೩	೩೨೮	೭	೭೧	೭೮
೨೫	ಗುಲ್ಬರ್ಗ	೨೫೨	೧೭೧	೪೨೩	೧೬	೮೮	೧೮೫	೧೨೩	೪೧೨	೨೧	೨೪೪	೨೬೫
೨೬	ರಾಯಚೂರ	೧೩೨	೪೫	೧೭೭	೭	೪೧	೧೨೭	೨೩	೧೯೮	೯	೪೫	೫೪
೨೭	ಕೊಪ್ಪಳ	೯೫	೩೭	೧೩೨	೮	೨೪	೧೧೬	೬	೧೫೪	೮	೪೦	೪೮
	ಉತ್ತರ ಕರ್ನಾಟಕ	**೨೬೪೮**	**೨೩೩೪**	**೪೯೮೨**	**೧೬೦**	**೬೭೪**	**೨೩೬೧**	**೨೫೯**	**೩೪೫೪**	**೧೫೨**	**೧೨೦೫**	**೧೩೫೭**
	ರಾಜ್ಯ	**೪೯೫೯**	**೩೯೫೮**	**೮೯೧೭**	**೩೨೯**	**೧೪೫೭**	**೧೦೬೬೭**	**೫೬೩**	**೧೩೦೧೬**	**೩೪೨**	**೨೧೭೫**	**೨೫೧೭**

ಆಧಾರ: www ಸಹಕಾರಧರ್ಪಣ ಕರ್ನಾಟಕ ನಿಕ್ ಇನ್

[illegible]

ಕೋಷ್ಟಕ ೨.೫.

ಕರ್ನಾಟಕದಲ್ಲಿ ಸಹಕಾರ ಸಂಘಗಳ ಮತ್ತು ಅವುಗಳಿಂದ ಕೊಡಲ್ಪಟ್ಟ ಸಾಲದ ವಿವರ

(೩೧-೦೩-೨೦೦೭ ಕ್ಕೆ ಇದ್ದಂತೆ)

ಅ. ನಂ	ಜಿಲ್ಲೆಗಳು	ನಗರ ಪ್ರದೇಶದ ಸಹಕಾರ ಬ್ಯಾಂಕುಗಳು (೩೧-೦೩-೨೦೦೬)				ಇತರ ಸಹಕಾರ ಸಂಘಗಳು	ಪ್ರಾ.ಭೂ.ಅ ಬ್ಯಾಂಕುಗಳು ೩೧/೩/೦೭		ಕೃಷಿ ಸಹಕಾರ ಸಂಘಗಳಿಂದ ಕೊಡಲ್ಪಟ್ಟ ಸಾಲ (ಕೋಟಿಗಳು) (೩೧-೦೩-೨೦೦೭)		
		ಮುಖ್ಯ ಕಛೇರಿಗಳು	ಶಾಖೆಗಳು	ಠೇವಣಿ (ಲಕ್ಷ)	ಸಾಲ ನೀಡಿಕೆ (ಲಕ್ಷ)	೩೧/೩/೦೭ ಕ್ಕೆ	ಸಂಖ್ಯೆ	ಒಟ್ಟು ಸಾಲಗಳು	ಅಲ್ಪಾವಧಿ	ಮಧ್ಯಾವಧಿ	ಒಟ್ಟು
೧	ಬೆಂಗಳೂರ	೫೦	೧೪೦	೩೨೧೫೦೫.೭೧	೩೫೮೩೨೪.೦೦	೪೮	೩	೧೭೨೩.೩೦	೯.೮೮	೦.೦೦	೯.೮೮
೨	ಬೆಂಗಳೂರ (ಗ್ರಾ)	೪	೧	೩೭೪೩.೧೭	೨೮೪೮.೫೧	೪	೮	೩೧೭೧.೬೩	೫೪.೭೪	೦.೦೦	೫೪.೭೪
೩	ಚಿತ್ರದುರ್ಗ	೬	೧೦	೭೪೮೯.೨೨	೬೬೧೮.೬೨	೫	೬	೩೬೦೩.೬೭	೨೪.೩೯	೦.೨೬	೨೪.೬೫
೪	ದಾವಣಗೆರೆ	೧೨	೨೮	೩೮೨೦೩.೨೮	೨೨೪೫೫.೪೪	೧೨	೬	೭೪೬೮.೮೦	೯೬.೩೨	೦.೭೨	೯೭.೦೪
೫	ಕೋಲಾರ	೦	೦	೦.೦೦	೦.೦೦	೧	೧೧	೨೮೯೧.೯೫	೦.೩೬	೦.೦೦	೦.೩೬
೬	ಶಿವಮೊಗ್ಗ	೮	೩	೬೨೩೧.೯೨	೪೯೫೩.೦೮	೯	೮	೭೬೦೭.೪೮	೯೭.೯೩	೫.೭೯	೧೦೩.೭೨
೭	ತುಮಕೂರ	೧೨	೩೦	೫೨೮೪೦.೭೨	೩೧೧೩೭೪೧	೧೩	೧೦	೪೯೧೪.೦೪	೪೬.೮೮	೧.೮೧	೪೮.೬೯
೮	ಚಿಕ್ಕಮಂಗಳೂರ	೩	೦	೨೧೦೨.೬೮	೧೫೧೫.೦೦	೪	೮	೧೧೫೬೭.೬೧	೫೬.೬೬	೩.೨೪	೫೯.೯೦
೯	ದಕ್ಷಿಣ ಕನ್ನಡ	೮	೪೫	೧೯೧೩೯.೬೫	೧೦೭೭೩.೪೫	೧೨	೫	೫೩೪೦.೦೪	೨೦೩.೯೦	೨೪.೪೪	೨೨೮.೩೪
೧೦	ಉಡುಪಿ	೭	೩೦	೧೬೭೫೦.೯೩	೧೩೭೦೬.೧೨	೭	೩	೨೦೦೪.೭೩	೩೧.೨೦	೭.೧೨	೩೮.೩೨
೧೧	ಹಾಸನ	೫	೦	೪೩೭೧.೩೮	೫೧೩೭೫.೭೬	೭	೮	೫೮೭೯.೯೧	೧೨೧.೨೪	೦.೨೮	೧೨೧.೫೨
೧೨	ಕೊಡಗು	೪	೧	೨೩೬೯.೪೬	೧೫೩೩.೪೩	೧೦೯	೩	೧೯೦೬.೪೩	೧೨೬.೬೬	೧೯.೩೮	೧೪೬.೦೪
೧೩	ಮಂಡ್ಯ	೩	೦	೧೪೨೯.೬೬	೪೨೯.೫೦	೪	೭	೨೯೪೭.೬೬	೯೮.೮೨	೩.೩೩	೧೦೨.೧೫
೧೪	ಮೈಸೂರ	೧೦	೪	೧೯೨೭೧.೪೬	೧೮೪೦೦.೩೧	೧೨	೭	೩೮೦೨.೬೮	೭೩.೬೮	೬.೭೮	೮೦.೪೬
೧೫	ಚಾಮರಾಜನಗರ	೧	೦	೧೯೮.೬೬	೧೨೪.೪೮	೨	೪	೨೦೪೫.೨೮	೨೫.೧೪	೦.೭೫	೨೫.೮೯
	ದಕ್ಷಿಣ ಕರ್ನಾಟಕ	೧೩೩	೨೯೨	೪೯೫೬೪೭೯೦	೫೨೪೧೯೫.೧೧	೨೪೯	೯೭	೬೬೮೬೯.೨೧	೧೦೬೭೮೦	೭೩.೯೦	೧೧೪೧.೭೦
೧೬	ಬೆಳಗಾವಿ	೪೧	೯೦	೫೯೫೧೧.೦೩	೪೩೬೭೨.೯೭	೪೮	೧೦	೪೬೭೭೬೩	೨೭೮.೦೨	೨೫.೧೧	೨೫೩.೧೩
೧೭	ಬಿಜಾಪುರ	೨೦	೧೪	೪೦೪೫೨.೧೧	೨೯೫೦೪.೭೨	೨೪	೫	೨೪೪೭೬೨	೧೮೦.೧೯	೩.೦೪	೧೮೩.೨೩
೧೮	ಬಾಗಲಕೋಟೆ	೧೫	೫೮	೪೫೯೯೫.೯೬	೧೧೭೮೮.೭೮	೧೮	೬	೫೧೩೭೧೪	೨೧೮.೮೭	೬.೧೪	೨೨೫.೦೧
೧೯	ಧಾರವಾಡ	೧೮	೫೪	೬೦೧೭೬.೫೪	೨೨೭೨೩.೪೩	೨೨	೫	೨೮೬೪.೯೯	೩೪.೦೩	೦.೦೮	೩೪.೧೧
೨೦	ಗದಗ	೧೦	೧೦	೫೮೫೩.೯೨	೮೩೪೫.೪೨	೧೨	೫	೯೯೧.೦೧	೧೫.೩೬	೦.೦೨	೧೫.೩೮
೨೧	ಹಾವೇರಿ	೧೨	೪	೧೨೬೬೬.೩೬	೩೪೧೪.೩೧	೧೨	೭	೨೬೯೨.೯೧	೨೩.೩೬	೦.೦೫	೨೩.೪೧
೨೨	ಉತ್ತರಕನ್ನಡ	೧೨	೫೪	೪೨೫೩.೫೩	೨೫೮೫೮.೯೧	೧೬	೧೧	೭೫೯೨.೪೪	೯೩.೫೬	೨೦.೨೨	೧೧೩.೭೮
೨೩	ಬಳ್ಳಾರಿ	೪	೦	೧೬೦೧.೪೯	೮೧೭.೧೯	೫	೭	೩೨೧೪.೪೪	೬೯.೦೯	೨.೦೪	೭೧.೧೩
೨೪	ಬೀದರ	೬	೦	೩೬೪೨.೫೦	೨೭೧೦.೫೨	೮	೫	೧೬೨೦.೯೮	೬೬.೬೫	೩.೦೫	೬೯.೭೦
೨೫	ಗುಲ್ಬರ್ಗ	೧೬	೦	೩೧೬೬.೩೨	೩೧೯೨.೪೩	೧೬	೧೦	೨೫೪೬.೨೨	೩೯.೪೦	೦.೦೦	೩೯.೪೦
೨೬	ರಾಯಚೂರ	೪	೪	೬೮೪.೫೭	೨೦೭೧.೭೫	೫	೫	೨೫೨೮.೨೯	೪೬.೧೯	೨.೮೭	೪೯.೦೬
೨೭	ಕೊಪ್ಪಳ	೫	೨	೨೧೭೩.೨೦	೨೨೧೯.೨೮	೫	೪	೧೧೨೬.೨೯	೫೦.೫೧	೧.೨೮	೫೧.೭೯
	ಉತ್ತರ ಕರ್ನಾಟಕ	೧೬೩	೨೯೦	೨೪೦೧೭೭.೫೩	೧೫೬೩೧೯.೭೧	೧೯೧	೮೦	೩೭೪೩೯.೯೬	೧೦೬೫.೨೩	೬೩.೯೦	೧೧೨೯.೧೩
	ರಾಜ್ಯ	೨೯೬	೫೮೨	೭೩೫೮೨೫.೪೩	೬೮೦೫೧೪.೮೨	೪೪೦	೧೭೭	೧೦೪೩೦೯.೧೬	೨೧೩೩.೦೩	೧೩೭.೮೦	೨೨೭೦.೮೩

ಆಧಾರ: www ಸಹಕಾರಧರ್ಪಣ ಕರ್ನಾಟಕ ನಿಕ್ ಇನ್

[illegible]

೨.೭. ಬೆಳಗಾವಿ ಜಿಲ್ಲೆಯಲ್ಲಿ ಸಹಕಾರದ ಚಳುವಳಿ :

ಸಹಕಾರಿ ಚಳುವಳಿಯು ಬೆಳಗಾವಿ ಜಿಲ್ಲೆಯಲ್ಲಿ ಜನಸಾಮಾನ್ಯರ ಚಳುವಳಿಯಾಗಿ ಬೇರು ಬಿಟ್ಟಿರುತ್ತದೆ. ಈ ಜಿಲ್ಲೆಯಲ್ಲಿ ಸಹಕಾರಿ ಚಟುವಟಿಕೆಗಳು ವಿವಿಧ ರಂಗಗಳಲ್ಲಿ ಹಾಸು ಹೊಕ್ಕಾಗಿರುವದನ್ನು ನೋಡಿಯೇ ಅರಿತುಕೊಳ್ಳಬಹುದು. ೧೯೦೪ ರ ಸಹಕಾರಿ ಸಂಘಗಳ ನೋಂದಣಿ ಕಾಯ್ದೆ ಪಾಸಾದಗಲೇ ಜಿಲ್ಲೆಯಲ್ಲಿ ಈ ಚಳುವಳಿಯು ಜನ್ಮ ತಾಳಿತು. ಆಗ ಕೆಲಮಟ್ಟಿಗೆ ಸಾಂಸ್ಥಿಕವಾಗಿ ಕೃಷಿ ಸಾಲ ನೀಡುವುದರ ಮೇಲೆ ಹೆಚ್ಚಿನ ಒತ್ತನ್ನು ನೀಡಲಾಗಿದೆ. ೧೯೦೪ ರಲ್ಲಿ ಹುಕ್ಕೇರಿ ತಾಲೂಕಿನ ಬೆಲ್ಲದ ಬಾಗೇವಾಡಿಯಲ್ಲಿ ಪ್ರಥಮ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘವನ್ನು ಸ್ಥಾಪಿಸಲಾಯಿತು. ನಂತರ ಅಂಥ ಅನೇಕ ಸಂಘಗಳು ಬೇರೆಡೆ ಜನ್ಮ ತಾಳಿದವು. ೧೯೧೨ ರ ಸಹಕಾರಿ ಸಂಘಗಳ ಕಾಯ್ದೆಯು ಕೃಷಿಯೇತರ ಸಾಲ ನೀಡುವ ಹಾಗೂ ಸಾಲದ ಹೊರತಾಗಿ ಇತರೇ ಉದ್ದೇಶಗಳನ್ನು ಹೊಂದಿದ ಸಂಘಗಳ ಸ್ಥಾಪನೆಗೆ ಉತ್ತೇಜನ ನೀಡಿತು. ಈ ಕಾಲದಲ್ಲಿಯೇ ಕೃಷಿಯೇತರ ಸಂಘಗಳಾದ ಪಟ್ಟಣ ಪತ್ತಿನ ಸಂಘಗಳು ಉದಾಹರಣೆಗೆ ಗೋಕಾಕ ೧೯೦೬,ನೇಕಾರರ ಸಂಘ ಬೆಳಗಾವಿ ೧೯೧೨, ಜಿಲ್ಲಾ ಪೋಲೀಸ್ ನೌಕರರ ಹಾಗೂ ಅಂಚೆ ನೌಕರರ ಪತ್ತಿನ ಸಂಘ ಬೆಳಗಾವಿ ೧೯೨೦ ರಲ್ಲಿ ಪ್ರಾರಂಭವಾಗಿದ್ದವು. ಅದರಂತೆ ೧೯೧೮ ರಲ್ಲಿ ಬೆಳಗಾವಿ ಜಿಲ್ಲಾ ಸಹಕಾರಿ ಪತ್ತಿನ ಬ್ಯಾಂಕು ಸ್ಥಾಪನೆಗೊಂಡು ಜಿಲ್ಲೆಯ ಸಹಕಾರಿ ಚಳುವಳಿಯ ಬುನಾದಿಯನ್ನು ಭದ್ರಗೊಳಿಸಿತು.

೧೯೧೯ ರಲ್ಲಿ ಸಹಕಾರವು ಕೇಂದ್ರದ ವಿಷಯ ಪಟ್ಟಿಯಿಂದ ರಾಜ್ಯಗಳ ವಿಷಯ ಪಟ್ಟಿಗೆ ಬಂದನಂತರ, ಜಿಲ್ಲೆಯಲ್ಲಿ ಕೃಷಿ ಆಧಾರಿತ ಸಹಕಾರಿ ಸಂಘಗಳು ಪಶು ಸಂಗೋಪನೆ ಸದಲಗಾ ೧೯೧೮, ಐನಾಪುರ ೧೯೨೦, ಬೆಳಗಾವಿಯಲ್ಲಿ ಕೋಳಿ ಸಾಕಾಣಿಕೆ ೧೯೨೬, ಅಥಣಿಯಲ್ಲಿ ತಾಲೂಕಾ ಅಭಿವೃದ್ಧಿ ಸಂಘ ೧೯೨೩, ಅದರಂತೆಯೇ ಗೋಕಾಕ ಹಾಗೂ ಮುರಗೋಡ ೧೯೨೮, ಪ್ರಾರಂಭವಾದವು. ೧೯೩೦-೪೦ ರ ಅವಧಿಯಲ್ಲಿ ಅಭಿವೃದ್ಧಿಗೆ ದೀರ್ಘ ಹಣಕಾಸು ಒದಗಿಸಲಿಕ್ಕೆ ಸುಧಾರಿತ ಮಾರುಕಟ್ಟೆಯನ್ನು ಒದಗಿಸುವದಕ್ಕಾಗಿ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ಹಾಗೂ ಟಿ.ಎ.ಪಿ.ಸಿ.ಎಂ. ಎಸ್. ಗಳನ್ನು ಜಿಲ್ಲೆಯಲ್ಲಿ ವಿವಿದಡೆ ಸ್ಥಾಪಿಸಲಾಯಿತು.

೧೯೩೭ ರಲ್ಲಿ ಜಿಲ್ಲಾ ಸಹಕಾರಿ ಯುನಿಯನ್ ಸ್ಥಾಪನೆಯಾಗುವದರೊಂದಿಗೆ ಜಿಲ್ಲೆಯಲ್ಲಿ ಸಹಕಾರಿ ಶಿಕ್ಷಣ, ನಾಯಕತ್ವ ಹಾಗೂ ತರಬೇತಿಗೆ ಸೂಕ್ತ ಚಾಲನೆ ದೊರೆತಂತಾಯಿತು.೧೯೨೯-೩೦ರಲ್ಲಿ ಆರ್ಥಿಕ ಮುಗ್ಗಟ್ಟಿನ ಕಾರಣದಿಂದ ಸಹಕಾರಿ ಚಳುವಳಿಗೆ ಹಿನ್ನೆಡೆಯಾಯಿತು. ೧೯೩೯ ರಲ್ಲಿ ದ್ವಿತಿಯ ಮಹಾಯುದ್ಧದ ಪ್ರಾರಂಭದಿಂದಾಗಿ ಪರಿಸ್ಥಿತಿಯಲ್ಲಿ ಸುಧಾರಣೆ ಕಂಡು ಬಂದಿತು. ಇದರ ಪರಿಣಾಮವಾಗಿ ೧೯೪೦-೫೦ ರ ಅವಧಿಯಲ್ಲಿ, ಜಿಲ್ಲೆಯಲ್ಲಿ ಗೃಹ ನಿರ್ಮಾಣ, ಅರಣ್ಯ, ಕಾರ್ಮಿಕ, ಖಾದಿ ಹಾಗೂ ಗ್ರಾಮೀಣ ಕೈಗಾರಿಕೆಗಳು, ಸಂಸ್ಕರಣೆ ಮುಂತಾದವುಗಳು ಅಸ್ತಿತ್ವದಲ್ಲಿ ಬಂದವು.

೧೯೫೧ ರಲ್ಲಿ ಆರ್ಥಿಕ ಅಭಿವೃದ್ಧಿ ಯೋಜನೆಗಳ ಪ್ರಾರಂಭದಿಂದ ಸಹಕಾರ ಚಳುವಳಿಗೆ ಪ್ರೋತ್ಸಾಹ ದೊರೆತು, ಜಿಲ್ಲೆಯಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಗಳು (೧೯೫೯),ಹತ್ತಿ ನೂಲುವ

[illegible]

ಗಿರಣಿಗಳು (೧೯೬೧), ಗ್ರಾಮೀಣ ವಿದ್ಯುಚ್ಛಕ್ತಿ ಸಂಘ (೧೯೬೩), ಸ್ಥಾಪನೆಗೆ ಅವಕಾಶ ದೊರೆಯಿತು. ಬೆಳಗಾವಿಯಲ್ಲಿ ೧೯೬೬ರಲ್ಲಿ ಉಪನಿಬಂಧಕರ ಕಾರ್ಯಾಲಯ ಪ್ರಾರಂಭವಾಯಿತು. ಅದಲ್ಲದೇ ಜಿಲ್ಲೆಯಲ್ಲಿ ಸಹಕಾರದ ಬಲದಿಂದ ೧೨ ಸಹಕಾರಿ ಸಕ್ಕರೆ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತವೆ. ಜಿಲ್ಲೆಯ ಪ್ರಥಮ ಸಹಕಾರಿ ಸಕ್ಕರೆ ಕಾರ್ಖಾನೆ ಹಿರಾಶುಗರ ಸಹಕಾರಿ ಸಕ್ಕರೆ ಕಾರ್ಖಾನೆ ೧೯೫೬ ರಲ್ಲಿ ಸಂಕೇಶ್ವರದಲ್ಲಿ ಪ್ರಾರಂಭಗೊಂಡಿತು. ಈ ರೀತಿ ವಿಶಾಲ ಹಾಗೂ ವೈವಿಧ್ಯಮಯ ಚಟುವಟಿಕೆಗಳನ್ನು ಹೊಂದಿರುವ ಬೆಳಗಾವಿ ಜಿಲ್ಲೆ ಸಹಕಾರದ ಬುನಾದಿಯಾಗಿ ಕಾರ್ಯ ನಿರ್ವಹಿಸುತ್ತದೆ. ಬೆಳಗಾವಿ ಜಿಲ್ಲೆಯ ಸಹಕಾರದ ಪ್ರಗತಿಯನ್ನು ಕೋಷ್ಟಕ ೨.೬ ರಿಂದ ೨.೧೧ ರವರೆಗೆ ನೋಡಿ ತಿಳಿದು ಕೊಳ್ಳಬಹುದಾಗಿದೆ.

ಕೋಷ್ಟಕ ೨.೬ ರಲ್ಲಿ ಮಾರ್ಚ ೨೦೦೮ ರ ವೇಳೆಗೆ ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು ೪೦೪೨ ಸಂಘಗಳಿದ್ದು, ಇದರಲ್ಲಿ ೮ ಬಹುರಾಜ್ಯ ಮಟ್ಟದ್ದಾಗಿದ್ದರೆ, ೩ ರಾಜ್ಯ ಮಟ್ಟದ್ದಾಗಿವೆ. ಇದರಲ್ಲಿ ತಾಲೂಕಾ ಮಟ್ಟಕ್ಕಿಂತ ಕಡಿಮೆ ೩,೭೩೧ ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತವೆ. ಇವುಗಳಲ್ಲಿ ೨,೬೫೧ ಲಾಭದಲ್ಲಿ, ೧,೦೮೮ ನಷ್ಟದಲ್ಲಿ ಮತ್ತು ೩೦೩ ಲಾಭ ನಷ್ಟವಿಲ್ಲದೆ ಕಾರ್ಯ ನಿರ್ವಹಿಸುತ್ತಿವೆ. ಒಟ್ಟಾಗಿ ಜಿಲ್ಲೆಯಲ್ಲಿ ಸಹಕಾರಿ ಸಂಘಗಳ ಪ್ರಗತಿ ತೃಪ್ತಿದಾಯಕವಾಗಿದೆ.

ಕೋಷ್ಟಕ ೨.೭ ರ ಮಾರ್ಚ ೨೦೦೮ ಕ್ಕೆ ಜಿಲ್ಲೆಯಲ್ಲಿ ಅತಿ ಹೆಚ್ಚು ಬೆಳಗಾವಿ ತಾಲೂಕಿನಲ್ಲಿ ೬೭೧, ಅತಿ ಕಡಿಮೆ ಖಾನಾಪೂರ ತಾಲೂಕಿನಲ್ಲಿ ೧೬೫ ಸಂಘಗಳು ಕಾರ್ಯನಿರ್ವಹಿಸುತ್ತವೆ. ಅತಿ ಹೆಚ್ಚು ಚಿಕ್ಕೋಡಿ ತಾಲೂಕಿನಲ್ಲಿ ೧೫, ಅತಿ ಕಡಿಮೆ ಬೆಳಗಾವಿ ತಾಲೂಕಿನಲ್ಲಿ ೧ ಸಹಕಾರಿ ಸಂಘಗಳು ಕಾರ್ಯಸ್ಥಗಿತಗೊಳಿಸಿವೆ. ಜಿಲ್ಲೆಯ ಕಾರ್ಯಕ್ಷೇತ್ರದ ಅನುಗುಣವಾಗಿ ಎಲ್ಲ ತಾಲೂಕುಗಳಲ್ಲಿ ಸಂಘಗಳು ಸಮತೋಲನ ಸ್ಥಿತಿಯಲ್ಲಿವೆ.

ಕೋಷ್ಟಕ ೨.೮ ರ ಮಾರ್ಚ ೨೦೦೮ ಕ್ಕೆ ಜಿಲ್ಲೆಯಲ್ಲಿ ಒಟ್ಟು ೪,೦೪೨ ರಲ್ಲಿ ೩,೮೬೨ ಸಂಘಗಳು ಕಾರ್ಯನಿರ್ವಹಿಸುತ್ತಿದ್ದರೆ, ೬೮ ಸಂಘಗಳು ಕಾರ್ಯಸ್ಥಗಿತಗೊಳಿಸಿದ್ದವು ಮತ್ತು ೧೧೨ ಸಂಘಗಳು ಸಮಾಪಣೆಗೊಂಡಿವೆ. ಜಿಲ್ಲೆಯ ವಿವಿಧ ಬಗೆಗಳ ಸಹಕಾರಿ ಸಂಘಗಳ ಇತರೆ ಪತ್ತಿನ ಸಹಕಾರ ಸಂಘಗಳು ಅತಿ ಹೆಚ್ಚು ೬೬೫ ಸಂಘಗಳನ್ನು ಹೊಂದಿ ಕಾರ್ಯನಿರ್ವಹಿಸುತ್ತಿದ್ದವು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು ೬೧೨ ರೊಂದಿಗೆ ಕಾರ್ಯನಿರ್ವಹಿಸುತ್ತಿದ್ದವು. ಹಾಲು ಉತ್ಪಾದಕರ ಸಹಕಾರಿ ಸಂಘಗಳು ೪೯೮, ವಿವಿದೋದ್ದೇಶ ಸಹಕಾರಿ ಸಂಘಗಳು ೪೨೦ ಗಳಿದ್ದವು. ಅದರಂತೆ ೬ ಇತರೆ ಪತ್ತಿನ ಸಂಘಗಳು, ೨೧ ಹಾಲು ಉತ್ಪಾದಕರ ಸಂಘಗಳು, ೧೪ ವಿವಿದೋದ್ದೇಶ ಸಹಕಾರ ಸಂಘಗಳು ಕಾರ್ಯಸ್ಥಗಿತಗೊಳಿಸಿವೆ. ಮತ್ತು ೧೧ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು, ೧೨ ಹಾಲು ಉತ್ಪಾದಕರ ಸಹಕಾರಿ ಸಂಘಗಳು ಮತ್ತು ೧೨ ನೇಕಾರ ಸಹಕಾರಿ ಸಂಘಗಳು ಸಮಾಪಣೆಗೊಂಡಿವೆ. ಒಟ್ಟಾಗಿ ಜಿಲ್ಲೆಯಲ್ಲಿ ವಿವಿಧ ಸಹಕಾರಿ ಸಂಘಗಳ ಪ್ರಗತಿ ಸಮತೋಲನ ಸ್ಥಿತಿಯಲ್ಲಿ ಇದೆ.

[illegible]

ಕೋಷ್ಟಕ ೨.೬

ಬೆಳಗಾವಿ ಜಿಲ್ಲೆಯಲ್ಲಿರುವ ವಿವಿಧ ಸಹಕಾರ ಸಂಘಗಳ ಯಾದಿ

(೦೩-೦೩-೨೦೦೮ ಕ್ಕೆ ಇದ್ದಂತೆ.)

ಅನುಬಂಧ – ೧

ಕೋಡ ಸಂಖ್ಯೆ	ಕಾರ್ಯಕ್ಷೇತ್ರ	ಸಂಖ್ಯೆ
೧	ಬಹುರಾಜ್ಯ ಮಟ್ಟದ್ದು	೮
೨	ರಾಜ್ಯ ಮಟ್ಟದ್ದು	೩
೩	ಜಿಲ್ಲಾ ಮಟ್ಟಮೀರಿ ರಾಜ್ಯ ಮಟ್ಟದೊಳಗೆ	೧೦
೪	ಜಿಲ್ಲಾ ಮಟ್ಟದ್ದು	೪೫
೫	ತಾಲೂಕಾ ಮಟ್ಟ ಮೀರಿ ಜಿಲ್ಲಾ ಮಟ್ಟದೊಳಗೆ	೭೩
೬	ತಾಲೂಕಾ ಮಟ್ಟದ್ದು	೧೭೨
೭	ತಾಲೂಕಾ ಮಟ್ಟಕ್ಕಿಂತ ಕಡಿಮೆ	೩೭೩೧
	ಒಟ್ಟು	೪೦೪೨

ಅನುಬಂಧ – ೨

ಕೋಡ ಸಂಖ್ಯೆ	ಸಂಘ ಸಂಸ್ಥೆ ಕಾರ್ಯ ವೈಖರಿ	ಸಂಖ್ಯೆ
P	ಲಾಭದಲ್ಲಿ ಕಾರ್ಯ ನಿರ್ವಹಿಸುತ್ತಿರುವ	೨೬೫೧
L	ನಷ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ	೧೦೮೮
N	ಲಾಭ ನಷ್ಟವಿಲ್ಲದೇ ಕಾರ್ಯ ನಿರ್ವಹಿಸುತ್ತಿರುವ	೩೦೩
	ಒಟ್ಟು	೪೦೪೨

ಆಧಾರ: ಉಪ ನಿಬಂಧನಾಧಿಕಾರಿ ಸಹಕಾರಿ ಸಂಘಗಳ ಬೆಳಗಾವಿ ಇವರ ಕಛೇರಿ ೩೧-೦೩-೨೦೦೮ ರ ವರೆಗಿನ ಯಾದಿ ಪುಟ ಸಂಖ್ಯೆ : ೧

[illegible]

ಕೋಷ್ಟಕ ೨.೭

ಬೆಳಗಾವಿ ಜಿಲ್ಲೆ ತಾಲೂಕಾವಾರ ಸಹಕಾರ ಸಂಘಗಳ ವಿವರ

(೩೧-೦೩-೨೦೦೮ ಕ್ಕೆ ಇದ್ದಂತೆ.)

ಅ.ನಂ	ತಾಲೂಕಾ	ಕಾರ್ಯನಿರತ	ಸ್ಥಗಿತ	ಸಮಾಪನಗೊಂಡ	ಒಟ್ಟು
೧	ಬೆಳಗಾವಿ	೬೫೯	೧	೨೩	೬೮೩
೨	ಖಾನಾಪೂರ	೧೬೫	೩	೧	೧೬೯
೩	ಹುಕ್ಕೇರಿ	೩೧೨	೨	೫	೩೧೯
೪	ಬೈಲಹೊಂಗಲ	೨೬೫	೭	೧೨	೨೮೪
೫	ಸವದತ್ತಿ	೨೮೧	೧೨	೦೫	೨೯೮
೬	ಗೋಕಾಕ	೪೯೫	೧೦	೧೦	೫೧೫
೭	ರಾಮದುರ್ಗ	೨೧೪	೨	೧೮	೨೩೪
೮	ಚಿಕ್ಕೋಡಿ	೬೭೧	೧೫	೨೨	೭೦೮
೯	ರಾಯಬಾಗ	೪೮೩	೮	೮	೪೯೯
೧೦	ಅಥಣಿ	೩೧೭	೮	೮	೩೩೩
	ಒಟ್ಟು	೩೮೬೨	೬೮	೧೧೨	೪೦೪೨

ಆಧಾರ: ಉಪ ನಿಬಂಧನಾಧಿಕಾರಿ ಸಹಕಾರಿ ಸಂಘಗಳು ಬೆಳಗಾವಿ ಇವರ ಕಛೇರಿ ೩೧-೦೩-೨೦೦೮ ರ ವರೆಗಿನ ಯಾದಿ. ಪು. ಸಂ. ೧ ಮತ್ತು ೨.

ಕೋಷ್ಟಕ ೨.೮

ಬೆಳಗಾವಿ ಜಿಲ್ಲೆಯಲ್ಲಿರುವ ವಿವಿಧ ಸಹಕಾರ ಸಂಘಗಳ ಯಾದಿ

(೩೧-೦೩-೨೦೦೮ ಕ್ಕೆ ಇದ್ದಂತೆ.)

ಕ್ರಸ	ವಿವಿಧ ಸಹಕಾರ ಸಂಘಗಳ ಹೆಸರು	ಕಾರ್ಯನಿರತ	ಸ್ಥಗಿತ	ಸಮಾಪನೆ ಗೊಂಡು	ಒಟ್ಟು
೧	ಬಹುರಾಜ್ಯ ಮಟ್ಟದ ಸಹಕಾರ ಸಂಘಗಳು	೮	-	-	೮
೨	ರಾಜ್ಯ ಮಟ್ಟದ ಸಹಕಾರ ಸಂಘಗಳು	೨	-	೧	೩
೩	ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು	೧	-	-	೧
೪	ಪ್ರಾ.ಸ.ಕೃ. ಅಭಿವೃದ್ಧಿ & ಗ್ರಾಮೀಣ ಬ್ಯಾಂಕ ನಿ	೧೦	-	-	೧೦
೫	ಪ್ರಾ.ಕೃ.ಪತ್ತಿನ ಸಹಕಾರ ಸಂಘಗಳು	೬೧೨	೨	೧೧	೬೨೫
೬	ಲ್ಯಾಂಪ್ಸ ಸಹಕಾರ ಸಂಘಗಳು	-	-	-	೦
೭	ರೇಷ್ಮೆ ಬೆಳೆಗಾರ ಸಹಕಾರ ಸಂಘಗಳು	-	-	-	೦
೮	ಸಹಕಾರ ಗ್ರೇನ್ ಬ್ಯಾಂಕಗಳು	೨	-	-	೨
೯	ಪಟ್ಟಣ ಸಹಕಾರ ಬ್ಯಾಂಕುಗಳು	೪೦	-	೫	೪೫
೧೦	ಇತರೆ ಪತ್ತಿನ ಸಹಕಾರ ಸಂಘಗಳು	೬೬೫	೬	೪	೩೧
೧೧	ನೌಕರ ಪತ್ತಿನ ಸಹಕಾರ ಸಂಘಗಳು	೧೯೩	-	೧	೧೯೪
೧೨	ಪ್ರಾ.ಕೃ.ಹು.ಮಾ.ಸಹಕಾರ ಸಂಘಗಳು	೧೦	-	೧	೧೧
೧೩	ಇತರೆ ಮಾರಟ ಸಹಕಾರ ಸಂಘಗಳು	೨೭	೪	-	೩೧
೧೪	ಸಹಕಾರಿ ಸಕ್ಕರೆ ಕಾರ್ಖಾನೆಗಳು	೧೧	೧	-	೧೨
೧೫	ಸಂಸ್ಕರಣ ಸಹಕಾರ ಸಂಘಗಳು	೮	-	೧	೯
೧೬	ಸಹಕಾರಿ ನೂಲಿನ ಗಿರಣಿಗಳು	೨	-	೧	೩
೧೭	ಎಣ್ಣೆ ಬೀಜ ಬೆಳೆಗಾರ ಸಹಕಾರ ಸಂಘಗಳು	೨೨	೨	೧	೨೫
೧೮	ಲೈವ ಸ್ಟಾಕ ಸಹಕಾರ ಸಂಘಗಳು	೯೭	೫	೩	೧೦೫
೧೯	ಹಾಲು ಉತ್ಪಾದಕರ ಸಹಕಾರ ಸಂಘಗಳು	೪೯೮	೨೧	೧೨	೫೩೧
೨೦	ಸಹಕಾರ ಹಾಲು ಒಕ್ಕೂಟ	೧	-	-	೧
೨೧	ಸಂಯುಕ್ತ ಬೇಸಾಯ ಸಹಕಾರ ಸಂಘಗಳು	೧೮	೧	೧	೨೦
೨೨	ಏತ ನೀರಾವರಿ ಸಹಕಾರ ಸಂಘಗಳು	೪೭	-	೬	೫೩
೨೩	ನೀರು ಬಳಕೆದಾರರ ಸಹಕಾರ ಸಂಘಗಳು	೩೧೫	೧	೨	೩೧೮
೨೪	ಮೀನುಗಾರಿಕಾ ಸಹಕಾರ ಸಂಘಗಳು	೧೮	-	-	೧೮
೨೫	ನೇಕಾರರ ಸಹಕಾರ ಸಂಘಗಳು	೧೦೪	-	೧೨	೧೧೬
೨೬	ಇತರೇ ಕೈಗಾರಿಕಾ ಸಹಕಾರ ಸಂಘಗಳು	೪೨	೧	೯	೫೨
೨೭	ಕೈಗಾರಿಕಾ ಸಹಕಾರ ಸಂಘಗಳು	೪೯	೧	೧೨	೧೧೬
೨೮	ಗ್ರಾಹಕರ ಸಹಕಾರ ಸಂಘಗಳು	೧೫೬	೩	೩	೧೬೨
೨೯	ಕೇಂದ್ರ ಸಗಟು ಮಾರಾಟ ಮಳಿಗೆ	೧	-	೧	೨

[illegible]

೩೦	ಗೃಹ ನಿರ್ಮಾಣ ಸಹಕಾರ ಸಂಘಗಳು	೧೧೦	೧	೮	೧೧೯
೩೧	ಅರಣ್ಯ ಕೂಲಿಕಾರ ಸಹಕಾರ ಸಂಘಗಳು	೧	–	–	೧
೩೨	ಕೂಲಿಕಾರ ಸಹಕಾರ ಸಂಘಗಳು	೧೧	–	–	೧೧
೩೩	ಜಿಲ್ಲಾ ಸಹಕಾರ ಸಂಘಗಳು	೧	–	–	೧
೩೪	ಜಿಲ್ಲಾ ಸಹಕಾರ ಮಹಾ ಮಂಡಳ	–	–	–	೦
೩೫	ವಿವಿದ್ಧೋದ್ಧೇಶ ಸಹಕಾರ ಸಂಘಗಳು	೪೨೦	೧೪	೩	೪೩೭
೩೬	ವಿದ್ಯಾರ್ಥಿ ಸಹಕಾರ ಸಂಘಗಳು	೧೮	–	–	೧೮
೩೭	ಮಹಿಳಾ ಸಹಕಾರ ಸಂಘಗಳು	೭೨	–	–	೭೨
೩೮	ಮಹಿಳಾ ವಿವಿದ್ಧೋದ್ದೇಶ ಸಹಕಾರ ಸಂಘಗಳು	೧೮೪	೪	೫	೧೯೩
೩೯	ಗರಬೀ ಹಟಾವೋ ಸಹಕಾರ ಸಂಘಗಳು	೧೬	–	–	೧೬
೪೦	ದರ್ಜಿಗಳ ಸಹಕಾರ ಸಂಘಗಳು	೧	–	–	೧
೪೧	ಚರ್ಮ ಹದ ಮಾಡುವವರ ಸಹಕಾರ ಸಂಘಗಳು	೧೨	–	೬	೧೮
೪೨	ಮರ ಬೆಳೆಗಾರರ ಸಹಕಾರ ಸಂಘಗಳು	–	–	–	೦
೪೩	ಹ್ಯಾಂಡ ಪೌಂಡಿಂಗ್ ಸಹಕಾರ ಸಂಘಗಳು	–		–	೦
೪೪	ಮಡಿವಾಳ ಸಹಕಾರ ಸಂಘಗಳು	–	–	–	೦
೪೫	ವಿದ್ಯುತ್ ಶಕ್ತಿ ಸಹಕಾರ ಸಂಘಗಳು	೧	–	–	೧
೪೬	ಸಾರಿಗೆ ಸಹಕಾರ ಸಂಘಗಳು	೭	–	–	೭
೪೭	ಸಹಕಾರ ಆಸ್ಪತ್ರೆಗಳು	೧	–	–	೧
೪೮	ಸಹಕಾರ ಮುದ್ರಣಾಲಯಗಳು	೯	೧	–	೧೦
೪೯	ಎಣ್ಣೆ ನೇಕಾರರ ಸಹಕಾರ ಸಂಘಗಳು	೧೧	–	೧	೧೨
೫೦	ಇತರೆ ಸಹಕಾರ ಸಂಘಗಳು	೨೮	೧	೨	೩೧
	ಒಟ್ಟು	೩೮೬೨	೬೮	೧೧೨	೪೦೪೨

ಆಧಾರ: ಉಪನಿಬಂಧನಾಧಿಕಾರಿ ಸಹಕಾರ ಸಂಘಗಳ ಬೆಳಗಾವಿ ಇವರ ಕಛೇರಿ ೩೧–೦೩–೨೦೦೮ ರ ವರೆಗಿನ ಯಾದಿ.

ಕೋಷ್ಟಕ ೨.೯ ರ ಸನ್ ೨೦೦೬–೦೭ ರಲ್ಲಿ ಜಿಲ್ಲೆಯಲ್ಲಿ ನಗರ ಪ್ರದೇಶ ಸಹಕಾರಿ ಬ್ಯಾಂಕುಗಳು ೪೧ ಶಾಖೆಗಳನ್ನು ಹೊಂದಿ ೨೦,೨೨೫.೦೩ ಲಕ್ಷ ರೂಗಳ ಠೇವಣಿ ಸಂಗ್ರಹಿಸಿ ೫೪೮೪೪.೫೪ ಲಕ್ಷ ರೂಗಳ ಸಾಲ ನೀಡಿದೆ. ಹಾಗೂ ನಗರ ಪ್ರದೇಶ ಸಹಕಾರಿ ಪತ್ತಿನ ಸಂಘಗಳು ೬೮೧ ಶಾಖೆಗಳನ್ನು ಹೊಂದಿ ೧೪೯೭೨.೭೪ ಲಕ್ಷರೂಗಳ ಸಾಲ ನೀಡಿದೆ. ಹಾಗೂ ಪ್ರಾಥಮಿಕ ಭೂ–ಅಭಿವೃದ್ಧಿ ಬ್ಯಾಂಕುಗಳು ೧೦ ಇದ್ದು, ೧೨೪೧.೭೨ ಲಕ್ಷ ರೂಗಳ ಸಾಲ ಒದಗಿಸಿದೆ. ಮತ್ತು ಕೃಷಿ ಸಹಕಾರ ಸಂಘಗಳಿಂದ ಕೊ ಡಲ್ಪಟ್ಟ ಸಾಲ ೨೪೫೭೯.೩೭ ಲಕ್ಷಗಳಾಗಿವೆ. ಜಿಲ್ಲೆಯಲ್ಲಿ ಎಲ್ಲ ತಾಲೂಕುಗಳಲ್ಲಿ ಈ ಮೇಲಿನ ಸಹಕಾರಿ ಸಂಘಗಳ ಪ್ರಗತಿ ತೃಪ್ತಿದಾಯಕವಾಗಿದೆ.

ಕೋಷ್ಟಕ ೨.೯

ಬೆಳಗಾವಿ ಜಿಲ್ಲೆಯ ಸಹಕಾರ ಸಂಘಗಳ ಪ್ರಗತಿ

(೨೦೦೬-೦೭)

ಅ.ನಂ	ತಾಲೂಕು	ನಗರ ಪ್ರದೇಶ ಸಹಕಾರಿ ಬ್ಯಾಂಕುಗಳು			ನಗರ ಪ್ರದೇಶ ಸಹಕಾರಿ ಪತ್ತಿನ ಸಂಘಗಳು		ಪ್ರಾ. ಭೂ ಅಭಿವೃದ್ಧಿ ಬ್ಯಾಂಕುಗಳು		ಕೃಷಿ ಸಹಕಾರ ಸಂಘಗಳಿಂದ ಕೊಡಲ್ಪಟ್ಟ ಸಾಲ (ಲಕ್ಷಗಳಲ್ಲಿ)		
		ಶಾಖೆಗಳು	ಠೇವಣಿ (ಲಕ್ಷರೂಗಳಲ್ಲಿ)	ಸಾಲ ನೀಡಿಕೆ (ಲಕ್ಷರೂಗಳಲ್ಲಿ)	ಸಂಖ್ಯೆ	ಸಾಲ (ಲಕ್ಷದಲ್ಲಿ)	ಸಂಖ್ಯೆ	ಸಾಲ (ಲಕ್ಷದಲ್ಲಿ)	ಅಲ್ಪಾವಧಿ	ಮಧ್ಯಾವಧಿ	ಒಟ್ಟು
೧	ಅಥಣಿ	೪	೧೮೭೨.೪೪	೭೧೨೦.೧೦	೭೨	೧೪೫೧.೪೦	೧	೨೦೫.೯೯	೬೫೯೬.೫೬	೭೯.೯೮	೬೬೭೬.೫೪
೨	ಬೈಲಹೊಂಗಲ	೪	೧೮೪೨.೬೦	೬೩೪೦.೫೨	೩೭	೭೮೫.೧೫	೧	೧೯೧.೯೩	೧೬೯೫.೫೬	೦.೦೦	೧೬೯೫.೫೬
೩	ಬೆಳಗಾವಿ	೧೩	೭೨೩೦.೪೦	೧೯೪೫೮.೦೦	೧೭೭	೩೫೬೫.೦೦	೧	೫೭.೪೭	೪೪೪೩.೧೮	೦.೦೦	೪೪೪೩.೧೮
೪	ಚಿಕ್ಕೋಡಿ	೬	೩೧೦೮.೨೬	೯೯೬೮.೦೦	೧೧೬	೩೦೭೨.೪೦	೧	೦.೦೦	೩೮೭೧.೯೨	೧೯.೭೦	೩೮೯೧.೬೨
೫	ಗೋಕಾಕ	೫	೨೧೨೪.೪೦	೭೮೩೦.೧೦	೯೫	೧೮೨೦.೭೦	೧	೧೭೩.೧೭	೩೦೧೭.೯೨	೧೮.೩೨	೩೦೩೬.೨೪
೬	ಹುಕ್ಕೇರಿ	೩	೧೩೧೪.೫೨	೧೪೨೫.೧೫	೪೮	೧೧೪೦.೩೫	೧	೧೨೫.೦೮	೩೩೮೮.೪೨	೨೬.೮೬	೩೪೧೫.೨೮
೭	ಖಾನಾಪುರ	೧	೬೧೦.೦೦	೫೦೮.೧೪	೩೬	೭೨೫.೬೦	೧	೭೪.೦೫	೫೭೮.೨೩	೦.೦೦	೫೭೮.೨೩
೮	ರಾಯಬಾಗ	೨	೮೭೬.೧೫	೮೬೫.೨೦	೫೭	೧೪೧೭.೪೮	೧	೧೩೪.೫೬	೨೩೭೧.೬೧	೨೭.೭೫	೨೩೯೯.೩೬
೯	ರಾಮದುರ್ಗ	೧	೪೮೨.೪೦	೪೮೧.೨೦	೯	೩೪೧.೨೬	೧	೧೩೯.೨೫	೧೫೮೧.೧೯	೧೭.೪೯	೧೫೯೮.೬೮
೧೦	ಸವದತ್ತಿ	೨	೮೬೩.೬೮	೮೪೮.೧೩	೩೪	೬೫೩.೪೦	೧	೧೪೦.೨೨	೮೪೪.೬೮	೦.೦೦	೮೪೪.೬೮
	ಒಟ್ಟು	೪೧	೨೦೨೨೫.೦೩	೫೪೮೪೪.೫೪	೬೮೧	೧೪೯೭೨.೭೪	೧೦	೧೨೪೧.೭೨	೨೪೩೮೯.೨೭	೧೯೦.೧೦	೨೪೫೭೯.೩೭

ಆಧಾರ : ಬೆಳಗಾವಿ ಜಿಲ್ಲೆಯ ಅಂಕಿ ಅಂಶಗಳ ನೋಟ, ೨೦೦೬-೨೦೦೭
ಪುಟ ಸಂಖ್ಯೆ ೩೦ ಮತ್ತು ೩೨.

ಕೋಷ್ಟಕ ೨.೧೦

ಬೆಳಗಾವಿ ಜಿಲ್ಲೆಯಲ್ಲಿ ಕ್ರೆಡಿಟ್ ಸಹಕಾರಿ ಸಂಘಗಳು

(೨೦೦೬-೦೭)

ಅ.ನಂ	ತಾಲೂಕು	ವ್ಯವಸಾಯ		ಹಾಲು ಉತ್ಪಾದನೆ		ಇತರೆ		ಒಟ್ಟು		ಸಮಾಪನ ಗೊಂಡವು
೧	ಅಥಣಿ	೭೧	೭೩,೪೫೧	೨೩	೧,೫೧೦	೨೩೩	೩೦,೧೨೦	೩೨೭	೧,೦೫,೦೮೧	೭
೨	ಬೈಲಹೊಂಗಲ	೬೫	೮೩,೮೯೦	೭೭	೧೨,೮೮೬	೧೪೨	೪೦,೧೮೦	೨೮೪	೧,೩೬,೯೫೬	೧೩
೩	ಬೆಳಗಾವಿ	೪೯	೭೨,೩೧೦	೪೨	೭,೧೦೦	೫೮೪	೨,೫೪,೧೮೦	೫೭೫	೩,೩೩,೫೭೦	೨೬
೪	ಚಿಕ್ಕೋಡಿ	೧೦೦	೯೮,೧೦೦	೭೮	೧೩,೨೧೫	೫೧೨	೯೫,೩೫೦	೮೯೦	೨,೦೬,೬೬೫	೧೩
೫	ಗೋಕಾಕ	೬೯	೯೦,೭೭೨	೫೬	೮,೮೦೦	೩೭೫	.೭೮,೩೦೦	೫೦೦	೧,೭೭,೬೭೨	೧೦
೬	ಹುಕ್ಕೇರಿ	೬೭	೭೦,೨೦೦	೪೨	೪,೫೬೭	೨೦೯	೭೬,೨೫೦	೩೧೮	೧,೫೧,೦೧೦	೯
೭	ಖಾನಾಪುರ	೩೮	೩೫,೭೨೧	೫೪	೮,೬೭೦	೭೫	೨೩,೧೫೦	೧೬೯	೬೭,೫೪೧	೧
೮	ರಾಯಬಾಗ	೫೮	೮೦,೮೧೧	೪೫	೪,೬೮೦	೩೭೨	೭೪,೩೦೦	೪೭೫	೧,೨೯,೭೯೦	೫
೯	ರಾಮದುರ್ಗ	೪೦	೪೮,೫೦೦	೬೧	೮,೧೨೦	೧೩೨	೫೫,೪೧೦	೨೩೩	೧,೧೨,೦೩೦	೧೭
೧೦	ಸವದತ್ತಿ	೬೬	೮೦,೧೧೫	೪೩	೩,೮೯೬	೧೮೯	೭೨,೩೦೦	೨೯೮	೧,೫೬,೩೧೧	೬
	ಒಟ್ಟು	೬೨೩	೭,೩೩,೮೬೯	೫೨೧	೭೩,೪೩೭	೨೮೨೩	೭,೯೯,೫೪೦	೪೦೬೯	೧೫,೭೬,೬೨೬	೧೦೭

ಆಧಾರ : ಬೆಳಗಾವಿ ಜಿಲ್ಲೆಯ ಅಂಕಿ ಅಂಶಗಳ ನೋಟ ೨೦೦೬-೨೦೦೭, ಪುಟ ಸಂಖ್ಯೆ ೩೧.

ಕೋಷ್ಟಕ ೨.೧೧
ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ನಿಯಮಿತ, ಬೆಳಗಾವಿ.
ಪ್ರಗತಿ ಪತ್ರಿಕೆ.

ವಿವರ	೧೯೧೮-೧೯	೧೯೪೮-೪೯	೧೯೬೮-೬೯	೧೯೭೮-೭೯	೧೯೮೮-೮೯	೧೯೯೮-೯೯	೨೦೦೭-೦೮
೧. ಸದಸ್ಯರ ಸಂಖ್ಯೆ							
ಅ) ಸಂಘಗಳು	೯	೫೪೪	೯೭೨	೧೧೦೨	೧೩೪೨	೧೯೯೮	೨೦೨೫
ಬ) ವೈಯಕ್ತಿಕ	೨೬	೧,೨೧೫	೫೬೯	೩೪೧	೨೯೭	೨೮೬	೨೮೧
ಕ) ಸಹಭಾಗ್ಯಸ್ತಿಕೆ	೦	೦	೦	೦	೦	೦	೩
೨. ಪಾಲು ಬಂಡವಾಳ	೫,೧೭೦	೬,೯೨,೫೫೦	೭೭,೨೯,೨೦೦	೨,೧೧,೫೦,೫೫೦	೮,೦೪,೭೮,೫೦೦	೨೮,೬೦,೪೦,೯೦೦	೪೨,೫೯,೯೧,೦೫೫
೩. ಕಾಯ್ದಿಟ್ಟ ಮತ್ತು ಇತರ ನಿಧಿಗಳು	–	೪,೮೧,೬೧೬	೨೩,೮೨,೨೧೯	೧,೩೨,೫೧,೮೪೭	೩,೬೯,೦೮,೨೬೧	೩೭,೨೫,೬೨,೧೧೯	೧,೨೨,೩೬,೨೦,೮೫೦
೪. ಠೇವುಗಳು	೮,೨೩೩	೬೨,೬೫,೪೬೮	೪,೮೯,೨೪,೬೨೩	೧೪,೯೨,೧೩,೨೫೦	೭೦,೨೨,೩೨,೭೫೩	೩,೬೯,೨೭,೫೩,೧೭೩	೬,೦೫,೯೬,೭೭,೬೩೦,
೫. ದುಡಿಯುವ ಬಂಡವಾಳ	೧೩,೪೦೩	೮೮,೬೮,೨೨೨	೮,೦೧,೦೧,೦೪೨	೨೩,೬೫,೦೦,೧೬೯	೧,೧೨,೬೮,೪೬,೪೨೨	೫,೭೭,೯೦,೬೮,೦೮೯	೧೦,೪೦,೪೧,೯೪,೮೫೬
೬. ಸಾಲಗಳು							
ಅ) ಸಂಘಗಳು	–	೨೪,೮೪,೯೯೨	೪,೯೦,೪೩,೭೩೧	೧೭,೫೯,೧೭,೮೨೪	೭೧,೫೦,೪೫,೬೨೧	೪,೧೭,೬೮,೧೮,೯೫೩	೫,೫೦,೫೨,೫೧,೯೮೦
ಬ) ವೈಯಕ್ತಿಕ	–	೧೮,೭೨,೦೪೩	೭,೩೬,೬೫೯	೬೩,೬೧,೧೦೫	೬,೮೮,೬೦,೦೫೨	೨೩,೨೨,೦೭,೮೪೪	೪೦,೮೬,೭೫,೦೭೪
ಕ) ಇತರ	–	–	–	–	–	೧,೨೫,೦೦,೦೦೦	೧,೨೫,೦೦,೦೦೦
೭. ನಿವ್ವಳ ಲಾಭ	–	೪೧,೪೬೮	೭,೪೬,೨೨೩	೨೧,೮೪,೨೦೬	೩೮,೧೦,೬೩೭	೨,೯೩,೨೭,೬೯೩	೩,೩೨,೦೩,೯೨೯

ಆಧಾರ : ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ೯೦ ನೇ ವಾರ್ಷಿಕ ವರದಿ ಪುಟ ಸಂಖ್ಯೆ : ೨೭


ಹಿಂದಿನ ಕೋಷ್ಟಕ ೨.೧೦ ರ ಸನ್ ೨೦೦೬-೦೭ ರಲ್ಲಿ ಜಿಲ್ಲೆಯಲ್ಲಿ ೪,೦೮೯ ಕ್ರೇಡಿಟ್ ಸಹಕಾರಿ ಸಂಘಗಳು ಇದ್ದು, ೧೫,೭೬,೬೨೬ ಸದಸ್ಯರನ್ನು ಹೊಂದಿವೆ. ಇವುಗಳ ವ್ಯವಸಾಯ ಸಂಘಗಳಲ್ಲಿ ೭,೩೩,೮೮೯ ಸದಸ್ಯರನ್ನು, ಹಾಲು ಉತ್ಪಾದಕರ ಸಹಕಾರಿ ಸಂಘಗಳಲ್ಲಿ ೭೩,೪೩೭ ಸದಸ್ಯರನ್ನು ಮತ್ತು ಇತರೆ ಸಹಕಾರಿ ಸಂಘಗಳಲ್ಲಿ ೭,೯೯,೫೪೦ ಸದಸ್ಯರನ್ನು ಹೊಂದಿವೆ. ಚಿಕ್ಕೋಡಿ ತಾಲೂಕಿನಲ್ಲಿ ಹೆಚ್ಚು ಸದಸ್ಯರನ್ನು ಈ ಸಂಘಗಳು ಹೊಂದಿವೆ. ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಈ ಸಂಘಗಳು ಎಲ್ಲ ಕ್ಷೇತ್ರಗಳ ಬೆಳವಣಿಗೆಗೆ ಸಹಾಯಕಾರಿಯಾಗಿವೆ.

ಹಿಂದಿನ ಕೋಷ್ಟಕ ೨.೧೧ ರಲ್ಲಿ ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕದ ನಿವ್ವಳ ಲಾಭವು ೧೯೪೮-೪೯ ರಲ್ಲಿ ೪೧,೪೬೮ ರೂ ಗಳನ್ನು ಹೊಂದಿದ್ದರೆ, ಅದು ೧೯೮೮-೮೯ ರ ವೇಳೆಗೆ ೩೮,೧೦,೬೩೭ ರೂ ಗಳನ್ನು ಹೊಂದಿತ್ತು. ಈಗ ಮಾರ್ಚ ೨೦೦೮ ರ ವೇಳೆಗೆ ೩,೩೨,೦೩,೯೨೯ ರೂಗಳನ್ನು ಗಳಿಸಿದೆ. ಇದರಿಂದ ತಿಳಿಯುವುದೆನೆಂದರೆ ಬೆಳಗಾವಿ ಜಿಲ್ಲೆ ಸಹಕಾರಿ ಪ್ರಗತಿಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಅದಲ್ಲದೆ ಹೆಚ್ಚಿನ ದುಡಿಯುವ ಬಂಡವಾಳ ಹೊಂದಿ ಸಾಲ ನೀಡಿಕೆಯಲ್ಲಿ ರಾಜ್ಯದಲ್ಲಿಯೇ ಪ್ರಥಮಸ್ಥಾನದಲ್ಲಿದೆ.

೨.೮. ಸಹಕಾರದ ರಚನೆ :

ಸಹಕಾರದ ರಚನೆಯು ಸಹಕಾರದ ಪ್ರಗತಿಯಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಭಾರತದಲ್ಲಿ ಸಾಮಾನ್ಯವಾಗಿ ಸಹಕಾರದ ರಚನೆಯು ಪಿರಾಮಿಡ್ ರಚನೆಯನ್ನು ಹೊಂದಿರುತ್ತದೆ. ಪ್ರಥಮವಾಗಿ ಪ್ರಾಥಮಿಕ ಸಂಘಗಳು ಇವುಗಳು ಗ್ರಾಮಾಂತರ ವಲಯದಲ್ಲಿ ಕಾಣುತ್ತವೆ. ಇವುಗಳು ಒಂದು ಗ್ರಾಮ ಅಥವಾ ೪ ರಿಂದ ೫ ಗ್ರಾಮಗಳನ್ನು ಒಳಗೊಂಡಿರುತ್ತದೆ. ನಂತರ ಎರಡೆಯದಾಗಿ ಕೇಂದ್ರ ಸಹಕಾರ ಸಂಘಗಳು ಇವುಗಳು ಸಾಮಾನ್ಯವಾಗಿ ಜಿಲ್ಲೆಗೊಂದರಂತೆ ಇರುತ್ತವೆ. ಇವು ಪ್ರಾಥಮಿಕ ಸಹಕಾರಿ ಸಂಘಗಳ ಮೇಲ್ವಿಚಾರಣೆ ಮಾಡುವದು ಮತ್ತು ಅವುಗಳನ್ನು ಸದಸ್ಯತ್ವಗಳನ್ನಾಗಿ ಮಾಡಿಕೊಳ್ಳುವದು ಮತ್ತು ಅವುಗಳಿಗೆ ಹಣಕಾಸಿನ ಮತ್ತು ಇನ್ನಿತರ ನೆರವನ್ನು ನೀಡುವದು ಇವುಗಳ ಕಾರ್ಯವಾಗಿರುತ್ತದೆ. ನಂತರ ರಾಜ್ಯ ಸಹಕಾರಿ ಪೆಡರೇಶನ್ ಅಥವಾ ಅಪೆಕ್ಸ್ ಬ್ಯಾಂಕ ಎಂದು ರಾಜ್ಯ ಮಟ್ಟದಲ್ಲಿರುತ್ತದೆ. ಇದು ಪ್ರತಿ ಜಿಲ್ಲೆಗಳಲ್ಲಿರುವ ಕೇಂದ್ರ ಸಹಕಾರಿ ಸಂಘಗಳ ಮೇಲ್ವಾಚಾರಣೆ ಮಾಡುವದು ಮತ್ತು ಪ್ರಾಥಮಿಕ ಹಾಗೂ ಕೇಂದ್ರಿಯ ಸಹಕಾರಿ ಸಂಘಗಳನ್ನು ಸದಸ್ಯರುಗಳನ್ನಾಗಿ ಮಾಡಿಕೊಳ್ಳುವದು, ಇದರ ಕಾರ್ಯವಾಗಿರುತ್ತದೆ. ಅದರಂತೆ ನೆರವಾಗಿ ಹಣಕಾಸಿನ ನೆರವನ್ನು ನೀಡುವದು, ಇವುಗಳ ಪ್ರಮುಖ ಕಾರ್ಯವಾಗಿದೆ. ಕೊನೆಯದಾಗಿ ರಾಷ್ಟ್ರೀಯ ಸಹಕಾರಿ ಯುನಿಯನ್ ಕಾಣುತ್ತದೆ. ಇದು ರಾಜ್ಯ ಸಹಕಾರಿ ಫೆಡರೇಶನ್‌ಗಳ ಮೇಲ್ವಾಚಾರಣೆ ಮತ್ತು ಅವುಗಳಿಗೆ ಹಣಕಾಸಿನ ನೆರವನ್ನು ನೀಡುವದು. ಇದರ ಕಾರ್ಯವಾಗಿದೆ.

: ಭಾರತದಲ್ಲಿ ಸಹಕಾರದ ರಚನೆ :



ಕೋಷ್ಟಕ ೨.೧೨

ಈ ಕೋಷ್ಟಕ ೨.೧೨ ನ್ನು ನೋಡಿದಾಗ ಮೊದಲನೆ ಹಂತದ ಸಹಕಾರ ಸಂಘಗಳೆಂದರೆ, ಪ್ರಾಥಮಿಕ ಹಂತದ ಸಹಕಾರ ಸಂಘಗಳು ಇವು ಎಲ್ಲ ಸಹಕಾರಿ ಸಂಘಗಳ ತಳಪಾಯ ಸಂಘಗಳಾಗಿ ಕಾರ್ಯ ನಿರ್ವಹಸುತ್ತವೆ. ಈ ಸಂಘಗಳ ಮೇಲೆಯೇ ಕೇಂದ್ರಿಯ ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತವೆ. ಇವುಗಳ ಮೇಲೆ ರಾಜ್ಯ ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತವೆ. ಇವುಗಳ ಮೇಲೆ ರಾಜ್ಯ ಸಹಕಾರಿ ಫೆಡರೇಶನಗಳ ಮೇಲ್ವಿಚಾರಣೆ ಇರುತ್ತದೆ. ಈ ರಾಜ್ಯ ಸಹಕಾರಿ ಫೆಡರೇಶನ್‌ಗಳ ಮೇಲೆ ರಾಷ್ಟ್ರೀಯ ಸಹಕಾರಿ ಯುನಿಯನದ ಮೇಲ್ವಿಚಾರಣೆ ಇರುತ್ತದೆ.

ಈ ರೀತಿಯಾಗಿ ಸಹಕಾರ ಸಂಘಗಳ ರಚನೆ ನಮ್ಮ ದೇಶದಲ್ಲಿದೆ.

೨.೯. ಸಹಕಾರ ಸಂಘಗಳ ಪ್ರಕಾರಗಳು:


ಭಾರತದಲ್ಲಿ ಸಹಕಾರ ಚಳುವಳಿಯ ಪರಿಣಾಮವಾಗಿ ಕೋಷ್ಟಕ ೨.೧೩ ರಲ್ಲಿ ತೋರಿಸಿದಂತೆ ಸಹಕಾರಿ ಸಂಘಗಳು ಹುಟ್ಟಿಕೊಂಡವು.

ಈ ಮುಂದಿನ ಕೋಷ್ಟಕ ೨.೧೩ ರಲ್ಲಿಯ ವಿವಿಧ ಸಂಘಗಳ ವಿವರಣೆಯನ್ನು ಸೂಕ್ಷ್ಮವಾಗಿ ಪರೀಶಿಲಿಸಬಹುದು.

ಸಾಲ ನೀಡುವ ಸಹಕಾರ ಸಂಘಗಳು :

ಸಹಕಾರಿ ಸಂಘಗಳನ್ನು ಮುಖ್ಯವಾಗಿ ಎರಡು ಪ್ರಕಾರಗಳಲ್ಲಿ ವಿಂಗಡಿಸಲಾಗುತ್ತದೆ. ಅವುಗಳೆಂದರೆ ಕೃಷಿ ಸಾಲದ ಸಹಕಾರ ಸಂಘಗಳು ಮತ್ತು ಕೃಷಿಯೇತರ ಸಾಲದ ಸಹಕಾರ ಸಂಘಗಳು ಈ ಕೆಳಗಿನಂತಿವೆ.

ಕೋಷ್ಟಕ ೨.೧೩
ಸಹಕಾರ ಸಂಘದ ಪ್ರಕಾರಗಳು



ಕೃಷಿ ಸಾಲದ ಸಹಕಾರ ಸಂಘಗಳು :

ಕೃಷಿಗೆ ಸಾಲ ನೀಡುವ ಕಾಲಾವಧಿಯ ಮೇಲೆ ಕೃಷಿ ಸಾಲ ಸಹಕಾರಿ ಸಂಘಗಳನ್ನು ಎರಡು ಪ್ರಕಾರಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ,

ಅ) ಅಲ್ಪಾವಧಿ ಮತ್ತು ಮಧ್ಯಾವಧಿ ಕೃಷಿ ಸಾಲ ಸಂಘಗಳು :

ಈ ಸಂಘಗಳು ದೇಶದ ಎಲ್ಲ ರಾಜ್ಯಗಳಲ್ಲಿ ಅಲ್ಪಾವಧಿ ಮತ್ತು ಮಧ್ಯಾವಧಿ ಸಾಲಗಳನ್ನು ಮೂರು ವಿವಿಧ ಶ್ರೇಣಿಗಳಲ್ಲಿರುವ ಸಂಘಗಳಿಂದ ವಿತರಿಸಲ್ಪಡುತ್ತದೆ. ರಾಜ್ಯ ಮಟ್ಟದಲ್ಲಿ ಒಂದು ಅಪೆಕ್ಸ ಬ್ಯಾಂಕ ಎನಿಸಿಕೊಳ್ಳುವ ರಾಜ್ಯ ಸಹಕಾರಿ ಬ್ಯಾಂಕು, ಜಿಲ್ಲಾ ಮಟ್ಟದ ಕೇಂದ್ರ ಸಹಕಾರಿ ಬ್ಯಾಂಕಗಳು ಮತ್ತು ಗ್ರಾಮ ಮಟ್ಟದಲ್ಲಿ ಪ್ರಾಥಮಿಕ ಸಹಕಾರಿ ಸಂಘಗಳು ಇರುತ್ತವೆ.

೧) ಪ್ರಾಥಮಿಕ ಕೃಷಿ ಸಹಕಾರ ಸಂಘಗಳು :

ಇವು ಗ್ರಾಮೀಣ ಪ್ರದೇಶಗಳಲ್ಲಿ ರೈತರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡಲು ರೈತರಿಂದ ಸ್ಥಾಪಿತವಾದ ಸಂಘಗಳು. ಇವು ರೈತರಿಗೆ ಉತ್ಪಾದನೆಯ ಸಲುವಾಗಿ ಸಾಲ ನೀಡುತ್ತವೆ. ಇವು ಅಕರಿಸುವ ಬಡ್ಡಿದರವು ಅತಿ ಕಡಿಮೆ ಇರುತ್ತದೆ. ಇವು ನೇರವಾಗಿ ರೈತರಿಗೆ ಉತ್ಪಾದನೆಯ ಸಲುವಾಗಿ ಸಾಲ ನೀಡುತ್ತವೆ.

೨) ಕೇಂದ್ರ ಸಹಕಾರ ಬ್ಯಾಂಕುಗಳು :

ಇವು ಜಿಲ್ಲಾ ಮಟ್ಟದಲ್ಲಿ ಜಿಲ್ಲೆಯ ಕಾರ್ಯ ವ್ಯಾಪ್ತಿಯನ್ನು ಹೊಂದಿವೆ. ಇವು ಪ್ರಾಥಮಿಕ ಸಂಘಗಳು ಮತ್ತು ರಾಜ್ಯ ಸಹಕಾರಿ ಬ್ಯಾಂಕಿನ ನಡುವೆ ಕೊಂಡಿಯಂತಿವೆ. ಇವು ಪ್ರಾಥಮಿಕ ಸಹಕಾರ ಸಂಘಗಳಿಗೆ ಸಾಲ ನೀಡುತ್ತವೆ. ಇವುಗಳ ಹಣಕಾಸಿನ ಮೂಲ ೩ ರೀತಿಯಾಗಿವೆ. ಅವುಗಳೆಂದರೆ ತಮ್ಮ ಸ್ವಂತ ಶೇರುಗಳು, ಸಾರ್ವಜನಿಕರಿಂದ ಠೇವಣಿ ಮತ್ತು ರಾಜ್ಯ ಸಹಕಾರಿ ಬ್ಯಾಂಕುಗಳಿಂದ ಸಾಲ.

೩) ರಾಜ್ಯ ಸಹಕಾರ ಬ್ಯಾಂಕುಗಳು :

ಇದು ರಾಜ್ಯಮಟ್ಟದಲ್ಲಿದ್ದು ತನ್ನ ಕಾರ್ಯ ವ್ಯಾಪ್ತಿ ಹೊಂದಿದೆ. ಇದು ಎಲ್ಲ ಕೇಂದ್ರ ಸಹಕಾರಿ ಬ್ಯಾಂಕುಗಳಿಗೆ ಸಾಲವನ್ನು ನಿಡುತ್ತದೆ. ಹಾಗೂ ಅವುಗಳ ಕಾರ್ಯಾಚರಣೆಯನ್ನು ನಿಯಂತ್ರಿಸುತ್ತವೆ. ಈ ಬ್ಯಾಂಕಗಳು ರಿಝರ್ವ ಬ್ಯಾಂಕ, ನಬಾರ್ಡದಿಂದ ಸಾಲವನ್ನು ಪಡೆಯುತ್ತವೆ. ಶೇರುಗಳು ಮತ್ತು ಸಾರ್ವಜನಿಕರಿಂದ ಠೇವಣಿಗಳ ಮೂಲಕ ಹಣ ಸಂಗ್ರಹಿಸುತ್ತವೆ.

ಬ) ದೀರ್ಘಾವಧಿ ಕೃಷಿ ಸಾಲಗಳು :

ಇವು ಕೃಷಿಗೆ ಬೇಕಾಗುವ ದೀರ್ಘಾವಧಿ ಸಾಲಗಳನ್ನು ಒದಗಿಸಲು ಸ್ಥಾಪಿಸಲ್ಪಟ್ಟ ಸಹಕಾರಿ ಬ್ಯಾಂಕುಗಳು. ಇವು ರೈತರ ಜಮೀನವನ್ನು ಅಡವಾಗಿಟ್ಟುಕೊಂಡು ದೀರ್ಘಾವಧಿ ಸಾಲವನ್ನು ನೀಡುತ್ತವೆ. ಇವು ರಾಜ್ಯದಲ್ಲಿ ಎರಡು ಹಂತದಲ್ಲಿ ಸಂಘಟಿಸಲ್ಪಟ್ಟಿವೆ.

[illegible]

[illegible]

[illegible]

[illegible]

[illegible]

[illegible]

[illegible]

೧) ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು :

ಇವು ತಾಲೂಕಾ ಮಟ್ಟದಲ್ಲಿರುತ್ತವೆ. ಇವು ಸ್ವಂತ ಶೇರುಗಳ ಮೂಲಕ ಮತ್ತು ಕೇಂದ್ರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗಳಿಂದ ಸಾಲ ಪಡೆಯುವದರೊಂದಿಗೆ ಹಣಕಾಸು ಪಡೆಯುತ್ತವೆ. ರೈತರಿಗೆ ವಿವಿಧ ಚಟುವಟಿಕೆಗಳ ಸಲುವಾಗಿ ಸಾಲ ಕೊಡುತ್ತವೆ. ರೈತರ ಜಮೀನಿನ ಅಡವಿನ ಮೇಲೆ ರೈತರಿಗೆ ದೀರ್ಘಾವಧಿ ಸಾಲವನ್ನು ಕೊಡುತ್ತವೆ. ಭೂ ಅಭಿವೃದ್ಧಿಗಾಗಿ, ಕೃಷಿ ಸಲಕರಣೆಗಳನ್ನು ಕೊಳ್ಳಲು, ಬಾವಿ ತೋಡಿಸಲು, ಬಾಕಿ ಸಾಲವನ್ನು ತಿರಿಸಲು ರೈತರಿಗೆ ಸಾಲ ಕೊಡುತ್ತವೆ.

೨) ಕೇಂದ್ರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು :

ಇವು ರಾಜ್ಯಮಟ್ಟದಲ್ಲಿ ಸ್ಥಾಪಿಸಲ್ಪಟ್ಟಿದ್ದು, ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಿಗೆ ಸಾಲ ಕೊಡುತ್ತವೆ. ತನಗೆ ಬೇಕಾಗುವ ಹಣವನ್ನು ಶೇರುಗಳು, ಸಾಲ ಪತ್ರಗಳು ಮತ್ತು ರಿಝರ್ವ ಬ್ಯಾಂಕನಿಂದ ಸಾಲದ ರೂಪದಲ್ಲಿ ಪಡೆಯುತ್ತವೆ.

ಕೃಷಿಯೇತರ ಸಾಲ ಸಹಕಾರ ಸಂಘಗಳು :

ಇವು ಪಟ್ಟಣ ಮತ್ತು ನಗರಗಳಲ್ಲಿ ಅಸ್ತಿತ್ವದಲ್ಲಿದ್ದು, ಇವು ಅಲ್ಪಾವಧಿ ಮತ್ತು ಮಧ್ಯಾವಧಿ ಸಾಲವನ್ನು ಕಸಬುದಾರರಿಗೆ, ಸಣ್ಣ ವ್ಯಾಪಾರಸ್ಥರಿಗೆ, ಸರಕಾರಿ ನೌಕರರಿಗೆ, ಕಾರ್ಮಿಕರಿಗೆ ಇತ್ಯಾದಿ ಸಾಲವನ್ನು ಕೊಡುತ್ತವೆ. ಕೃಷಿಯೇತರ ಸಾಲದ ಸಹಕಾರ ಸಂಘಗಳಲ್ಲಿ ನಗರ ಪ್ರದೇಶದ ಸಹಕಾರಿ ಬ್ಯಾಂಕುಗಳು ಮತ್ತು ನೌಕರರ ಸಾಲ ಸಂಘಗಳನ್ನು ಪ್ರಮುಖವಾಗಿ ಕಾಣುತ್ತವೆ.

ಈ ಸಂಘಗಳಲ್ಲಿ ಪ್ರಮುಖವಾದವುಗಳು :

೧) ಪಟ್ಟಣ ಸಹಕಾರಿ ಸಂಘಗಳು :

ಇವು ನಗರ ಮತ್ತು ಪಟ್ಟಣ ಮಟ್ಟದಲ್ಲಿದ್ದು, ಅಲ್ಪಾವಧಿ ಸಾಲವನ್ನು ಸಣ್ಣ ವ್ಯಾಪಾರಸ್ಥರಿಗೆ ಮತ್ತು ಹಲವಾರು ಉದ್ದೇಶಗಳಿಗಾಗಿ, ಮಧ್ಯಮ ವರ್ಗದವರಿಗೆ ಅಲ್ಪಾವಧಿ ಮತ್ತು ಮಧ್ಯಾವಧಿ ಸಾಲವನ್ನು, ಸಣ್ಣ ವ್ಯಾಪಾರಸ್ಥರಿಗೆ, ಕಸಬುದಾರರಿಗೆ ಕೊಡುತ್ತವೆ.

೨) ನೌಕರರ ಸಾಲ ಸಹಕಾರ ಸಂಘಗಳು :

ಇವು ಪಟ್ಟಣ ಮತ್ತು ನಗರಗಳಲ್ಲಿ ಅಸ್ತಿತ್ವದಲ್ಲಿದ್ದು, ಸದಸ್ಯ ನೌಕರರಿಗೆ ಅಲ್ಪಾವಧಿ ಮತ್ತು ಮಧ್ಯಾವಧಿ ಸಾಲವನ್ನು ಕಡಿಮೆ ಬಡ್ಡಿದರದಲ್ಲಿ ಒದಗಿಸುತ್ತವೆ. ಇವು ಸಂಘಗಳ ಹಣವನ್ನು ಪ್ರವೇಶ ಫೀ ಶೇರುಗಳು ಮತ್ತು ಕೇಂದ್ರ ಸಹಕಾರ ಬ್ಯಾಂಕಿನಿಂದ ಸಾಲದ ರೂಪದಲ್ಲಿ ಸಂಗ್ರಹಿಸುತ್ತವೆ.

೩) ಗೃಹ ನಿರ್ಮಾಣ ಸಹಕಾರ ಸಂಘಗಳು :

ಇವು ತಮ್ಮ ಸದಸ್ಯರಿಗೆ ವಾಸದ ಮನೆಗಳನ್ನು ಕಟ್ಟಿಕೊಡಲು ಮತ್ತು ನಿವೇಶನ ನೀಡಲು ಸ್ಥಾಪಿತವಾಗಿರುತ್ತವೆ. ಇವು ಭೂ ನಿವೇಶನಗಳನ್ನು ಖರೀದಿಸಿ, ಅಭಿವೃದ್ಧಿಗೊಳಿಸಿ ತಮ್ಮ ಸದಸ್ಯರಿಗೆ ಮಾರುತ್ತವೆ. ಮತ್ತು ಸದಸ್ಯರಿಂದ ಸಂಘದ ಹಣವನ್ನು ವಿವಿಧ ಕಂತುಗಳ ಮೂಲಕ ಭರಣಾ

ಮಾಡಿಕೊಳ್ಳುತ್ತದೆ. ಸಂಘದ ಸಾಲವು ಸದಸ್ಯರಿಂದ ಪೂರ್ಣ ಭರಣಾ ಆದ ನಂತರ ಆ ನಿವೇಶನಗಳ ಮಾಲಿಕತ್ವವನ್ನು ಸದಸ್ಯರಿಗೆ ವರ್ಗಾಯಿಸಲಾಗುತ್ತದೆ.

೪) ಕೃಷಿ ಹುಟ್ಟುವಳಿ ಮಾರಾಟ ಸಂಘಗಳು :

ಇವು ತಮ್ಮ ಸದಸ್ಯರಿಗೆ ಕೃಷಿ ಹುಟ್ಟುವಳಿ ಮಾರಾಟ ಮಾಡಲು ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳನ್ನು ಒದಗಿಸುತ್ತವೆ. ಇವು ತಮ್ಮ ಸದಸ್ಯರಿಂದ ಸಾಲಗಳನ್ನು ಬಡ್ಡಿ ಸಹಿತ ನಿಗಧಿತ ಅವಧಿಯಲ್ಲಿ ವಸೂಲಿ ಮಾಡುತ್ತವೆ.

ಸಾಲ ನೀಡದ ಸಂಘಗಳು :

ಈ ಸಂಘಗಳು ಸಾಲವನ್ನು ನೀಡದೆ ಗ್ರಾಹಕರಿಗೆ ಸೇವೆಯನ್ನು ಒದಗಿಸಲು ಪ್ರಾರಂಭಿಸಲ್ಪಟ್ಟಿವೆ. ಸಾಲ ನೀಡದ ಕೃಷಿ ಸಂಘಗಳನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

ಅ) ಸಾಲ ನೀಡದ ಕೃಷಿ ಸಹಕಾರಿ ಸಂಘಗಳು :

ಸಾಲ ನೀಡದ ಕೃಷಿ ಸಹಕಾರಿ ಸಂಘಗಳ ಎರಡು ಪ್ರಕಾರಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಸಹಕಾರ ಬೇಸಾಯ ಸಂಘಗಳು ಮತ್ತು ಸಹಕಾರ ಮಾರಾಟ ಸಂಘಗಳು.

೧) ಸಹಕಾರ ಮಾರಾಟ ಸಂಘಗಳು :

ಇವುಗಳನ್ನು ಕೃಷಿ ವಸ್ತುಗಳ ಮಾರಾಟ ಕ್ಷೇತ್ರದಲ್ಲಿಯೂ ಸ್ಥಾಪಿಸಲಾಗುತ್ತದೆ. ಇವು ರೈತರ ಹುಟ್ಟುವಳಿಯನ್ನು ಮಾರುಕಟ್ಟೆಯಲ್ಲಿ ಯೋಗ್ಯ ಬೆಲೆಗೆ ಮಾರುತ್ತವೆ. ಇವು ಮಧ್ಯಸ್ಥಗಾರರು ಹಾಗೂ ವ್ಯಾಪಾರಿಗಳ ಶೋಷಣೆ ತಡೆಗಟ್ಟುತ್ತವೆ.

೨) ಸಹಕಾರ ಬೇಸಾಯ ಸಂಘಗಳು :

ಇವುಗಳನ್ನು ಹಳ್ಳಿಗಳಲ್ಲಿ ಸಣ್ಣ ಹಿಡುವಳಿದಾರರು ತಮ್ಮ ಹಿಡುವಳಿ ಸಾಧನ, ಸಲಕರಣೆಗಳನ್ನು ಒಟ್ಟುಗೂಡಿಸಿ ಬೇಸಾಯ ನಡೆಸಲು ಸ್ಥಾಪಿಸುವವರು. ಇದು ಆಧುನಿಕ ಬೇಸಾಯ ಕೈಕೊಳ್ಳಲು ಸೂಕ್ತವಾಗಿದೆ. ಈ ಸಹಕಾಸರಿ ಬೇಸಾಯ ಸಂಘವು ಅತ್ಯಂತ ಉಪಯುಕ್ತಕರವಾಗಿದೆ. ಇದರಿಂದ ಸಣ್ಣ ರೈತರು ತಮ್ಮ ಉತ್ಪನ್ನವನ್ನು ಹೆಚ್ಚಿಸಿಕೊಂಡು ಜೀವನ ಮಟ್ಟವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಿದೆ.

ಬ) ಸಾಲ ನೀಡದ ಕೃಷಿಯೇತರ ಸಹಕಾರ ಸಂಘಗಳು :

ಸಾಲವನ್ನು ನೀಡದ ಉದ್ದೇಶವನ್ನು ಇಟ್ಟಕೊಂಡು ಕೃಷಿಯೇತರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತವೆ. ಇವುಗಳನ್ನು ಎರಡು ಪ್ರಕಾರವಾಗಿ ವಿಂಗಡಿಸಲಾಗುತ್ತದೆ.

೧. ಉತ್ಪಾದಕರ ಸಹಕಾರ ಸಂಘಗಳು :

ಇವುಗಳನ್ನು ಕೈಗಾರಿಕಾ ಸಹಕಾರ ಸಂಘಗಳೆಂದು ಕರೆಯುತ್ತಾರೆ. ಗೃಹ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವದು ಇದರ ಗುರಿಯಾಗಿದೆ. ಮಾಲಕರಿಂದ ಶೋಷಣೆಯನ್ನು ತಪ್ಪಿಸಲು, ಈ ಸಂಘಗಳನ್ನು ಸ್ಥಾಪಿಸಲಾಗುತ್ತದೆ. ಈ ಸಂಘಗಳಲ್ಲಿ ಕಚ್ಚಾ ವಸ್ತುಗಳನ್ನು ಮತ್ತು ಉತ್ಪಾದನಾ

ಸಲಕರಣೆಗಳನ್ನು ಸದಸ್ಯರಿಗೆ ಒದಗಿಸುತ್ತವೆ. ಸದಸ್ಯರು ಮನೆಯಲ್ಲಿ ವಸ್ತಗಳನ್ನು ಉತ್ಪಾದಿಸಿ ಸಹಕಾರ ಸಂಘಗಳಿಗೆ ಮಾರುತ್ತಾರೆ.

೨. ಗ್ರಾಹಕರ ಸಹಕಾರ ಸಂಘಗಳು :

ಗ್ರಾಹಕರಿಗೆ ಉತ್ತಮ ಗುಣಮಟ್ಟದ ಬಳಕೆಯ ವಸ್ತುಗಳನ್ನು ನ್ಯಾಯ ಬೆಲೆಗೆ ಮಾರಾಟ ಮಾಡಲು ಇವು ಸ್ಥಾಪಿತವಾಗಿವೆ. ಇವುಗಳಿಗೆ ಯೋಗ್ಯ ದರದ ಮಾರಾಟ ಸಂಘಗಳೆಂದು ಕರೆಯುತ್ತಾರೆ. ಇಂತಹ ಬಗೆಯ ಗ್ರಾಹಕರ ಸಂಘಗಳು ದೇಶದಲ್ಲಿ ವಿವಿಧ ಭಾಗಗಳಲ್ಲಿ ಕಂಡು ಬರುತ್ತವೆ. ಇವು ಗ್ರಾಹಕ ಸದಸ್ಯರಿಗೆ ತ್ವರಿತ ಸೇವೆಯನ್ನು ಒದಗಿಸಲು ಪ್ರಾರಂಭವಾಗಿವೆ.

ಈ ರೀತಿಯಾಗಿ ಗ್ರಾಹಕ ಸಂಘಗಳು ದೇಶದಲ್ಲಿ ಹಲವಾರು ಕಡೆ ಪ್ರಾರಂಭವಾಗಿವೆ. ಅದೇ ರೀತಿ ನಮ್ಮ ಅಧ್ಯಯನದ ವಿಷಯ ವಸ್ತುವಾಗಿರುವ ಹುಕ್ಕೇರಿ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘ ನಿಯಮಿತ ಹುಕ್ಕೇರಿ ಇದು ಕೂಡಾ ಒಂದು ಗ್ರಾಹಕರ ಸಹಕಾರಿ ಸಂಘವಾಗಿದ್ದು, ಇಡೀ ಕರ್ನಾಟಕ ರಾಜ್ಯದಲ್ಲಿಯೇ ಸಹಕಾರ ಕ್ಷೇತ್ರದಲ್ಲಿ ವಿದ್ಯುಚ್ಛಕ್ತಿ ವಿತರಣೆ ಮಾಡುವ ಏಕೈಕ ಸಂಘವಾಗಿದೆ. ಇಂತಹ ಗ್ರಾಹಕ ಸಹಕಾರಿ ಸಂಘವು ವಿದ್ಯುಚ್ಛಕ್ತಿ ವಿತರಣೆಯನ್ನು ತನ್ನ ಸದಸ್ಯ ಗ್ರಾಹಕರಿಗೆ ಯಾವ ರೀತಿ ವಿತರಿಸುತ್ತದೆ? ಅದರ ಕಾರ್ಯಕ್ಷೇತ್ರವೇನು? ಅದು ಗ್ರಾಹಕರ ಅಭಿರುಚಿಗೆ ಅನುಗುಣವಾಗಿ ವರ್ತಿಸುತ್ತಿದೆ? ಎನ್ನುವ ವಿಶಾಲ ಅಧ್ಯಯನವನ್ನು ಮುಂದಿನ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಆಕರಗಳು:

೧. ಎ.ಪಿ ಶ್ರೀನಿವಾಸ ಮೂರ್ತಿ: ಸಹಕಾರ ತತ್ವಗಳು ಮತ್ತು ಸಮಸ್ಯೆಗಳು
ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ ೧೯೭೫ ಪು.ಸಂ.೪

೨. ಬಿ.ಎಸ್.ಮಾಥುರ : ಕೋ.ಆಪರೇಶನ ಇನ್ ಇಂಡಿಯಾ
ಪ್ರ. ಸಾಹಿತ್ಯ ಭವನ ಆಗ್ರಾ ೧೯೯೫ ಪು.ಸಂ.೭

೩. ಜಿ.ಎಲ್.ಬಡಿಗೇರ : ಭಾರತದಲ್ಲಿ ಗ್ರಾಮಿಣಾಭಿವೃದ್ಧಿ
ಸಂಗಮೇಶ್ವರ ಪ್ರಕಾಶನ ಸಂಕೇಶ್ವರ ಪು.ಸಂ.೧೫೫ ಮತ್ತು ೧೫೬

೪. ಜಿ.ಕೆ.ಶರ್ಮಾ : ಭಾರತ ಸಹಕಾರಿ ಆಂದೋಲನ,
ತಮಿಳನಾಡು ಸಹಕಾರ ಪ್ರತಿಕೆ ಅಕ್ಟೋಬರ ೧೯೮೯ ಪು.ಸಂ.೧೮೮–೧೮೯

೫. ಈರಣ್ಣ ಹಟ್ಟಿ : ವ್ಯವಹಾರ ಅಧ್ಯಯನ
ಆಯ್. ಟಿ.ಎಚ್.ಪ್ರಕಾಶನ ಹುಬ್ಬಳ್ಳಿ ಪು.ಸಂ.೧೩೫

೬. ಈರಣ್ಣ ನಾಗಠಾಣ : ಸಹಕಾರ ಮತ್ತು ಪ್ರಜಾಪ್ರಭುತ್ವ
ವಜ್ರ ಮಹೋತ್ಸವ ಶ್ರೀ.ಸಿದ್ದೇಶ್ವರ ಬ್ಯಾಂಕ ೧೯೮೮

[illegible]

೭. ಎಸ್.ಎನ್.ನಾಯಿಕ : <u>ಭಾರತದ ಅರ್ಥಶಾಸ್ತ್ರದ ಪರಿಚಯ</u>
ವಿಜಯ ಪಬ್ಲಿಕೇಶನ್ಸ ಗದಗ ೨೦೦೧-೦೨
ಪು.ಸಂ.೩೨೮

೮. ವ್ಹಿ.ಶಾರದಾ : <u>ಥೇರಿ ಆಫ್ ಕೋ.ಆಪರೇಶನ</u>
ಹಿಮಾಲಯ ಪುಸ್ತಕ ಪ್ರಕಟನೆ ೧೯೮೬ ಪು.ಸಂ.೧

೯. ೧೯೬೬ರ ಅಂತರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯ ಭಾರತ ಸರಕಾರದ ವರದಿ, ಸಹಕಾರ ಮತ್ತು ಗ್ರಾಮೀಣಾಭಿವೃದ್ಧಿ ಸಚೀವಾಲಯ ಭಾರತ ಸರಕಾರದ ಪ್ರಕಟಣೆ ೧೯೫೧ ಪು.ಸಂ.೩೮೪ ಮತ್ತು ೩೮೫

೧೦ ಆರ್.ಬಿ.ಆಯ್. ವರದಿ ಮತ್ತು ನಬಾರ್ಡ ೧೯೯೧ ಪು.ಸಂ.೨೭

೧೧. ಪ್ರಥಮ ಪಂಚವಾರ್ಷಿಕ ಯೋಜನೆ ಭಾರತ ಸರಕಾರದ ಪ್ರಕಟಣೆ ೧೯೫೧ ಪು.ಸಂ.೧೬೩

೧೨. ಆರನೇಯ ಪಂಚವಾರ್ಷಿಕ ಯೋಜನೆ ಭಾರತ ಸರಕಾರದ ಪ್ರಕಟಣೆ ೧೯೮೬ ಪು.ಸಂ.೧೪೦

ಅಧ್ಯಾಯ-೩

ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ ನಿಯಮಿತ, ಹುಕ್ಕೇರಿ ಇದರ ಪಾತ್ರ

ಪರಿವಿಡಿ

ಅಧ್ಯಾಯ–೩

ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ ನಿಯಮಿತ, ಹುಕ್ಕೇರಿ ಇದರ ಪಾತ್ರ.

ಅಧ್ಯಾಯ – ೩

ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ ನಿಯಮಿತ, ಹುಕ್ಕೇರಿ ಇದರ ಪಾತ್ರ

೩.೧ ಪೀಠಿಕೆ :

ಶ್ರದ್ಧೆ, ನಿಷ್ಠೆ ಹಾಗೂ ಸಮರ್ಪಣಾ ಮನೋಭಾವ ಹೊಂದಿದ ಸಹಕಾರ ಧುರಿಣರಾದ ಶ್ರೀ ಅಪ್ಪಣಗೌಡಾ ಪಾಟೀಲರ ನೇತೃತ್ವದಲ್ಲಿ ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘವು ೧೯೭೦ ರಲ್ಲಿ ಕಾರ್ಯ ಪ್ರಾರಂಭಿಸಿದ್ದು, ಭಾರತದಲ್ಲಿ ಕಾರ್ಯ ಪ್ರಾರಂಬಿಸಿದ ಪ್ರಥಮ ಹಾಗೂ ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರತವಾದ ಏಕೈಕ ವಿದ್ಯುತ್ ಸಹಕಾರಿ ಸಂಘವಾಗಿದೆ. ಹುಕ್ಕೇರಿ ತಾಲೂಕಿನ ಗ್ರಾಮೀಣ ವಿದ್ಯುತ್ತೀಕರಣದಲ್ಲಿ ಗಣನೀಯ ಪ್ರಗತಿ ಸಾಧಿಸಿದೆ.

ಗ್ರಾಮೀಣ ವಿದ್ಯುತ್ ಸಹಕಾರಿ ಸಂಘಗಳ ಮೂಲವನ್ನು ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಸನ್ ೧೯೩೫ ರಲ್ಲಿ ಕಾಣಬಹುದು. ಖಾಸಗಿ ಕಂಪನಿಗಳ ಲಾಭ ಗಳಿಕೆಯನ್ನು ನಿಯಂತ್ರಿಸುವುದಕ್ಕಾಗಿ, ಗ್ರಾಮೀಣ ಜನತೆಗೆ ತೀವ್ರವಾಗಿ ವಿದ್ಯುತ್ ಒದಗಿಸುವದಕ್ಕಾಗಿ ಅಮೇರಿಕೆಯು ೧೯೩೫ ರಲ್ಲಿ ಆರ್.ಇ.ಎ. (ರೂರಲ್ ಇಲೆಕ್ಟ್ರಿಫಿಕೇಶನ್ ಅಡ್ಮನಿಸ್ಟ್ರೇಶನ್) ಪ್ರಾರಂಭವಾಗಿ ಅದರ ಪ್ರಯೋಜನ ಪಡೆಯಲು ಸಹಕಾರ ಸಂಘಗಳು ಪ್ರಾರಂಭವಾದವು. ನಂತರ ೧೯೪೨ ರಲ್ಲಿ ಎನ್.ಆರ್.ಇ.ಸಿ.ಎ. (ನ್ಯಾಶನಲ್ ರೂರಲ್ ಎಲೆಕ್ಟ್ರಿಕ್ ಕೋ–ಆಫರೇಟಿವ್ ಅಸೋಶಿಯೇಶನ್) ಸ್ಥಾಪಿತವಾಗಿ ಅದರಿಂದ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘಗಳು ಘೋಷಿಸಲ್ಪಟ್ಟವು. ಭಾರತದಲ್ಲಿ ಇಂತಹ ಸಹಕಾರಿ ಸಂಘಗಳ ಕುರಿತು ಬ್ರಿಟಿಷ್ ಇಂಡಿಯಾದ ಮುಂಬೈ ಪ್ರಾಂತ್ಯದಲ್ಲಿ ಸನ್ ೧೯೪೦ ರಲ್ಲಿ ಮೊದಲ ಬಾರಿ ಯೋಜನೆಯನ್ನು ತಯಾರಿಸಲಾಯಿತು. ನಂತರ ಗುಜರಾತ ರಾಜ್ಯದ ವ್ಯಾರ ಕಾನಪುರ ಮತ್ತು ಬೊರ್ಡೋಲಿಗಳಲ್ಲಿ ಸಹಕಾರಿ ಸಂಘಗಳನ್ನು ಸ್ಥಾಪಿಸಲಾಯಿತು. ಸನ್ ೧೯೬೫ ರ ಹೊತ್ತಿಗೆ ಮಹಾರಾಷ್ಟ್ರದಲ್ಲಿ ೧೨, ಗುಜರಾತದಲ್ಲಿ ೬ ಸಹಕಾರಿ ಸಂಘಗಳು ಕಾರ್ಯ ನಿರ್ವಹಿಸುತ್ತಿದ್ದವು. ಇವು ಅತಿ ಸಣ್ಣ ಭಾಗ, ಉಪ ಪಟ್ಟಣಗಳಿಗೆ ಸೀಮಿತವಾಗಿದ್ದವು.

ಭಾರತದಲ್ಲಿ ೩ ನೇಯ ಪಂಚವಾರ್ಷಿಕ ಯೋಜನೆಯಲ್ಲಿ ವಿದ್ಯುತನ್ನು ಗ್ರಾಮೀಣ ಭಾಗದಲ್ಲಿ ಪೂರೈಸಿ ಭೂ ಜಲವನ್ನು ಬಳಸಿ ನೀರಾವರಿ ಬೆಳೆ ತೆಗೆಯುವುದಕ್ಕೆ ನೀರಾವರಿ ಪಂಪ್ ಸೆಟಗಳಿಗೆ ವಿದ್ಯುತನ್ನು ಒದಗಿಸುವದರೊಂದಿಗೆ ಕೃಷಿ ಸಂಬಂಧಿತ ಕೈಗಾರಿಕೆಗಳನ್ನು ಅಭಿವೃದ್ಧಿ ಪಡೆಸುವ ಯೋಜನೆಗಳಿಗೆ ಹೆಚ್ಚು ಮಹತ್ವ ಕೊಡಲಾಯಿತು. **'ಸಾಮಾಜಿಕ ನ್ಯಾಯದೊಂದಿಗೆ ಅಭಿವೃದ್ಧಿ'** ಸಾಧಿಸಲು ಗ್ರಾಮೀಣ ಕ್ಷೇತ್ರದಲ್ಲಿ ಅಭಿವೃದ್ಧಿ ಅವಶ್ಯ. ಗ್ರಾಮೀಣ ಕ್ಷೇತ್ರದ ಬೆಳವಣಿಗೆಯಲ್ಲಿ ವಿದ್ಯುತೀಕರಣ ಮಹತ್ವದಾಗಿದೆ. 'ಸಹಕಾರ' ರಂಗಕ್ಕೆ ಒಕ್ಕಲುತನ, ನೀರಾವರಿ, ಉತ್ಪಾದನೆ, ಮಾರಾಟ, ಗೃಹ ನಿರ್ಮಾಣ ಮತ್ತು ವಿದ್ಯುದ್ದೀಕರಣ ಕಾರ್ಯವನ್ನು

[illegible]

[illegible]

[illegible]

[illegible]

[illegible]

[illegible]

ವಹಿಸಿಕೊಡುವದು ಅವಶ್ಯವೆಂದು ಪಂಚವಾರ್ಷಿಕ ಯೋಜನೆಗಳ ಕರಡಿನಲ್ಲಿ ಹೇಳಲಾಗಿದೆ. ಇದರನ್ವಯ ರಾಜ್ಯ ವಿದ್ಯುತ್ ಮಂಡಳಿಗಳ ಚೇರಮನ್ನರ ನವ್ಹೆಂಬರ್ ೧೯೬೫ ರ ವಿಚಾರ ಗೋಷ್ಠಿಯಲ್ಲಿ ಅಮೇರಿಕೆಯ ಸಹಾಯಕ ಸಂಸ್ಥೆ (ಯು.ಎಸ್.ಡಿ.ಎ.ಆಯ್.ಡಿ) ಯೊಂದಿಗೆ ಚರ್ಚಿಸಿದರನ್ವಯ ಪ್ರತಿಯೊಂದು ರಾಜ್ಯದಲ್ಲಿ ಕ್ಷೇತ್ರ ಆಧಾರಿತ, ಪ್ರಾಯೋಗಿಕ ಒಂದೊಂದು ಗ್ರಾಮೀಣ ವಿದ್ಯುತ್ ಸಹಕಾರ ಸಂಘವನ್ನು ಸ್ಥಾಪಿಸಲು ಒಪ್ಪಲಾಯಿತು.

ಆಲ್ ಇಂಡಿಯಾ ರೂರಲ್ ಕ್ರೇಡಿಟ್ ರಿವ್ಹಿವ ಕಮೀಟಿ (ವೆಂಕಟಪಯ್ಯಾ ಕಮೀಟಿ) ಯ ಶಿಫಾರಸ್ಸನ್ನು ಆಧರಿಸಿ ಗ್ರಾಮೀಣ ವಿದ್ಯುದ್ದೀಕರಣಕ್ಕೆ ಹೆಚ್ಚಿನ ವಿಚಾರಣೆ ಕೊಡುವುದಕ್ಕಾಗಿ ಭಾರತ ಸರಕಾರವು ಸನ್ ೧೯೬೯ ರಲ್ಲಿ "ಗ್ರಾಮೀಣ ವಿದ್ಯುದ್ದೀಕರಣ ಮಹಾಮಂಡಳನ್ನು (ಆರ್.ಇ.ಸಿ., ರೂರಲ್ ಇಲೆಕ್ಟ್ರಿಫಿಕೇಶನ)" ಸ್ಥಾಪಿಸಿತು. ಇದಕ್ಕೆ ಹಣಕಾಸು ಪೂರೈಸುವ ಹೊಣೆಯನ್ನು ವಹಿಸಲಾಗಿತ್ತು. ಅಮೇರಿಕೆಯ ಎನ್.ಆರ್.ಇ.ಸಿ.ಎ ದವರು ಭಾರತದಲ್ಲಿ ಗ್ರಾಮಿಣ ವಿದ್ಯುತ್ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಪೂರ್ವಭಾವಿ ಸರ್ವೆ ಕೈಗೊಂಡ ಮೇರೆಗೆ ಭಾರತದಲ್ಲಿ ಕರ್ನಾಟಕವನ್ನೊಳಗೊಂಡು ೫ ರಾಜ್ಯಗಳಲ್ಲಿ ತಲಾ ೧ ರಂತೆ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಕ್ರಮಕೈಗೊಳ್ಳಲಾಯಿತು. ದ್ವಿತಿಯ ಹಂತದ ಸರ್ವೆಯಲ್ಲಿ ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯನ್ನು ಮತ್ತು ತೃತೀಯ ಹಂತದ ಸರ್ವೆಯಲ್ಲಿ ಹುಕ್ಕೇರಿ ತಾಲೂಕನ್ನು ಅದರ ವಿಶಿಷ್ಟ ಭೌಗೋಳಿಕ ಸ್ಥಾನ, ಸಾಮಾಜಿಕ ಪರಿಸ್ಥಿತಿ, ಆಗಿನ ಕೃಷಿ ಮತ್ತು ಔದ್ಯೋಗಿಕರಣ ಹಿಂದುಳಿಯುವಿಕೆ ಮತ್ತು ಸಹಕಾರ ರಂಗದ ಬೆಳವಣಿಗಾಗಿ ಇದ್ದ ಅನುಕೂಲತೆಗಳ ಆಧಾರದ ಮೇಲೆ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘವನ್ನು ಸ್ಥಾಪಿಸಲು ಆಯ್ಕೆ ಮಾಡಲಾಯಿತು. ಸಹಕಾರ ಧುರೀಣ ದಿ. ಅಪ್ಪಣಗೌಡಾ ಪಾಟೀಲರ ನೇತೃತ್ವದಲ್ಲಿ ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘವು ಹುಕ್ಕೇರಿಯಲ್ಲಿ ಮುಖ್ಯ ಕಛೇರಿಯೊಂದಿಗೆ ಸನ್ ೧೯೬೯ ಜುಲೈ ೩೧ ರಂದು ನೋಂದಣಿಯಾಗಿ ಸನ್ ೧೯೭೦ ರಲ್ಲಿ ಅಕ್ಟೋಬರ್ ೧೨ ರಂದು ಕಾರ್ಯ ಪ್ರಾರಂಭಿಸಿತು.

ಈ ವಿದ್ಯುತ್ ಸಹಕಾರಿ ಸಂಘವು ತನ್ನ ಕ್ಷೇತ್ರದಲ್ಲಿ ಕೃಷಿ, ನೀರಾವರಿ, ಚಿಕ್ಕ ಉದ್ದಮಿಗಳು, ಸಂಘ ಸಂಸ್ಥೆಗಳು, ಮನೆಗಳು ಮತ್ತು ವ್ಯಾಪಾರ ಉದ್ದಿಮೆಗಳು ಇತ್ಯಾದಿ ಕ್ಷೇತ್ರಕ್ಕೆ ವಿದ್ಯುತ್ ಒದಗಿಸಿ ಈ ಹುಕ್ಕೇರಿ ತಾಲೂಕಿನ ಆರ್ಥಿಕ ಅಭಿವೃದ್ಧಿಗೆ ಸಹಕರಿಸಿದೆ.

೩.೨. ಭೌಗೋಳಿಕ ಸ್ಥಾನ :

ಹುಕ್ಕೇರಿ ತಾಲೂಕವು ಬೆಳಗಾವಿ ಜಿಲ್ಲೆಯ ಕರ್ನಾಟಕ ರಾಜ್ಯದ ವಾಯವ್ಯ ಭಾಗದಲ್ಲಿದ್ದು, ಇದು ಪೂರ್ವ ೧೫°-೫೮' ಅಕ್ಷಾಂಶ, ಪಶ್ಚಿಮ ೧೬°-೩೧' ಅಕ್ಷಾಂಶ ಮತ್ತು ಉತ್ತರ ೭೪°-೧೯' ರೇಖಾಂಶ, ದಕ್ಷಿಣ ೭೪°-೪೫' ರೇಖಾಂಶಗಳ ಮಧ್ಯದಲ್ಲಿ ಇರುತ್ತದೆ. ಈ ತಾಲೂಕವು ಬೆಳಗಾವಿ ಜಿಲ್ಲೆಯ ಉತ್ತರ ಅರೆಮಲೆನಾಡು ವಲಯದಲ್ಲಿ ಬರುತ್ತದೆ. ಈ ಹುಕ್ಕೇರಿ ತಾಲೂಕವು ೯೯೧.೫ ಚ.ಕೀ. ವಿಸ್ತೀರ್ಣವನ್ನು ಹೊಂದಿದ್ದು, ಘಟಪ್ರಭಾ ನದಿಗೆ ನಿರ್ಮಿಸಲಾದ ರಾಜಾ ಲಖಮಗೌಡಾ ಜಲಾಶಯವು ಈ ತಾಲೂಕಿನಲ್ಲಿ ಇದೆ. ಮತ್ತು ತಾಲೂಕಿನ ಪಶ್ಚಿಮ ಭಾಗಕ್ಕೆ ರಾಷ್ಟ್ರೀಯ ಹೆದ್ದಾರಿ ನಂ ೪ ಇರುತ್ತದೆ.

[illegible]

[illegible]

[illegible]

[illegible]

೩.೩. ಸಂಘದ ಸ್ಥಾಪನೆ :

ಹುಕ್ಕೇರಿ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘವು ಭಾರತ ದೇಶದಲ್ಲಿಯೇ ಪ್ರಾರಂಭವಾದ ೫ ಪ್ರಾಯೋಗಿಕ ವಿದ್ಯುಚ್ಛಕ್ತಿ ಸಹಕಾರಿ ಸಂಘಗಳಲ್ಲಿ ಒಂದಾಗಿದ್ದು, ಜುಲೈ ೧೯೬೯ ರಲ್ಲಿ ನೋಂದಣಿಯಾಗಿದೆ. ನವ್ಹೆಂಬರ್ ೧೯೬೯ ರಲ್ಲಿ ವಿದ್ಯುತ್ ವಿತರಣೆಯ ಲೈಸನ್ಸನ್ನು ಭಾರತೀಯ ವಿದ್ಯುಚ್ಛಕ್ತಿಯ ಕಾಯ್ದೆ ೧೯೧೦ ರ ಅಡಿಯಲ್ಲಿ ಪಡೆದು, ಅಕ್ಟೋಬರ್ ೧೯೭೦ ರಲ್ಲಿ ಕಾರ್ಯಾಚರಣೆ ಪ್ರಾರಂಭಿಸಿತು. ಸಹಕಾರಿ ಧುರಿಣರಾದ ದಿ. ಅಪ್ಪಣಗೌಡಾ ಪಾಟೀಲ ಇವರ ನೇತೃತ್ವದಲ್ಲಿ ಭಾರತ ದೇಶದಲ್ಲಿಯೇ ಪ್ರ-ಪ್ರಥಮವಾಗಿ ಕಾರ್ಯಾಚರಣೆ ಪ್ರಾರಂಬಿಸಿದ ಹೆಮ್ಮೆಯ ವಿದ್ಯುತ್ ಸಹಕಾರಿ ಸಂಘವಾಗಿದೆ. ಈ ಸಂಘದ ಸ್ಥಾಪನೆಗೆ ಶ್ರಮಿಸಿದ ಸಹಕಾರ ಧುರೀಣರು ಈ ಕೆಳಗಿನಂತಿದ್ದಾರೆ.

೧. ದಿವಂಗತ ಅಪ್ಪಣಗೌಡಾ ಪಾಟೀಲ (ಸಂಕೇಶ್ವರ)

೨. ದಿವಂಗತ ವ್ಹಿ. ಎಮ್. ಕತ್ತಿ (ಬೆಲ್ಲದ-ಬಾಗೇವಾಡಿ)

೩. ದಿವಂಗತ ಕೆ. ಬಿ. ಪಾಟೀಲ (ಅಮ್ಮಣಗಿ)

೪. ದಿವಂಗತ ಅಪ್ಪಗೌಡಾ ಉರ್ಪ ರಾಯಗೌಡಾ ಪಾಟೀಲ (ಹೆಬ್ಬಾಳ)

೫. ದಿವಂಗತ ಎ. ಬಿ. ನಾಯಿಕ (ಹುಕ್ಕೇರಿ)

೬. ದಿವಂಗತ ಅಕ್ಕಪ್ಪ ಸಿದ್ದಪ್ಪಾ ನಾಯಿಕ (ಹುಕ್ಕೇರಿ)

೭. ದಿವಂಗತ ಜೆ. ಡಿ. ಸಂದರವಾಲ (ಕಣಗಲಾ)

೮. ದಿವಂಗತ ಬಿ. ಎಲ್. ಪಾಟೀಲ (ಯಮಕನಮರಡಿ)

೯. ದಿವಂಗತ ಎಸ್. ಬಿ. ಮಗದುಮ್ಮ (ಘೋಡಗೇರಿ)

೧೦. ದಿವಂಗತ ಎ. ಎನ್. ಸೊಲ್ಲಾಪೂರೆ (ಹುಕ್ಕೇರಿ)

ಇದರ ಕಾರ್ಯಾರಂಭವು ದಿನಾಂಕ: ೧೦-೧೦-೧೯೭೦ ರಂದು ವಿಜಯದಶಮಿ ಶುಭ ದಿನದಂದು ಶ್ರೀ ಮನ್ನಿರಂಜನ ಜಗದ್ಗುರು ಪ್ರಣವ ಸ್ವರೂಪಿಗಳಾದ ಶ್ರೀ ಪೂಜ್ಯ ಶಿವಲಿಂಗೇಶ್ವರ ಮಹಾಸ್ವಾಮಿಗಳು ಸಿದ್ಧಸಂಸ್ಥಾನಮಠ ನಿಡಸೋಸಿ ಅವರಿಂದ ನೆರವೇರಿತು. ಮೊದಲು ಹುಕ್ಕೇರಿ ಭಾಗದಲ್ಲಿ ಅಲ್ಪಪ್ರಮಾಣದಲ್ಲಿ ವಿದ್ಯುತ್ ವಿತರಣೆ ಮಾಡುತ್ತಿದ್ದ ಮೈಸೂರಿನ ರಾಜ್ಯ ಎಲೆಕ್ಟ್ರಿಸಿಟಿ ಬೋರ್ಡಿನ ಕಡೆಯಿಂದ ದಿನಾಂಕ: ೧೨-೧೦-೧೯೮೯ ರಲ್ಲಿ ವಿದ್ಯುತ್ ವಿತರಣಾ ಕಾರ್ಯವನ್ನು ವಹಿಸಿಕೊಂಡಿತು. ಇದು ಪ್ರಾರಂಭದ ದಿನಗಳಲ್ಲಿ ೧,೨೪೭ ಶೇರುದಾರರು ಮತ್ತು ೩೧,೧೭೫ ರೂ ಶೇರು ಬಂಡವಾಳವನ್ನು ಹೊಂದಿತ್ತು. ಈಗ ಪ್ರಸ್ತುತ ಮಾರ್ಚ ೨೦೦೮ ರ ಹೊತ್ತಿಗೆ ಒಟ್ಟು ೭೦,೯೯ ಸದಸ್ಯರು ೨.೯೬ ಕೋಟಿ ಶೇರು ಬಂಡವಾಳ ೯,೪೨೩.೭೫ ಲಕ್ಷ ದುಡಿಯುವ ಬಂಡವಾಳದೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಇದು ವಿದ್ಯುತ್ ಗ್ರಾಹಕರಿಗೆ ಅಭಿರುಚಿಗಣುಗುಣವಾಗಿ ವಿದ್ಯುತ್ ವಿತರಣಾ ಕಾರ್ಯವನ್ನು ಕೈಗೊಂಡಿರುತ್ತದೆ. ಮತ್ತು ಕ್ಷೇತ್ರದ ಆರ್ಥಿಕಾಭಿವೃದ್ಧಿಗೆ ಒಳ್ಳೆಯ ಪಾತ್ರ ನಿಭಾಯಿಸುತ್ತಿದೆ.

[illegible]

[illegible]

[illegible]

೩.೪. ಸಂಘದ ಉದ್ದೇಶ ಮತ್ತು ಗುರಿಗಳು :

ಹುಕ್ಕೇರಿ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘವು ಈ ಕೆಳಗಿನಂತೆ ಹಲವಾರು ಉದ್ದೇಶಗಳನ್ನಿಟ್ಟುಕೊಂಡು ಸ್ಥಾಪನೆಯಾಗಿದೆ. ಅವುಗಳು ಈ ಕೆಳಗಿನಂತಿವೆ.

೧. ಸಂಘದ ಸದಸ್ಯರಲ್ಲಿ ಮಿತವ್ಯಯ, ಸ್ವಸಹಾಯ ಮತ್ತು ಸಹಕಾರಗಳನ್ನು ಪ್ರೋತ್ಸಾಹಿಸುವದು.

೨. ವಿದ್ಯುತ್ ಗ್ರಾಹಕರಿಗೆ ಆದಷ್ಟು ಕಡಿಮೆ ವೆಚ್ಚದಲ್ಲಿ ಸಮರ್ಪಕವಾಗಿ ವಿದ್ಯುತ್ ಪೂರೈಸುವದು.

೩. ಪ್ರತಿಯೊಬ್ಬ ವಿದ್ಯುತ್ ಗ್ರಾಹಕರನ್ನು ಸಂಘದ ಸದಸ್ಯನನ್ನಾಗಿ ಮಾಡಿಕೊಳ್ಳುವದು.

೪. ವಿದ್ಯುತ್ ಉತ್ಪಾದನೆಯೊಂದಿಗೆ ವಿದ್ಯುತ್ ಸಲಕರಣೆಗಳ ಉತ್ಪಾದನೆ, ಮಾರಾಟ, ವಿತರಣೆ, ವಿದ್ಯುತ್ ಲೈನುಗಳ ರಚನೆ ಮುಂತಾದ ಪೂರಕ ಉದ್ಯೋಗಗಳನ್ನು ಸಂಘವು ಕೈಕೊಳ್ಳವುದು.

೫. ಸೂಕ್ತ ವೊಲ್ಟೆಜಿನೊಂದಿಗೆ ಗ್ರಾಹಕರಿಗೆ ವಿದ್ಯುತ್ ಒದಗಿಸುವದು.

೬. ಗ್ರಾಹಕರಿಗೆ ಒದಗಿಸುವ ವಿದ್ಯುತ್ ವಿತರಣಾ ಕಾರ್ಯವನ್ನು ತ್ವರಿತವಾಗಿ ಕೈಗೆತ್ತಿಕೊಳ್ಳುವದು.

೭. ವಿದ್ಯುತ್ ಲೈನಗಳಿಂದ ಆಗುವ ದುರ್ಘಟನೆಗಳನ್ನು ತಪ್ಪಿಸುವದು.

೮. ವಿದ್ಯುಚ್ಛಕ್ತಿ ವಿತರಣಾ ಹಾನಿಯ (ಲೈನ ಲಾಸ್) ನ್ನು ತಡೆಗಟ್ಟುವದು.

೯. ಟ್ರಾನ್ಸಫಾರ್ಮಗಳ ರೀಪೇರಿ ಹಾಗೂ ಹೊಸ ಟ್ರಾನ್ಸಫಾರ್ಮಗಳ ಜೋಡಣೆಯನ್ನು ತ್ವರಿತವಾಗಿ ಮಾಡುವದು.

೧೦. ಮೀಟರಗಳನ್ನು ರೀಪೇರಿ ಮಾಡಿ ಕೊಡುವದು.

೩.೫. ಸಂಘದ ಕಾರ್ಯ ಕ್ಷೇತ್ರ :

ಈ ಸಂಘದ ಕಾರ್ಯ ಕ್ಷೇತ್ರವು ೯೯೧.೫ ಚ.ಕೀ.ಮೀ. ವ್ಯಾಪ್ತಿಯ ೧೩೬ (ಪುನರ್ ನಿವೇಶನ್ ಕೇಂದ್ರಗಳು ಹಾಗೂ ಹೆಮ್ಲೇಟಗಳು) ಹಳ್ಳಿಗಳನ್ನೊಂಳಗೊಂಡ, ಪೂರ್ಣ ಹುಕ್ಕೇರಿ ತಾಲೂಕ ಹಾಗೂ ಬೆಳಗಾವಿ ತಾಲೂಕಿನ ಸುತಗಟ್ಟಿ ಗ್ರಾಮವನ್ನೊಳಗೊಂಡಿದೆ. ಈ ಸಂಘದ ಕಾರ್ಯದ ದೃಷ್ಟಿಯಿಂದ, ತ್ವರಿತ ವಿದ್ಯುತ್ ಕಾರ್ಯ ಕೈಗೊಳ್ಳುವ ದೃಷ್ಟಿಯಿಂದ ಕಾರ್ಯಕ್ಷೇತ್ರವನ್ನು ೫ ವಿಭಾಗಗಳಲ್ಲಿ ವಿಂಗಡಿಸಲಾಗಿದೆ. ಆ ೫ ವಿಭಾಗಗಳು ಈ ಕೆಳಗಿನಂತಿವೆ.

೧) ಹುಕ್ಕೇರಿ ಪೂರ್ವ ವಿಭಾಗ

೨) ಹುಕ್ಕೇರಿ ಪಶ್ಚಿಮ ವಿಭಾಗ

೩) ಹಿಡಕಲ್ ವಿಭಾಗ

೪) ಯಮಕನಮರಡಿ ವಿಭಾಗ

೫) ಸಂಕೇಶ್ವರ ವಿಭಾಗ

ಈ ಪ್ರತಿಯೊಂದು ವಿಭಾಗವು ಸಂಘದ ಉಪಕಛೇರಿಗಳನ್ನು ಹೊಂದಿದ್ದು, ಪ್ರತಿ ವಿಭಾಗಕ್ಕೆ ಓರ್ವ ಇಂಜಿನೀಯರ ಹಾಗೂ ಲೈನಮನ್ ಸಿಬ್ಬಂಧಿಗಳನ್ನು ಒದಗಿಸಲಾಗಿದೆ. ಈ ವಿಭಾಗಗಳಲ್ಲಿ ಗ್ರಾಹಕರಿಗೆ ವಿದ್ಯುತ್ ಕನಕ್ಷೆನ್ ಕೊಡಲು, ಬಿಲ್ ಪಾವಾತಿ ಮಾಡಲು, ತ್ವರಿತ ಗತಿಯಲ್ಲಿ ಮೊದಲಾದ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಅದಲ್ಲದೆ ವಿದ್ಯುತ್ ಗ್ರಾಹಕರಗೆ ತ್ವರಿತವಾಗಿ ಸೇವೆ ಕೊಡಲು ಈ ವಿಭಾಗಗಳು ಸಹಕಾರಿಯಾಗಿವೆ. ವಿದ್ಯುತ್ ಗ್ರಾಹಕರು ತಮ್ಮ ವಿದ್ಯುತ್ ಸಮಸ್ಯೆಗಳನ್ನು ಆಯಾ ವಿಭಾಗಗಳ ಇಂಜಿನಿಯರಗಳ ಮೂಲಕ ಸೇವೆ ಪಡೆದುಕೊಳ್ಳುತ್ತಾರೆ.

೩.೬. ಸಂಘದ ಸದಸ್ಯತ್ವ :

ಈ ಸಂಘದ ಸದಸ್ಯತ್ವವನ್ನು ಪಡೆಯುವ ವ್ಯಕ್ತಿಯು ಇದರ ಕಾರ್ಯಕ್ಷೇತ್ರದ ವ್ಯಾಪ್ತಿಯೊಳಗೆ ಇರಬೇಕು. ಸಂಘದ ಪೋಟ ನಿಯಮಗಳ ಪ್ರಕಾರ ಪ್ರತಿಯೊಬ್ಬ ವಿದ್ಯುತ್ ಗ್ರಾಹಕನು ಸಂಘದ ಸದಸ್ಯನಾಗಿರುತ್ತಾನೆ. ಶೇರಿನ ಮುಖ ಬೆಲೆ ರೂ. ೧೦೦-೦೦ ಇರುತ್ತದೆ. ಯಾವುದೇ ವ್ಯಕ್ತಿ, ಸಂಘಗಳು ಅಥವಾ ಸರಕಾರ ಈ ಸಂಘದ ಕಾರ್ಯ ಕ್ಷೇತ್ರದಲ್ಲಿ ವಿದ್ಯುತನ್ನು ಪಡೆಯಬೇಕಾದರೆ ಈ ಸಂಘದ ಸದಸ್ಯತ್ವವನ್ನು ಪಡೆಯಲೇಬೇಕು.

ಹುಕ್ಕೇರಿ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರ ಸಂಘದ ಸದಸ್ಯರ ಬೆಳವಣಿಗೆಯನ್ನು ಈ ಕೆಳಗಿನಂತೆ ಕಾಣಬಹುದು.

ಕೋಷ್ಟಕ ೩.೧

ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಸದಸ್ಯತ್ವ

ಕ್ರಸಂಖ್ಯೆ	ವರ್ಷ	ಸದಸ್ಯರ ಸಂಖ್ಯೆ	ಹಿಂದಿನ ವರ್ಷಗಳಿಂದ ಪ್ರತಿಶತ ಬದಲಾವಣೆ
೧	೨	೩	೪
೧.	ಜೂನ್ ೧೯೭೦	೧,೨೪೭	-
೨.	ಮಾರ್ಚ ೧೯೭೫	೪,೩೫೮	೨೪೯.೪೮
೩.	ಮಾರ್ಚ ೧೯೮೦	೧೧,೯೭೨	೧೭೪.೭೮
೪.	ಮಾರ್ಚ ೧೯೮೫	೨೨,೩೬೬	೮೬.೯೮
೫.	ಮಾರ್ಚ ೧೯೯೦	೩೪,೦೫೫	೫೨.೨೬
೬.	ಮಾರ್ಚ ೧೯೯೫	೪೫,೪೦೨	೩೩.೩೨
೭.	ಮಾರ್ಚ ೨೦೦೦	೫೫,೫೪೬	೨೨.೩೦
೮.	ಮಾರ್ಚ ೨೦೦೫	೬೬,೨೭೧	೧೯.೨೬
೯.	ಮಾರ್ಚ ೨೦೦೮	೭೦,೯೯೯	೭.೧೩

ಆಧಾರ: ಸಂಘದ ೧೯೭೦-೭೧ ರಿಂದ ೨೦೦೭-೦೮ ರ ವಾರ್ಷಿಕ ವರದಿ ಮತ್ತು ಅಥಾವೆ ಪತ್ರಿಕೆಗಳು.

[illegible]

[illegible]

[illegible]

[illegible]	[illegible]	[illegible]	[illegible]

ಈ ಮೇಲಿನ ಕೋಷ್ಟಕ ೩.೧ ರಿಂದ ತಿಳಿದು ಬರುವುದೇನೆಂದರೆ, ಸಂಘದ ಸದಸ್ಯರ ಸಂಖ್ಯೆ ಪ್ರಾರಂಭದ ದಿನಗಳಲ್ಲಿ ೧,೨೪೭ ಇದ್ದದ್ದು ಮಾರ್ಚ ೧೯೭೫ ಕ್ಕೆ ೪,೩೫೮ ಕ್ಕೆ ಏರಿತು. ಅಂದರೆ ಪ್ರತಿಶತ ೨೪೯.೪೮ ರಷ್ಟು ಹಿಂದಿನ ವರ್ಷಗಳಿಂದ ಹೆಚ್ಚಾಯಿತು. ಮಾರ್ಚ ೧೯೮೦ ಕ್ಕೆ ೧೧,೯೬೨ ಸದಸ್ಯರನ್ನು ಹೊಂದಿ ಪ್ರತಿಶತ ೧೭೪.೪೮ ರಷ್ಟು ಹಿಂದಿನ ವರ್ಷಗಳಿಂದ ಹೆಚ್ಚಾಯಿತು. ಮಾರ್ಚ ೧೯೯೫ ಕ್ಕೆ ೪೫,೪೦೨ ಸದಸ್ಯರನ್ನು ಹೊಂದಿ ಪ್ರತಿಶತ ೩೩.೩೨ ರಷ್ಟು ಹಿಂದಿನ ವರ್ಷಗಳಿಂದ ಹೆಚ್ಚಾಯಿತು. ಈಗ ಪ್ರಸ್ತುತ ಮಾರ್ಚ ೨೦೦೮ ಕ್ಕೆ ೭೦,೯೯ ಸದಸ್ಯರನ್ನು ಹೊಂದಿ ಪ್ರತಿಶತ ೭.೧೩ ರಷ್ಟು ಹಿಂದಿನ ವರ್ಷಗಳಿಂದ ಹೆಚ್ಚಾಗಿದೆ. ಇದರಿಂದ ತಿಳಿದುಬರುವುದೇನೆಂದರೆ, ಸಂಘದ ಪ್ರಾರಂಭದ ದಿನಗಳಲ್ಲಿ ಹೆಚ್ಚು ಗ್ರಾಹಕರು ಸಂಘದ ಸದಸ್ಯರಾದರೆ, ನಂತರದ ದಿನಗಳಲ್ಲಿ ಕ್ರಮೇಣ ಕಡಿಮೆಯಾಗುತ್ತಾ ಬಂದಿದೆ. ಅಂದರೆ, ಸಂಘವು ನಿಗಧಿತ ಅವಧಿಯಲ್ಲಿ ಸಾಕಷ್ಟು ಗ್ರಾಹಕರಿಗೆ ವಿದ್ಯುತ್ ಸೌಲಭ್ಯ ಒದಗಿಸಿದೆ. ಒಟ್ಟಾರೆ ಸಂಘವು ತನ್ನ ಕಾರ್ಯ ಕ್ಷೇತ್ರದಲ್ಲಿ ಒಳ್ಳೆಯ ಪ್ರಗತಿಯನ್ನು ಸಾಧಿಸಿದೆ.

೩.೭. ಸಂಘದ ಹಣಕಾಸು ವ್ಯವಸ್ಥೆ :

ಈ ಸಂಘವು ತನಗೆ ಬೇಕಾದ ಹಣಕಾಸಿನ ವ್ಯವಸ್ಥೆಯನ್ನು ವಿವಿಧ ಮೂಲಗಳಾದ ಯೋಜನಾ ಸಾಲ, ಗ್ರಾಹಕ ಸದಸ್ಯರು ಮತ್ತು ಸರಕಾರದ ಶೇರು ಹಣ ಹಾಗೂ ಗ್ರಾಹಕರ ಠೇವುಗಳಿಂದ ಪಡೆದುಕೊಳ್ಳುತ್ತಿದೆ.

೩.೭ ಅ) ಸಂಘದ ಯೋಜನಾ ಸಾಲ :

ಸಂಘವು ಪ್ರಾರಂಭದ ದಿನಗಳಲ್ಲಿ ದೇಶದ ಗ್ರಾಮೀಣ ವಿದ್ಯುದ್ದೀಕರಣ ನಿಗಮ ಹೊಸದಿಲ್ಲಿ (ರೂರಲ್ ಇಲೆಕ್ಟ್ರಿಫಿಕೇಶನ್ ಕಾರ್ಪೊರೇಶನ್) ಇವರು ಸಂಘಕ್ಕೆ ೨೮೩.೪೦ ಲಕ್ಷಗಳ ಯೋಜನಾ ಸಾಲಗಳನ್ನು ಒದಗಿಸಿದ್ದು, ಈ ಸಾಲದ ವಿವರ ಈ ಕೆಳಗಿನಂತಿದೆ.

ಕೋಷ್ಟಕ ೩.೨

ಸಂಘದ ಯೋಜನಾ ಸಾಲಗಳು

ಅ.ನಂ	ಯೋಜನಾ ವಿವರ	ಯೋಜನಾ ಅವಧಿ	ಹಣ (ರೂ.ಲಕ್ಷಗಳಲ್ಲಿ)
೧.	ಮೂಲ ಯೋಜನಾ ಸಾಲ	೧೯೭೦-೭೭	ರೂ. ೧೭೩.೪೦
೨.	ಮೊದಲನೇ ಪರಿಷ್ಕೃತ ಯೋಜನಾ ಸಾಲ	೧೯೭೭-೭೯	ರೂ. ೨೫.೦೦
೩.	ಎರಡನೆ ಪರಿಷ್ಕೃತ ಯೋಜನಾ ಸಾಲ	೧೯೮೧-೮೪	ರೂ. ೮೫.೦೦
		ಒಟ್ಟು	ರೂ. ೨೮೩.೪೦

ಆಧಾರ: ಸಂಘದ ಯೋಜನಾ ಸಾಲಗಳ ದಾಖಲಾತಿಗಳಿಂದ.

ಈ ಮೇಲಿನ ಕೋಷ್ಟಕ ೩.೨ ರಲ್ಲಿ ತೋರಿಸಿದಂತೆ ಯೋಜನಾ ಸಾಲಗಳಿಗೆ ಕರ್ನಾಟಕ ಸರಕಾರವು ಭದ್ರತೆ ಒದಗಿಸಿದೆ. ಈ ಮೇಲಿನ ಯೋಜನೆಗಳ ಸಾಲವನ್ನು ಆರ್. ಇ. ಸಿ. ಯವರು ಕಂತುಗಳಲ್ಲಿ ಸಂಘಕ್ಕೆ ಒದಗಿಸಿದ್ದಾರೆ. ಈ ಸಾಲಗಳ ಮೇಲೆ ಬಡ್ಡಿ ದರವು ಪ್ರತಿಶತ ೪ ರಿಂದ

೧೧ ರವರೆಗೆ ಇದ್ದು, ಈಗ ಅದು ಪ್ರತಿಶತ ೫ ರಿಂದ ೧೧.೭೫ ರವರೆಗೆ ಇರುತ್ತದೆ. ನಿಗಧಿತ ಅವಧಿಯೊಳಗೆ ಸಂಘವು ಸಾಲವನ್ನು ಮರು ಪಾವತಿಸುತ್ತ ಬಂದಿದ್ದು ಅದಕ್ಕಾಗಿ ೫.೮೭ ಲಕ್ಷಗಳ ಬಡ್ಡಿ ರೀಬೇಟ ಪಡೆದಿದೆ. ಅದಲ್ಲದೆ ಸದರೀ ಯೋಜನೆಗಳ ಹಣವನ್ನು ಕಾರ್ಯಕ್ಷೇತ್ರದ ವಿದ್ಯುತ್ ಲೈನುಗಳ ನಿರ್ಮಾಣ ಮಾಡಲಿಕ್ಕೆ, ಸಂಘದ ಕಟ್ಟಡ, ಸಿಬ್ಬಂದಿ ವಸತಿ ವ್ಯವಸ್ಥೆ ಇತ್ಯಾದಿ ಚಟುವಟಿಕೆಗಳಿಗೆ ತೊಡಗಿಸಿದ್ದಾರೆ. ಈ ಸದರಿ ಯೋಜನೆಗಳಲ್ಲಿಯ ಮೂಲ ಯೋಜನಾ ಸಾಲ ೧೭೩.೪೦ ಲಕ್ಷ ರೂ ಗಳನ್ನು ಈಗಾಗಲೇ ಸಂಘವು ಸನ್ ೨೦೦೫ ರ ಹೊತ್ತಿಗೆ ಬಡ್ಡಿ ಸಮೇತ ಹಿಂದುರಿಗಿಸಲಾಗಿದೆ. ಮೊದಲನೆ ಮತ್ತು ಎರಡನೆ ಪರಿಷ್ಕೃತ ಯೋಜನಾ ಸಾಲಗಳನ್ನು ನಿಗಧಿತ ಅವಧಿಗಳಲ್ಲಿ ಬಡ್ಡಿ ಸಹಿತ ಪಾವತಿ ಮಾಡುತ್ತಾ ಸಂಘವು ಬಂದಿರುತ್ತದೆ. ಈಗ ಪ್ರಸ್ತುತ ಮಾರ್ಚ ೨೦೦೮ ರ ಹೊತ್ತಿಗೆ ಕೇವಲ ೧೮ ಲಕ್ಷ ರೂ ಗಳನ್ನು ಮರುಪಾವತಿ ಮಾಡುವದು ಇರುತ್ತದೆ.

ಈ ಯೋಜನಾ ಸಾಲುಗಳಿಂದ ಸಂಘವು ಪ್ರಾರಂಭದ ದಿನಗಳಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ.

೩.೭. ಬ) ಸಂಘದ ಶೇರು ಹಣ:

ಈ ಸಂಘವು ತನ್ನ ಪ್ರತಿಯೊಬ್ಬ ವಿದ್ಯುತ್ ಗ್ರಾಹಕ ಸದಸ್ಯನಿಂದ ಶೇರು ಹಣವನ್ನು ಸಂಗ್ರಹಿಸುತ್ತದೆ. ಇದು ಸಹ ಸಂಘದ ಮಹತ್ವದ ಹಣಕಾಸಿನ ಮೂಲವಾಗಿದೆ. ಸಂಘವು ತಾನು ಸಂಗ್ರಹಿಸಿದ ಶೇರು ಬಂಡವಾಳದ ವಿವಿರ ಈ ಕೆಳಗಿನಂತಿದೆ.

ಕೋಷ್ಠಕ ೩.೩.

ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಶೇರು ಬಂಡವಾಳದ ವಿವರ

ಕ್ರ.ಸಂ	ವರ್ಷ	ಸದಸ್ಯರಿಂದ ಸಂಗ್ರಹಿಸಿದ ಶೇರು ಬಂಡವಾಳ (ಲಕ್ಷ ರೂಗಳಲ್ಲಿ)	ಹಿಂದಿನ ವರ್ಷಗಳಿಂದ ಪ್ರತಿಶತ ಬದಲಾವಣೆ
೧	೨	೩	೪
೧	ಜೂನ್ ೧೯೭೦	.೩೧	-
೨	ಮಾರ್ಚ ೧೯೭೫	೧.೭೦	೪೪೫.೩೧
೩	ಮಾರ್ಚ ೧೯೮೦	೧೩.೨೫	೬೭೯.೬೩
೪	ಮಾರ್ಚ ೧೯೮೫	೩೭.೭೪	೧೮೪.೮೨
೫	ಮಾರ್ಚ ೧೯೯೦	೮೬.೬೪	೧೨೯.೫೪
೬	ಮಾರ್ಚ ೧೯೯೫	೧೩೫.೨೯	೫೬.೧೫
೭	ಮಾರ್ಚ ೨೦೦೦	೨೦೦.೪೫	೪೮.೧೫
೮	ಮಾರ್ಚ ೨೦೦೫	೨೬೦.೩೫	೨೯.೮೮
೯	ಮಾರ್ಚ ೨೦೦೮	೨೯೬.೦೯	೧೩.೭೨

ಆಧಾರ : ವಾರ್ಷಿಕ ವರದಿ ಅಥಾವೆ ಪತ್ರಿಕೆ ೧೯೭೦ ರಿಂದ ೨೦೦೮ ರ ವರೆಗೆ ಹುಕ್ಕೇರಿ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘ ಹುಕ್ಕೇರಿ.

[illegible]

ಈ ಮೇಲಿನ ಕೋಷ್ಠಕ ೩.೩. ರಲ್ಲಿ ನೋಡುವಂತೆ ಸಂಘದ ಸದಸ್ಯರಿಂದ ಅಂದರೆ ವ್ಯಕ್ತಿಗಳು, ಸಂಘಗಳು ಮತ್ತು ಕರ್ನಾಟಕ ಸರಕಾರದಿಂದ ಸಂಗ್ರಹಿಸಿದ ಶೇರು ಬಂಡವಾಳ ೧೯೭೦ ಕ್ಕೆ .೩೧ ಲಕ್ಷ ರೂಗಳು ಇದ್ದದ್ದು, ಮಾರ್ಚ ೧೯೯೦ ಕ್ಕೆ ೮೬.೬೪ ಲಕ್ಷ ರೂ ಗಳು, ಪ್ರತಿಶತ ೧೨೯.೫೪ ಹಿಂದಿನ ವರ್ಷಗಳಿಂದ ಹೆಚ್ಚಾಯಿತು. ಈಗ ಪ್ರಸ್ತುತ ಮಾರ್ಚ ೨೦೦೮ ರ ವೇಳೆಗೆ ೨೯೬.೦೯ ಲಕ್ಷ ರೂ ಗಳು ಮತ್ತು ಪ್ರತಿಶತ ೧೩.೭೨ ರಷ್ಟು ಹಿಂದಿನ ವರ್ಷಗಳಿಂದ ಹೆಚ್ಚಾಯಿತು.

ಈ ಮೇಲಿನ ಅಂಕಿ ಅಂಶಗಳಿಂದ ತಿಳಿದುಬರುವುದೆನೆಂದರೆ ಸಂಘವು ಪ್ರಾರಂಭದ ದಿನಗಳಲ್ಲಿ ಕಡಿಮೆ ಶೇರು ಬಂಡಾವಾಳ ಸಂಗ್ರಹಿಸಿದರೆ, ನಂತರದ ದಿನಗಳಲ್ಲಿ ಅದರ ಕೂಡಿಕೆಯ ಮೊತ್ತವು ಸಾಕಷ್ಟು ಆಗಿರುತ್ತದೆ. ಇದನ್ನು ನೋಡಿದಾಗ ಸಂಘದ ಮೇಲೆ ಜನತೆ ವಿಶ್ವಾಸವಿಟ್ಟಿರುವದು ಸ್ಪಷ್ಟವಾಗಿರುತ್ತದೆ. ಆದ್ದರಿಂದ ಸಂಘವು ತನ್ನ ಆರ್ಥಿಕ ಚಟುವಟಿಕೆಗಳನ್ನು ನೇರವೆರಿಸಲು ಅನುಕೂಲಕಾರಿಯಾಗಿದೆ.

೩.೭. ಕ) ಸಂಘದ ಗ್ರಾಹಕರ ಠೇವಣಿ :

ಸಂಘವು ತನ್ನ ವಿದ್ಯುತ್ ಗ್ರಾಹಕರಿಂದ ಠೇವಣಿಯನ್ನು ಸಹ ಸಂಗ್ರಹಿಸುತ್ತದೆ. ಇದೂ ಸಹ ಸಂಘದ ಮಹತ್ವದ ಹಣಕಾಸಿನ ಮೂಲವಾಗಿದೆ. ಈ ಹಣವನ್ನು ಸಂಘವು ವಿದ್ಯುತ್ ಲೈನುಗಳ ನಿರ್ಮಣ, ಹಾಗೂ ಸಂಘದ ಇನ್ನಿತರ ಖರ್ಚುಗಳನ್ನು ನಿಭಾಯಿಸಲಿಕ್ಕೆ ಉಪಯೋಗ ಮಾಡುತ್ತಲಿದೆ. ಸಂಘವು ಸಂಗ್ರಹಿಸಿದ ಗ್ರಾಹಕರ ಠೇವಣಿಯನ್ನು ಕೋಷ್ಠಕ ೩,೪. ರಲ್ಲಿ ತೋರಿಸಲಾಗಿದೆ.

ಕೋಷ್ಠಕ ೩.೪

ಸಂಘದ ಗ್ರಾಹಕರ ಠೇವಣಿಯ ವಿವರ

ಕ್ರ.ಸಂ	ವರ್ಷ	ಗ್ರಾಹಕರ ಠೇವಣಿ ಹಣ (ಲಕ್ಷ ರೂಗಳಲ್ಲಿ)	ಹಿಂದಿನ ವರ್ಷದಿಂದ ಪ್ರತಿಶತ ಬದಲಾವಣೆ
೧	೨	೩	೪
೧	ಮಾರ್ಚ ೧೯೭೦	೦೦.೪೯	-
೨	ಮಾರ್ಚ ೧೯೭೫	೬.೬೨	೧೨೫೧.೦೨
೩	ಮಾರ್ಚ ೧೯೮೦	೧೧.೯೮	೮೦.೯೭
೪	ಮಾರ್ಚ ೧೯೮೫	೨೨.೦೮	೮೪.೩೧
೫	ಮಾರ್ಚ ೧೯೯೦	೫೭.೦೦	೧೫೮.೧೫
೬	ಮಾರ್ಚ ೧೯೯೫	೧೧೯.೧೯	೧೦೯.೧೧
೭	ಮಾರ್ಚ ೨೦೦೦	೨೧೨.೪೬	೭೮.೨೫
೮	ಮಾರ್ಚ ೨೦೦೫	೩೬೬.೮೨	೭೨.೬೫
೯	ಮಾರ್ಚ ೨೦೦೮	೪೫೫.೦೯	೨೫.೧೫

ಆಧಾರ: ವಾರ್ಷಿಕ ವರದಿ ಮತ್ತು ಅಢಾವೆ ಪತ್ರಿಕೆ ೧೯೭೦ ರಿಂದ ೨೦೦೮ ರವರೆಗೆ ಹುಕ್ಕೇರಿ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘ ಹುಕ್ಕೇರಿ.

ಈ ಮೇಲಿನ ಕೋಷ್ಟಕ ೩.೪. ರಲ್ಲಿ ನೋಡುವಂತೆ ಸಂಘದ ಗ್ರಾಹಕರಿಂದ ಠೇವಣಿಗಳನ್ನು ಸ್ವೀಕರಿಸಲ್ಪಡುತ್ತದೆ. ಸದರಿ ಗ್ರಾಹಕರ ಠೇವಣಿ ಮಾರ್ಚ ೧೯೭೧ ರಲ್ಲಿ ಕೇವಲ ೦೦.೪೯ ಲಕ್ಷ ರೂ. ಗಳಿದ್ದದ್ದು, ಮಾರ್ಚ ೧೯೯೦ ಕ್ಕೆ ೫೭.೦೦ ಲಕ್ಷ ರೂ ಗಳಾದವು. ನಂತರ ಮಾರ್ಚ ೨೦೦೮ ಕ್ಕೆ ೪೫೯.೦೯ ಲಕ್ಷ ರೂ ಗಳಾಗಿದ್ದವು.

ಈ ಮೇಲಿನ ಕೋಷ್ಟಕದ ಅಂಕಿ ಅಂಶಗಳನ್ನು ನೋಡಿದಾಗ ಸಂಘವು ಸಾಕಷ್ಟು ಗ್ರಾಹಕರಿಂದ ಠೇವಣಿ ಹಣ ಸಂಗ್ರಹಿಸಿದ್ದು ಕಂಡುಬರುತ್ತದೆ. ಇದರಿಂದ ಸಂಘವು ತನ್ನೆಲ್ಲ ಆರ್ಥಿಕ ಚಟುವಟಿಕೆಗಳನ್ನು ಸರಿಯಾಗಿ ನಿಭಾಯಿಸಲು ಸಹಾಯಕಾರಿಯಾಗುತ್ತದೆ.

೩.೮. ಸಂಘದ ವಿದ್ಯುತ್ ಖರೀದಿ ಮತ್ತು ಮಾರಾಟದ ದರಗಳು :

ಸಂಘವು ತನಗೆ ಬೇಕಾದ ವಿದ್ಯುಚ್ಛಕ್ತಿಯನ್ನು ಹೆಸ್ಕಾಂ ಕಂಪನಿಯಿಂದ ಪಡೆಯುತ್ತಿದ್ದು, ಇದರ ಖರೀದಿ ದರಗಳನ್ನು ಮತ್ತು ಮಾರಾಟದ ದರಗಳನ್ನು ಕೆ.ಇ.ಆರ್.ಸಿ ಯವರು ಗೊತ್ತುಪಡಿಸುತ್ತಾರೆ.

೩.೮.ಅ. ಸಂಘದ ವಿದ್ಯುತ್ ಖರೀದಿ ದರಗಳು :

ಸಂಘವು ತಾನು ಪಡೆಯುತ್ತಿರುವ ಒಟ್ಟಾರೆ ವಿದ್ಯುತ್ತಿಗೆ ಖರೀದಿ ದರವನ್ನು ಕೆ.ಇ.ಆರ್.ಸಿ ಯವರು ನಿಗದಿ ಪಡಿಸುತ್ತಾರೆ. ರಾಜ್ಯದ ವಿದ್ಯುತ್ ಕಂಪನಿಗಳ ದರಗಳು ಪರಿಷ್ಕೃತವಾದಾಗಲೆಲ್ಲ ಸಂಘದ ವಿದ್ಯುತ್ ದರವನ್ನು ಪರಿಷ್ಕರಿಸಲಾಗಿದೆ. ವಿದ್ಯುತ್ ಸಹಕಾರ ಸಂಘಗಳ ಕಾರ್ಯ ನಿರ್ವಹಣೆಗಳ ಕುರಿತು ಪರಿಶೀಲಿಸಿ ವರದಿ ಸಲ್ಲಿಸಲು ಆರ್.ಇ.ಸಿ. ಹೊಸದಿಲ್ಲಿಯವರು ನಿಯಮಿಸಿದ ಮತ್ತು ಕೇಂದ್ರ ಸರಕಾರದಿಂದ ಅನುಮೊದಿಸಲ್ಪಟ್ಟ 'ಪುರಿ' ಮತ್ತು 'ಮಥುರ' ಕಮೀಟಿಗಳ ವರದಿಗಳಲ್ಲಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘಗಳಿಗೆ ರಾಜ್ಯ ವಿದ್ಯುತ್ ಮಂಡಳಿಗಳು, ವಿದ್ಯುತ್ ಖರೀದಿ ದರವನ್ನು ನಿಗದಿ ಪಡಿಸುವಾಗ ಅವಲೋಕಿಸಬೇಕಾದ ಸಂಗತಿಗಳ ಬಗ್ಗೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಹೇಳಲಾಗಿದೆ. ರಾಜ್ಯ ವಿದ್ಯುತ್ ಸಹಕಾರಿ ಸಂಘಗಳ ಕಾರ್ಯಕ್ಷೇತ್ರದಲ್ಲಿ ತಾವೇ ಕಾರ್ಯ ಕೈಕೊಂಡಲ್ಲಿ ಬರುವ ಖರ್ಚುಗಳನ್ನೆಲ್ಲ ತಗೆದು, ಉಳಿಯುವ ನಿವ್ವಳ ಆದಾಯಕ್ಕಿಂತ ಹೆಚ್ಚಿಗೆ ಆಗದಷ್ಟು, ದರಗಳನ್ನು ಗ್ರಾಮೀಣ ವಿದ್ಯುತ್ ಸಹಕಾರಿ ಸಂಘಗಳಿಗೆ ನಿಗಧಿ ಪಡಿಸಬೇಕೆಂಬುದು ಈ ಕಮಿಟಿಗಳ ವರದಿಗಳಲ್ಲಿ ಹೇಳಲಾಗಿದೆ. ವಿದ್ಯುತ್ ಖರೀದಿ ದರ ನಿಗಧಿ ಪಡಿಸುವ ಕುರಿತು ವರದಿಗಳಲ್ಲಿ ಕಾಣಿಸಿದ ಅಂಶಗಳನ್ನು ಮತ್ತು ಕ್ರಮಗಳನ್ನು ಅನುಸರಿಸದೇ, ಮೊದಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ಈಗ ಪ್ರಸ್ತುತದಲ್ಲಿ ಕೆ.ಇ.ಆರ್.ಸಿ ಯವರು ಸಂಘಕ್ಕೆ ಅಸಮಂಜಸ ವಿದ್ಯುತ್ ದರವನ್ನು ನಿಗಧಿ ಮಾಡುತ್ತಿದ್ದಾರೆ. ಅದನ್ನು ಕೋಷ್ಟಕ ೩.೫ ರಲ್ಲಿ ವಿವರಿಸಲಾಗಿದೆ. ೧೯೭೧ ರಲ್ಲಿ ಪ್ರತಿ ಯುನಿಟಿಗೆ ೫.೫ ಪೈಸೆ ಇದ್ದದ್ದು, ಏಪ್ರೀಲ್ ೧೯೭೮ ರ ವೇಳೆಗೆ ಪ್ರತಿ ಯುನಿಟಿಗೆ ೧೪ ಪೈಸೆ ಆಯಿತು. ನಂತರ ಅಕ್ಟೋಬರ ೧೯೮೫ ರಲ್ಲಿ ೧೬ ಪೈಸೆ ಆದರೆ, ೧೯೮೭ ರಲ್ಲಿ ೩೦ ಪೈಸೆ ಯಾಯಿತು. ನಂತರ ಅಗಷ್ಟ ೧೯೯೩ ರಲ್ಲಿ ೨೨ ಪೈಸೆ ಆದರೆ ಅಗಷ್ಟ ೧೯೯೭ ರಲ್ಲಿ ೩೨.೩೨

[illegible]

ಕೋಷ್ಟಕ ೩.೫

ಸಂಘವು ಪ್ರಾರಂಭವಾದ ದಿನದಿಂದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ/ ಕೆ.ಇ.ಆರ್.ಸಿ. ಯವರು ಆಕರಣೆ ಮಾಡಿದ ವಿದ್ಯುತ್ ಖರೀದಿ ದರಗಳು.

ಅ.ಸಂ	ವಿದ್ಯುತ್ ಖರಿದಿ ದರ (ಪ್ರತಿ ಯುನಿಟಗೆ)	ಅವಧಿ
೧	೫.೫. ಪೈಸೆ	ಎಪ್ರಿಲ್ ೧೯೭೧ ರಿಂದ ಮಾರ್ಚ ೧೯೭೬ ರ ವರೆಗೆ
೨	೫.೫. ಪೈಸೆ (ಪ್ರತಿ ಶತ: ೧೫ ಪೈಸೆ ಸರಚಾರ್ಜ ಸೇರಿ)	ಎಪ್ರಿಲ್ ೧೯೭೬ ರಿಂದ ಮಾರ್ಚ ೧೯೭೮ ರ ವರೆಗೆ
೩	೧೪ ಪೈಸೆ (ನಂತರ ಸದರೀ ದರವನ್ನು ೧೦ ಪೈಸೆಗೆ ಇಳಿಸಲಾಗಿದೆ)	ಎಪ್ರಿಲ್ ೧೯೭೮ ರಿಂದ ಜನೇವರಿ ೧೯೮೧ ರ ವರೆಗೆ
೪	೭ ಪೈಸೆ	ಪೆಬ್ರುವರಿ ೧೯೮೧ ರಿಂದ ಅಕ್ಟೋಬರ ೧೯೮೩ ರ ವರೆಗೆ
೫	೭ ಪೈಸೆ (೩ ಪೈಸೆ ಸರ ಚಾರ್ಜ ಸೇರಿ)	ನವ್ಹೆಂಬರ ೧೯೮೩ ರಿಂದ ಸಪ್ಟೆಂಬರ ೧೯೮೫ ರ ವರೆಗೆ
೬	೧೬ ಪೈಸೆ	ಅಕ್ಟೋಬರ ೧೯೮೫ ರಿಂದ ಎಪ್ರಿಲ್ ೧೯೮೭ ರ ವರೆಗೆ
೭	೩೦ ಪೈಸೆ	ಮೇ ೧೯೮೭ ರಿಂದ ಸಪ್ಟೆಂಬರ ೧೯೯೦ ರ ವರೆಗೆ
೮	೩೦ ಪೈಸೆ	ಅಕ್ಟೋಬರ ೧೯೯೦ ರಿಂದ ಜುಲೈ ೧೯೯೨ ರ ವರೆಗೆ
೯	೧೮ ಪೈಸೆ	ಅಗಸ್ಟ ೧೯೯೨ ರಿಂದ ಜುಲೈ ೧೯೯೩ ರ ವರೆಗೆ
೧೦	೨೨ ಪೈಸೆ	ಅಗಸ್ಟ ೧೯೯೩ ರಿಂದ ಜುಲೈ ೧೯೯೬ ರ ವರೆಗೆ
೧೧	೨೮.೬ ಪೈಸೆ	ಅಗಸ್ಟ ೧೯೯೬ ರಿಂದ ಜುಲೈ ೧೯೯೭ ರ ವರೆಗೆ
೧೨	೩೨.೩೨ ಪೈಸೆ	ಅಗಸ್ಟ ೧೯೯೭ ರಿಂದ ಜುಲೈ ೧೯೯೮ ರ ವರೆಗೆ
೧೩	೧.೦ ರೂ.	ಜುಲೈ ೧೯೯೮ ರಿಂದ ೨೦೦೧
೧೪	೫೮ ಪೈಸೆ	೨೦೦೧ ರಿಂದ ೨೦೦೨
೧೫	೭೫ ಪೈಸೆ	೨೦೦೨ ರಿಂದ ೨೦೦೩
೧೬	೧.೦೦ ರೂ	೨೦೦೩ ರಿಂದ ೨೦೦೪
೧೭	೧.೦೦ ರೂ	೨೦೦೫ ರಿಂದ ಮಾರ್ಚ ೨೦೦೮
೧೮	೩.೪೦ ರೂ	ಮಾರ್ಚ ೨೦೦೮ ರಿಂದ

ಆದಾರ : ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಮತ್ತು ಕರ್ನಾಟಕ ವಿದ್ಯುತ್ ನಿಯಂತ್ರಣಾ ಆಯೋಗದ ವಿದ್ಯುತ್ ಖರಿದಿ ದರಗಳ ವರದಿಗಳು.

ಪೈಸೆಯಾಯಿತು. ಜುಲೈ ೧೯೯೮ ರಿಂದ ಮಾರ್ಚ ೨೦೦೦ ದ ವರೆಗೆ ೧.೦೦ ರೂ ಇದ್ದರೆ, ೨೦೦೧ ರಿಂದ ೨೦೦೨ ರಲ್ಲಿ ೫೮.೧೮ ಪೈಸೆ ಇತ್ತು. ೨೦೦೨ ರಿಂದ ೨೦೦೩ ರವರೆಗೆ ೭೫ ಪೈಸೆ ಇದ್ದರೆ, ೨೦೦೩ ರಿಂದ ಮಾರ್ಚ ೨೦೦೮ ರ ವರೆಗೆ ೧.೦೦ ರೂ ಇತ್ತು. ಈಗ ಪ್ರಸ್ತುತ ಮಾರ್ಚ ೨೦೦೮ ರಿಂದ ಪ್ರತಿ ಯುನಿಟ್ಟಿಗೆ ಹೆಸ್ಕಾಂ ಕಂಪನಿಯವರು ೩.೪೦ ರೂ ದರ ನಿಗಧಿ ಪಡಿಸಿದ್ದಾರೆ. ಇದು ಸಂಘಕ್ಕೆ ಅಸಮಂಜಸ ಖರೀದಿ ದರವಾಗಿದ್ದು, ಇದರ ಬಗ್ಗೆ ಸಂಘವು ಪ್ರಕರಣವನ್ನು ಕೆ.ಇ.ಆರ್.ಸಿ ಯ ಮುಂದೆ ದಾಖಲ ಮಾಡಿದೆ.

೩.೮.ಬ. ಸಂಘದ ವಿದ್ಯುತ್ ಮಾರಾಟದ ದರಗಳು :

ಸಂಘವು ತನ್ನ ವಿದ್ಯುತ್ ಗ್ರಾಹಕರಿಗೆ ಆದಷ್ಟು ಕಡಿಮೆ ದರದಲ್ಲಿ ವಿದ್ಯುತ್ ವಿತರಿಸುವ ಉದ್ದೇಶ ಹೊಂದಿದ್ದರೂ, ಸಂಘಕ್ಕೆ ಸಮಂಜಸವಾದ ವಿದ್ಯುತ್ ಖರೀದಿ ದರವನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ/ಕೆ.ಇ.ಆರ್.ಸಿ ನಿಗದಿಗೊಳಿಸದೇ ಇದ್ದುದಕ್ಕಾಗಿ ಸಂಘಕ್ಕೆ ಹೆಚ್ಚಳ ಉಳಿಯದೇ, ತನ್ನ ವಿದ್ಯುತ್ ಗ್ರಾಹಕರಿಗೆ, ರಾಜ್ಯದ ಇತರ ವಿದ್ಯುತ್ ಗ್ರಾಹಕರಿಗಿಂತ ಕಡಿಮೆ ಬೆಲೆ ನಿಗದಿ ಮಾಡಲು ಸಾಧ್ಯವಾಗಿಲ್ಲ. ರಾಜ್ಯದಲ್ಲಿಯ ಇತರ ವಿದ್ಯುತ್ ಗ್ರಾಹಕರ ದರಗಳಿಗೆ ಸಮನಾಗಿವೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ/ಕೆ.ಇ.ಆರ್.ಸಿ ಯವರು ರಾಜ್ಯದ ವಿದ್ಯುತ್ ಕಂಪನಿಗಳ ಗ್ರಾಹಕರಿಗೆ ನಿಗದಿಪಡಿಸಿದ ದರಗಳನ್ನೆ ಸಂಘವು ತನ್ನ ವಿದ್ಯುತ್ ಗ್ರಾಹಕರಿಗೆ ಅನ್ವಯಿಸಿದೆ.

ಸಂಘದ ವಿದ್ಯುತ್ ಗ್ರಾಹಕರ ದರಗಳು ಎಲ್ಲ ಗ್ರಾಹಕರಿಗೆ ಒಂದೇ ರೀತಿಯಾಗಿರದೆ, ಬೇರೆ ಬೇರೆ ಯಾಗಿವೆ. ಕೆಲವು ಬಗೆಯ ಗ್ರಾಹಕರಿಗೆ ಸರಕಾರದ ನೀತಿಯನ್ವಯ ರಿಯಾಯತಿ ದರಗಳಲ್ಲಿ ಉಚಿತವಾಗಿ ವಿದ್ಯುತನ್ನು ಪೂರೈಸಲಾಗುತ್ತಿದೆ. ಸಂಘದ ಕಾರ್ಯಕ್ಷೇತ್ರದಲ್ಲಿ ಒಟ್ಟಾರೆ ವಿದ್ಯುತ್ ಬಳಕೆಯ ಪ್ರತಿಶತ ೭೦ ರಷ್ಟು ವಿದ್ಯುತ್ ಬಳಕೆ ಮಾಡುತ್ತಿರುವ ನೀರಾವರಿ ಪಂಪಸೇಟ್‌ಗಳಿಗೆ ಪ್ಲಾಟ ದರದಲ್ಲಿ ವಿದ್ಯುತ್ ಒದಗಿಸುತ್ತಿದೆ. ನೀರಾವರಿ ಪಂಪಸೇಟ್‌ಗಳಿಗೆ ಮೊದಲು ಪ್ರತಿ ಯುನಿಟ್ಟಿಗೆ ೫ ಪೈಸೆಗಿಂತ ಕಡಿಮೆ ಆದಾಯ ಬಂದಿದ್ದು, ನಂತರ ನೀರಾವರಿ ಪಂಪಸೇಟಗಳಿಗೆ ಸರಕಾರದ ಸೌಲಭ್ಯದನ್ವಯ ಉಚಿತ ವಿದ್ಯುತ್ ಒದಗಿಸುವದರಿಂದ ಆ ಆದಾಯ ಇಲ್ಲದಂತಾಗಿದೆ. ಸಂಘದ ಗೃಹ ಮತ್ತು ವ್ಯಾಪಾರೋದ್ಧಿಮಿಗಳು, ಕೈಗಾರಿಕೆಗಳು ಮತ್ತು ಸರಕಾರದಿಂದ ಪ್ರತಿಶತ ೩೦ ರಷ್ಟು ಆದಾಯ ಬರುತ್ತಿದ್ದು, ಇದರಲ್ಲಿ ಸಂಘವು ಎಲ್ಲ ಖರ್ಚು ವೆಚ್ಚಗಳನ್ನು ನಿಭಾಯಿಸಿಕೊಂಡು ಹೋಗಬೇಕಾಗಿದೆ.

ಸಂಘಕ್ಕೆ ಕೆ.ಇ.ಆರ್.ಸಿ ಯವರು ದಿನಾಂಕ ೧೦/೧೦/೨೦೦೫ ರಂದು ನಿಗಧಿ ಪಡಿಸಿದ ವಿದ್ಯುತ್ತ ಗ್ರಾಹಕ ದರಗಳನ್ನು ಕೋಷ್ಟಕ ೩.೬ ರಲ್ಲಿ ಕೊ ಡಲಾಗಿದೆ. ಆ ದರಗಳು ಈಗ ಪ್ರಸ್ತುತ ಅವಧಿಯಲ್ಲಿ ಚಾಲ್ತಿಯಲ್ಲಿವೆ. ಈ ದರಗಳಲ್ಲಿ ವಿವಿಧ ವಲಯಗಳಿಗೆ ಬೇರೆ ಬೇರೆ ವಿದ್ಯುತ್ ದರಗಳನ್ನು ನಿಗಧಿ ಪಡಿಸಲಾಗಿದೆ. ಗೃಹ ಬಳಕೆ, ಸಂಯುಕ್ತ ದೀಪ ಮತ್ತು ವಾಣಿಜೇತರ ದೀಪ, ಹಾಗೂ ರಾಜ್ಯ ಸರಕಾರಿ ಆಸ್ಪತ್ರೆಗಳಿಗೆ, ನಿಗಧಿತ ದರಗಳು ಮತ್ತು ವಿದ್ಯುತ್ ಬಳಕೆಯ ಶುಲ್ಕಗಳು ಒಂದು ರೀತಿಯಾಗಿದ್ದರೆ, ವೃತ್ತಿಪರರಿಗೆ ಮತ್ತು ಅನುದಾನ ಪಡೆಯುವ ವಿದ್ಯಾಸಂಸ್ಥೆಗಳಿಗೆ ವಾಣಿಜ್ಯ ದೀಪ, ತಾಪನ ಮತ್ತು ಮೋಟಿವ್ ಪಾವರ, ಕೈಗಾರಿಕೆ ಮತ್ತು ಕೈಗಾರಿಕೇತರ,

[illegible]

[illegible]

[illegible]

ನೀರಾವರಿ ಪಂಪಸೆಟ್‌ಗಳಿಗೆ ಹೆಚ್ಚಿನ ದರ ಇದ್ದರೂ ಅವುಗಳ ಸೇವೆ ಸಂಘದಿಂದ ಉಚಿತವಾಗಿದೆ. ಗೃಹ ಮತ್ತು ವ್ಯಾಪಾರೋದ್ಯಮಿಗಳ ದರಗಳು ಕಡಿಮೆಯಾಗಿವೆ. ಆದರೂ ಅವುಗಳ ಆದಾಯದಿಂದ ಸಂಘ ತನ್ನೆಲ್ಲ ಖರ್ಚುಗಳನ್ನು ನಿಭಾಯಿಸಬೇಕಾಗಿದೆ.

ಕೋಷ್ಟಕ ೩.೬

ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ ನಿಯಮಿತ, ಹುಕ್ಕೇರಿ ದಿನಾಂಕ: ೧೦-೧೦-೨೦೦೫ ರಿಂದ ಸಂಘದ ಜೋಡಣೆಗಳಿಗೆ ಜಾರಿಗೆ ಬಂದ ಮಾರಾಟದ ದರಗಳು

ಪ್ರವರ್ಗ	ಸ್ಥಾಪನಾ ಸ್ವರೂಪ		ವಿವರಗಳು	ದರ
೧	೨	೩	೪	೫
ಎಲ್.ಟಿ.೨ (ಎ) (೨) (ಟಿ)	ಗೃಹ ಬಳಕೆ/ ಸಂಯುಕ್ತ ದೀಪ ಮತ್ತು ತಾಪನ/ವಾಣಿಜ್ಯೇತರ ದೀಪ ಮತ್ತು ತಾಪನ	ನಿಗಧಿತದರ	* ಮಂಜೂರಾದ ವಿದ್ಯುತ್ ಪ್ರಮಾಣದ ಮೊದಲ ಕಿ.ವಾಟಿಗೆ ಅಥವಾ ಅದರ ಭಾಗಾಂಶಕ್ಕೆ ಪ್ರತಿ ತಿಂಗಳಿಗೆ	೨೦.೦೦
			* ಮಂಜೂರಾದ ವಿದ್ಯುತ್ ಪ್ರಮಾಣದ ಪ್ರತಿ ಹೆಚ್ಚುವರಿ ಕಿ.ವಾಗೆ ಅಥವಾ ಅದರ ಭಾಗಾಂಶಕ್ಕೆ ಪ್ರತಿ ತಿಂಗಳಿಗೆ	೩೦.೦೦
ಎಲ್.ಟಿ.೨ (ಎ) (೩) (ವ್ಹಿ)	ರಾಜ್ಯ ಸರಕಾರಿ ಆಸ್ಪತ್ರೆಗಳು		* ಮಂಜೂರಾದ ವಿದ್ಯುತ್ ಪ್ರಮಾಣದ ಕಿ.ವಾಟಗೆ ಅಥವಾ ಅದರ ಭಾಗಾಂಶಕ್ಕೆ ಪ್ರತಿ ತಿಂಗಳಿಗೆ	೧೦.೦೦
			* ಮೂಜೂರಾದ ವಿದ್ಯುತ್ ಪ್ರಮಾಣದ ಪ್ರತಿ ಹೆಚ್ಚುವರಿ ಕಿ.ವಾಗೆ. ಅಥವಾ ಅದರ ಭಾಗಾಂಶಕ್ಕೆ ಪ್ರತಿ ತಿಂಗಳಿಗೆ	೨೦.೦೦
		ವಿದ್ಯುತ್ ಬಳಕೆ ಶುಲ್ಕ	* ಬಳಕೆಯ ಮೊದಲ ೩೦ ಯುನಿಟ್ಟುಗಳಿಗೆ	೧.೮೫
			ನಂತರದ ೭೦ ಯುನಿಟ್ಟುಗಳಿಗೆ	೨.೯೦
			ನಂತರದ ೧೦೦ ಯುನಿಟ್ಟುಗಳಿಗೆ	೩.೬೦
			ನಂತರದ ೧೦೦ ಯುನಿಟ್ಟುಗಳಿಗೆ	೪.೧೦
			ನಂತರದ ೧೦೦ ಯುನಿಟ್ಟುಗಳಿಗೆ	೪.೩೫
			೪೦೦ ಯುನಿಟ್ಟುಗಳನ್ನು ಮೀರಿದ ಬಳಕೆಯ ಪ್ರತಿ ಯುನಿಟ್ಟಿಗೆ.	೪.೬೦
ಎಲ್.ಟಿ.೨ (ಬಿ)(೧)(ಟಿ) ಎಲ್.ಟಿ.೨ (ಬಿ)(೨)(ಟಿ)	ವೃತ್ತಿ ಪರರಿಗೆ ಮತ್ತು ಅನುದಾನ ಪಡೆಯುವ ವಿದ್ಯಾ ಸಂಸ್ಥೆಗಳಿಗೆ	ನಿಗಧಿತ ದರ	* ಮಂಜೂರಾದ ವಿದ್ಯುತ್ ಪ್ರಮಾಣದ ಅಥವಾ ಅದರ ಭಾಗಾಂಶಕ್ಕೆ ಪ್ರತಿ ತಿಂಗಳಿಗೆ	೩೦.೦೦
			* ಪ್ರತಿ ಸ್ಥಾಪನಕ್ಕೆ ಪ್ರತಿ ತಿಂಗಳಿಗೆ	೬೦.೦೦
		ವಿದ್ಯುತ್ ಬಳಕೆ ಶುಲ್ಕ	* ಬಳಕೆಯ ಮೊದಲ ೧೦೦ ಯುನಿಟ್ಟುಗಳಿಗೆ	೪.೧೫
			* ನಂತರದ ೧೦೦ ಯುನಿಟ್ಟುಗಳಿಗೆ	೪.೬೫
			* ನಂತರದ ೧೦೦ ಯುನಿಟ್ಟುಗಳಿಗೆ	೪.೯೦
			* ೪೦೦ ಯುನಿಟಗಳನ್ನು ಮೀರಿದ ಬಳಕೆಯ ಪ್ರತಿ ಯುನಿಟ್ಟಿಗೆ	೫.೨೫

ಎಲ್.ಟಿ.೩ (೧) (ಟಿ) ಎಲ್.ಟಿ.೩ (೨)(೫)	ವಾಣಿಜ್ಯ ದೀಪ ತಾಪನ ಮತ್ತು ಮೋಟಿವ್ಹ ಪಾವರ	ನಿಗದಿತ ದರ	* ಮಂಜೂರಾದ ವಿದ್ಯುತ್ ಪ್ರಮಾಣದ ಅಥವಾ ಅದರ ಭಾಗಾಂಶಕ್ಕೆ ಪ್ರತಿ ತಿಂಗಳಿಗೆ	೩೫.೦೦
		ವಿದ್ಯುತ್ ಬಳಕೆ ಶುಲ್ಕ	* ಮಂಜೂರಾದ ವಿದ್ಯುತ್ ಪ್ರಮಾಣದ ಪ್ರತಿ ಕಿ.ವ್ಯಾಟಗೆ	೨೫.೦೦
			* ಬಳಕೆಯ ಮೊದಲ ೫೦ ಯುನಿಟ್ಟುಗಳಿಗೆ	೫.೦೫
			* ೫೦ ಯುನಿಟ್ಟಗಳನ್ನು ಮೀರಿದ ಬಳಕೆಯ ಪ್ರತಿ ಯುನಿಟ್ಟಗೆ	೬.೦೦
ಎಲ್.ಟಿ.೫ (ಬಿ)(೧) ಎಲ್.ಟಿ.೫ (ಬಿ) (೩) ಎಲ್.ಟಿ.೫ (ಬಿ) (೪)	ಕೈಗಾರಿಕೆ ಮತ್ತು ಕೈಗಾರಿಕೇತರ ತಾಪನ	ನಿಗದಿತ ದರ	*ಮಂಜೂರಾದ ವಿದ್ಯುತ್ ಪ್ರಮಾಣ ೫ ಎಚ್.ಪಿ. ವರೆಗೆ	೨೦.೦೦
			*ಮಂಜೂರಾದ ವಿದ್ಯುತ್ ಪ್ರಮಾಣ ೫ ಎಚ್.ಪಿ. ಗಿಂತ ಹೆಚ್ಚು ಅಂದರೆ ೪೦ ಎಚ್.ಪಿ. ವರೆಗೆ	೨೫.೦೦
			*ಮಂಜೂರಾದ ವಿದ್ಯುತ್ ಪ್ರಮಾಣ ೪೦ ಎಚ್.ಪಿ. ಯಿಂದ ೬೭ ಎಚ್.ಪಿ. ವರೆಗೆ	೩೫.೦೦
			*ಮಂಜೂರಾದ ವಿದ್ಯುತ್ ಪ್ರಮಾಣ ೬೭ ಎಚ್.ಪಿ. ಮತ್ತು ಅಧಿಕ	೧೦೦.೦೦
		ವಿದ್ಯುತ್ ಬಳಕೆ ಶುಲ್ಕ	*೫೦೦ ಯುನಿಟ್ಟಗಳವರೆಗಿನ ಬಳಕೆಯ ಪ್ರತಿ ಯುನಿಟ್ಟಗೆ	೩.೩೦
			*೫೦೦ ಯುನಿಟ್ಟಗಳಿಗಿಂತ ಹೆಚ್ಚು ೧೦೦೦ ಯುನಿಟ್ಟಗಳ ವರೆಗೆ ಪ್ರತಿ ಯುನಿಟಗೆ	೩.೮೦
			*೧೦೦೦ ಯುನಿಟ್ಟಗಳಿಗಿಂತ ಹೆಚ್ಚಿನ ಬಳಕೆಯ ಪ್ರತಿ ಯುನಿಟ್ಟಗೆ.	೪.೦೮
ಎಲ್.ಟಿ.೬ (ಎ) (ಡಬ್ಲ್ಯು.ಎಸ್)	ನೀರು ಸರಬರಾಜು, ಗ್ರಾಮ, ಮಂಡಲ, ಪಟ್ಟಣ ಪಂಚಾಯತಿ, ಪಟ್ಟಣ ಪುರ ಸಭೆಗಳು	ನಿಗದಿತ ದರ	*ಮಂಜೂರಾದ ವಿದ್ಯುತ್ ಪ್ರಮಾಣದ ಪ್ರತಿ ಎಚ್.ಪಿ. ಗೆ, ಪ್ರತಿ ತಿಂಗಳಿಗೆ	೩೫.೦೦
		ವಿದ್ಯುತ್ ಬಳಕೆಯ ಶುಲ್ಕ	*ಆ ತಿಂಗಳಲ್ಲಿ ಬಳಸಿದ ಎಲ್ಲ ಯುನಿಟ್ಟಗಳಿಗೆ ಪ್ರತಿ ಯುನಿಟ್ಟಿಗೆ.	೩.೧೦
ಎಲ್.ಟಿ.೬ (ಎಸ್. ಟಿ. ಎಲ್)	ಬೀದಿ ದೀಪಗಳು	ನಿಗದಿತ ದರ	*ಮಂಜೂರಾದ ವಿದ್ಯುತ್ ಪ್ರಮಾಣದ ಪ್ರತಿ ಕಿ.ವ್ಯಾ.ಗೆ. ಮಾಸಿಕ ನಿಗದಿತ ಶುಲ್ಕ.	೫೦.೦೦
		ವಿದ್ಯುತ್ ಬಳಕೆ ಶುಲ್ಕ	*ಆ ತಿಂಗಳಲ್ಲಿ ಬಳಸಿದ ಎಲ್ಲ ಯುನಿಟ್‌ಗಳಿಗೆ ಪ್ರತಿ ಯುನಿಟ್ಟಿಗೆ.	೩.೧೦

ಆಧಾರ : ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ ನಿ. ಹುಕ್ಕೇರಿ ಇವರಿಗೆ ಕೆ.ಇ.ಆರ್.ಸಿ ನಿಗಧಿ ಪಡಿಸಿದ ಗ್ರಾಹಕರ ವಿದ್ಯುತ್ ದರಗಳ ವರದಿ ೧೦/೧೦/೨೦೦೫

೩.೯ ಸಂಘದ ವಿದ್ಯುತ್ ವಿತರಣಾ ವ್ಯವಸ್ಥೆ :

ಹುಕ್ಕೇರಿ ತಾಲೂಕಿಗೆ ವಿದ್ಯುತ್‌ನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ/ಹೆಸ್ಕಾಂ ದವರಿಂದ ವಿದ್ಯುತ್ತ ವಿತರಣಾ ಕೇಂದ್ರಗಳು ಸ್ಥಾಪಿಸಲ್ಪಟ್ಟಿವೆ. ಸಂಘವು ಹೊಂದಿದ ಒಟ್ಟಾರೆ ವಿದ್ಯುತ್ ಜೋಡಣೆಗಳ ಆಧಾರದ ಮೇಲೆ ಸದ್ಯದ ಕನೆಕ್ಟಡ್ ಲೋಡ ೧೧೦ ಎಂ.ವಿ.ಎ ಗಳಿಷ್ಟಿದೆ. ಈ ಬೇಡಿಕೆಯನ್ನು ಪೂರೈಸಲು ಸಂಘದ ಕಾರ್ಯಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿದ್ಯುತ್ ವಿತರಣಾ ಕೇಂದ್ರಗಳ ವಿವರ ಈ ಕೆಳಗಿನಂತಿದೆ.

೧. ಹುಕ್ಕೇರಿಯಲ್ಲಿ ೨x೧೦ ಎಂ.ವಿ.ಎ ಸಾಮರ್ಥ್ಯದ ೧೧೦:೩೩:೧೧ ಕೆ.ವಿ ವಿದ್ಯುತ್ ವಿತರಣಾ ಕೇಂದ್ರ

೨. ಹಿಡಕಲ್ ಡ್ಯಾಂದಲ್ಲಿ ೨x೧೦ ಎಂ.ವಿ.ಎ ಸಾಮರ್ಥ್ಯದ ೧೧೦x೧೧ ಕೆ.ವಿ ವಿದ್ಯುತ್ ವಿತರಣಾ ಕೇಂದ್ರ

೩. ಸಂಕೇಶ್ವರದಲ್ಲಿ ೨x೧೦ ಎಂ.ವಿ.ಎ ಸಾಮರ್ಥ್ಯದ ೧೧೦x೧೧ ಕೆ.ವಿ ವಿದ್ಯುತ್ ವಿತರಣಾ ಕೇಂದ್ರ

೪. ಹತ್ತರಕಿಯಲ್ಲಿ ೨x೧೦ ಎಂ.ವಿ.ಎ ಸಾಮರ್ಥ್ಯದ ೩೩:೧೧ ಕೆ.ವಿ ವಿದ್ಯುತ್ ವಿತರಣಾ ಕೇಂದ್ರ

೫. ಕಣಗಲಾ ಗ್ರಾಮದಲ್ಲಿ ೧x೫ ಎಂ.ವಿ.ಎ ವಿದ್ಯುತ್ ವಿತರಣಾ ಕೇಂದ್ರ

ಈಗಾಗಲೇ ಈ ಮೆಲಿನ ೫ ಕೇಂದ್ರಗಳಿಂದ ಹುಕ್ಕೇರಿ ತಾಲೂಕಿಗೆ ವಿದ್ಯುಚ್ಛಕ್ತಿ ವಿತರಣೆ ಆಗುತ್ತಿದೆ. ಆದರೆ ಸಂಘದ ಕಾರ್ಯಕ್ಷೇತ್ರದಲ್ಲಿ ಹೆಚ್ಚಿಗೆ ಮಂಜೂರಾದ ವಿದ್ಯುತ್ ವಿತರಣಾ ಕೇಂದ್ರಗಳ ವಿವರ ಈ ಕೆಳಗಿನಂತಿದೆ.

೧. ಹೆಬ್ಬಾಳ ಹತ್ತಿರ ಒಂದು ೩೩:೧೧ ಕೆ.ವಿ. ವಿದ್ಯತ್ ಕೇಂದ್ರ (ಸದರಿ ಕಾರ್ಯ ಮುಗಿಸುವ ಹಂತದಲ್ಲಿದೆ.)

೨. ಶಿರಗಾಂವ ಗ್ರಾಮದ ಹತ್ತಿರ ಒಂದು ೧೧೦:೧೧ ಕೆ.ವಿ ವಿದ್ಯುತ್ ವಿತರಣಾ ಕೇಂದ್ರ (ಟೆಂಡರ್ ಆಗಿದೆ)

ಸಂಘದ ಕಾರ್ಯ ಕ್ಷೇತ್ರದಲ್ಲಿ ನಿಯೋಜಿತ ೧೧೦:೧೧ ಕೆ.ವಿ ವಿದ್ಯತ್ ವಿತರಣಾ ಕೇಂದ್ರಗಳ ವಿವರ ಈ ಕೆಳಗಿನಂತಿದೆ.

೧. ಇಸ್ಲಾಂಪೂರ

೨. ಬೆಲ್ಲದ ಬಾಗೇವಾಡಿ

ಸಂಘವು ಸನ್ ೧೯೯೨ ರ ಹೊತ್ತಿಗೆ ಕರ್ನಾಟಕ ವಿದ್ಯಚ್ಛಕ್ತಿ ಮಂಡಳಿಯವರು ಹುಕ್ಕೇರಿಯಲ್ಲಿಯ ೧೧೦ ಕೆ.ವಿ ಸ್ಟೆಷನ್‌ದಿಂದ ಹುಕ್ಕೇರಿ, ಸಂಕೇಶ್ವರ ಮತ್ತು ಹತ್ತರಗಿ ೩೩:೧೧ ಕೆ.ವಿ ಸ್ಟೆಷನಗಳ ಮೂಲಕ ಒದಗಿಸುತಿದ್ದರು. ತಾಲೂಕಿನ ಒಟ್ಟಾರೆ ವಿದ್ಯುತ್ ಸಾಮರ್ಥ್ಯ ೨೦ ಎಮ್.ವಿ.ಎ ಇದ್ದು, ಇದರಿಂದ ಹೆಚ್ಚೆಂದರೆ ಒಟ್ಟಾರೆ ೩೦ ಎಮ್.ವಿ.ಎ ವಿದ್ಯುತ್ ಒತ್ತಡದಿಂದ

ಜೋಡಣೆಗಳಿಗೆ ವಿದ್ಯುತ್ ಪೂರೈಸಬಹುದಾಗಿದೆ. ಹುಕ್ಕೇರಿ ತಾಲೂಕಿನ ಆಗಿನ ಒಟ್ಟಾರೆ ವಿದ್ಯುತ್ ಭಾರ ೬೩ ಎಮ್.ವಿ.ಎ ದಾಟಿದ್ದು ವಿದ್ಯುತ್ ಪೂರೈಕೆಯನ್ನು ಸಮರ್ಪಕವಾಗಿ ಮಾಡಬೇಕಾದಲ್ಲಿ ತಾಲೂಕಿನ ಒಟ್ಟಾರೆ ವಿದ್ಯುತ್ ಪೂರೈಕೆ ಸಾಮರ್ಥ್ಯವನ್ನು ಕನಿಷ್ಟ ೪೫ ಎಂ.ವಿ.ಎ ಗೆ ಹೆಚ್ಚಿಸುವುದು ಅನಿವಾರ್ಯವಾಗಿತ್ತು. ಈಗ ಸನ್ ಮಾರ್ಚ ೨೦೦೮ ರ ವೇಳೆಗೆ ತಾಲೂಕಿನ ಒಟ್ಟಾರೆ ವಿದ್ಯುತ್ ಸಾಮರ್ಥ್ಯ ೮೫ ಎಮ್.ವಿ.ಎ ಇದ್ದು, ಆದರೆ ಅದರ ಮೇಲೆ ವಿದ್ಯುತ್ ಭಾರ ೧೧೦ ಎಮ್.ವಿ.ಎ ಗಳಷ್ಟಿದೆ. ಸದರಿ ವಿದ್ಯುತ್ ಭಾರ ಹೆಚ್ಚಾಗಿರುವುದನ್ನು ನೋಡಿದರೆ ಸಂಘಕ್ಕೆ ಕೆ.ಇ.ಆರ್.ಸಿ. ಯವರು ಹೆಚ್ಚಿಗೆ ವಿದ್ಯುತ್ ಕೇಂದ್ರಗಳ ಸ್ಥಾಪನೆಗೆ ಅನುವು ಮಾಡಿಕೊಡಬೇಕಾಗಿದೆ.

೩.೧೦ ಸಂಘದ ವಿದ್ಯುತ್ ವಿತರಣಾ ಸಲಕರಣೆಗಳ ಉತ್ಪಾದನಾ ಘಟಕಗಳು :

ಸಂಘವು ತನ್ನ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಸ್ವಾವಲಂಬನೆಗೊಳಿಸುವದಗೊಸ್ಕರ, ಕೆಲವೊಂದು ಸಲಕರಣೆಗಳ ಉತ್ಪಾದನಾ ಘಟಕಗಳನ್ನು ತನ್ನ ಸಂಘದಲ್ಲಿಯೇ ಹೊಂದಿರುತ್ತದೆ. ಆ ಘಟಕಗಳ ವಿವರಣೆಗಳನ್ನು ಕೆಳಗೆ ಕೊಡಲಾಗಿದೆ.

೩.೧೦ ಅ. ಸಂಘದ ಟಾನ್ಸಫಾರ್ಮರ ಉತ್ಪಾದನಾ ಘಟಕ :

ಸಂಘವು ರಚನಾತ್ಮಕ ಮತ್ತು ಉಸ್ತುವಾರಿ ಕಾರ್ಯಗಳಿಗೆ ಬೇಕಾದ ಸರಕುಗಳ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸುವ ಉದ್ದೇಶದಿಂದ ಹಾಗೂ ಉಳಿತಾಯ ಸಾಧಿಸುವ ದೃಷ್ಟಿಯಿಂದ ಸಂಘದಲ್ಲಿ ಸಪ್ಟೆಂಬರ ೧೯೯೪ ರಿಂದ **ಶ್ರೀ ದುರುದುಂಡೇಶ್ವರ ಟ್ರಾನ್ಸಫಾರ್ಮರ ಉತ್ಪಾದನಾ ಘಟಕ**ವನ್ನು ಪ್ರಾರಂಭಿಸಲಾಗಿದೆ. ಸನ್ ೧೯೯೪-೯೫ ನೇ ಸಾಲಿನಲ್ಲಿ ೨೫ ಹೊಸ ಟ್ರಾನ್ಸಫಾರ್ಮರಗಳನ್ನು ತಯಾರಿಸಲಾಗಿದ್ದು ಇವುಗಳಿಂದ ಸಂಘಕ್ಕೆ ರೂ ೮ ಲಕ್ಷಕ್ಕೂ ಮೀರಿ ಹಣ ಉಳಿತಾಯವಾಗಿರುತ್ತದೆ. ಇಲ್ಲಿ ತಯಾರಿಸಿದ ಟ್ರಾನ್ಸಫಾರ್ಮರಗಳು ಒಳ್ಳೆಯ ಕಾರ್ಯಕ್ಷಮತೆ ಹೊಂದಿವೆ. ಸದರಿ ಘಟಕದ ಪ್ರಗತಿಯನ್ನು ಕೊಷ್ಟಕ ೩.೭ ರಲ್ಲಿ ತೊರಿಸಲಾಗಿದೆ. ಈಗ ಸದ್ಯಕ್ಕೆ ೧೦೦ ಟ್ರಾನ್ಸಫಾರ್ಮಗಳನ್ನು ರಿಪೇರಿ ಮಾಡಿಕೊಡುವ ಸಾಮರ್ಥ್ಯವನ್ನು ಹೊಂದಿದೆ.

ಸುಪರಿಂಟೆಂಡಿಂಗ ಇಂಜಿನೀಯರ (ಇಲೆ) ಟೆಂಡರಿಂಗ ಮತ್ತು ಪ್ರಕ್ಯುರಮೆಂಟ ಹೆಸ್ಕಾಂ ಹುಬ್ಬಳ್ಳಿ, ಇವರು ಬೆಳಗಾವಿ ವೃತ್ತದಲ್ಲಿ ಬರುವ ಬೆಳಗಾವಿ, ಘಟಪ್ರಭಾ, ಬೈಲಹೊಂಗಲ ಮತ್ತು ಚಿಕ್ಕೋಡಿ ವಿಭಾಗಗಳಲ್ಲಿ ಬರುವ ಟ್ರಾನ್ಸಪಾರ್ಮರ ರಿಪೇರಿ ಕಾರ್ಯವನ್ನು ಸಂಘಕ್ಕೆ ನೀಡಿದ್ದು, ಈಗಾಗಲೇ ಘಟಪ್ರಭಾ ಮತ್ತು ಬೈಲಹೊಂಗಲ ವಿಭಾಗಗಳಲ್ಲಿ ಅಗಸ್ಟ ೨೦೦೭ ರಿಂದ ಸಪ್ಟೆಂಬರ ೨೦೦೭ ರವರೆಗೆ ೩೨೫ ಟ್ರಾನ್ಸಫಾರ್ಮರಗಳನ್ನು ರೀಪೇರಿ ಮಾಡಿ ೪೩,೧೯,೦೦೦ ರೂ ಗಳ ಆದಾಯವನ್ನು ಸಂಘವು ಪಡೆದುಕೊಂಡಿದೆ. ಅದಲ್ಲದೆ ವಿವಿಧ ಸಾಮರ್ಥ್ಯದ ಟ್ರಾನ್ಸಫಾರ್ಮಗಳನ್ನು ಅಚ್ಚು ಕಟ್ಟಾಗಿ ರಿಪೇರಿ ಮಾಡಿದ ಆದಾಯದಿಂದ ಬರುವ ಪ್ರತಿ ಶತ ೭೦ ರಷ್ಟು ಹಣವನ್ನು ಸಂಘವು, ಹೆಸ್ಕಾಂ ಹುಬ್ಬಳ್ಳಿ ಇವರಿಗೆ ಸಂಘವು ಭರಿಸಬೇಕಾದ ಸಗಟು ವಿದ್ಯುತ್ ಬಿಲ್ಲಿನ ಬಾಕಿ ಹಣದಲ್ಲಿ ಹೊಂದಾಣಿಕೆ ಮಾಡಿಕೊಂಡು ಇನ್ನೂಳಿದ ಪ್ರತಿಶತ ೩೦ ರಷ್ಟು ಹಣವನ್ನು ಸಂಘಕ್ಕೆ

[illegible]

[illegible]

[illegible]

[illegible]

ಭರಣಾ ಮಾಡುತ್ತಾ ಬಂದಿರುತ್ತಾರೆ ಮತ್ತು ಹೆಸ್ಕಾಂರವರ ಯಾವುದೇ ಕೆಲಸಗಳನ್ನು ಗುತ್ತಿಗೆ ಅಥವಾ ಟರ್ನಕೀ ಆಧಾರದ ಮೇಲೆ ನಿರ್ವಹಿಸಲು ಸಂಘವು ಉತ್ಸುಕವಾಗಿದೆ.

ಕೊಷ್ಟಕ ೩.೭

ಶ್ರೀ ದುರುದುಂಡೇಶ್ವರ ಟ್ರಾನ್ಸಫಾರ್ಮರ ಉತ್ಪಾದನಾ ಘಟಕ ಉತ್ಪಾದಿಸಿದ ೧೦೦ ಕೆ.ವಿ. ಟ್ರಾನ್ಸಫಾರ್ಮರಗಳು.

ವರ್ಷ	ಉತ್ಪಾದಿಸಿದ ೧೦೦ ಕೆವಿಎ ಟ್ರಾನ್ಸಪಾರ್ಮಗಳು
೧೯೯೫-೯೬	೨೩
೧೯೯೬-೯೭	೪೨
೧೯೯೭-೯೮	೪೧
೧೯೯೮-೯೯	೩೯
೧೯೯೯-೦೦	೬೦
೨೦೦೦-೦೧	೪೮
೨೦೦೧-೦೨	೫೨
೨೦೦೨-೦೩	೬೦
೨೦೦೩-೦೪	೪೦
೨೦೦೪-೦೫	೨೩
೨೦೦೫-೦೬	೬೭
೨೦೦೬-೦೭	೪೨
೨೦೦೭-೦೮	೪೮
ಒಟ್ಟು	೬೦೦

ಆಧಾರ : ಸಂಘದ ಟಾನ್ಸಫಾರ್ಮರ ಉತ್ಪಾದನಾ ದಾಖಲಾತಿ

೩.೧೦.ಬ. ಸಂಘದ ಸಿಮೆಂಟ ಕಂಬ ತಯಾರಿಕಾ ಘಟಕ :

ಸನ್ ೧೯೯೬ ರಲ್ಲಿ ಸಂಘವು ಸ್ವಾವಲಂಬನೆಯನ್ನು ಸಾಧಿಸುವ ನಿಟ್ಟಿನಲ್ಲಿ, ತನ್ನ ಆರ್ಥಿಕತೆಯನ್ನು ವೃದ್ಧಿಸುವ ಸಲುವಾಗಿ ದಿವಂಗತ ಶ್ರೀ ಅಪ್ಪಣಗೌಡಾ ಪಾಟೀಲ ಇವರ ಸ್ಮರಣಾರ್ಥ ಸಂಘದಲ್ಲಿ ಒಂದು ಸಿಮೆಂಟ ಕಂಬ ತಯಾರಿಕಾ ಘಟಕ ಸ್ಥಾಪಿಸಿದ್ದು, ಇದರಲ್ಲಿ ಸಂಘಕ್ಕೆ ಬೇಕಾಗುವ ಪಿ.ಸಿ.ಸಿ, ಪಿ.ಎಸ್.ಸಿ, ಪೆನ್ನಿಂಗ್ ಹಾಗೂ ಆರ್.ಸಿ.ಸಿ. ಕಂಬಗಳ ಉತ್ಪಾದನಾ ಕಾರ್ಯ ಪ್ರಾರಂಭಿಸಿದೆ. ಸದರಿ ಘಟಕವು ಹೆಮ್ಮೆಯ ಘಟಕವಾಗಿದ್ದು, ಸಂಘದ ಮುಖ್ಯ ಬೇಡಿಕೆಯನ್ನು ಪೂರೈಸಿ ಸಂಘವು ಆರ್ಥಿಕವಾಗಿ ಸ್ವಾವಲಂಬನೆಯನ್ನು ಗಳಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ. ಸಂಘವು ಮಿತವ್ಯಯ ಸಾಧಿಸಿ ಆರ್ಥಿಕತೆಯನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದೆ.

[illegible]

[illegible]

[illegible]

[illegible]	[illegible]	[illegible]

[illegible]

[illegible]

ಈ ಸದರಿ ಸಿಮೆಂಟ ತಯಾರಿಕಾ ಘಟಕದ ಪ್ರಗತಿಯನ್ನು ಕೋಷ್ಟಕ ೩.೮ ರಲ್ಲಿ ತೋರಸಲಾಗಿದೆ.

ಕೋಷ್ಟಕ ೩.೮

ಶ್ರೀ ಅಪ್ಪಣಗೌಡಾ ಪಾಟೀಲ ಕಂಬ ತಯಾರಿಕಾ ಘಟಕದ ಪ್ರಗತಿ ನೋಟ

ವರ್ಷ	ಪಿ.ಸಿ.ಸಿ.ಕಂಬ	ಆರ್.ಸಿ.ಸಿ.ಕಂಬ	ಪೆನ್ನಿಂಗ ಕಂಬ	ಪಿ.ಎಸ್.ಸಿ ಕಂಬ
೧	೨	೩	೪	೫
೧೯೯೫-೯೬	೪೮	-	-	-
೧೯೯೬-೯೭	೪೫೬	೪೦೦	೧೨೨	-
೧೯೯೭-೯೮	೮೯೬	೪೦೦	೫೧	-
೧೯೯೮-೯೯	೪೦೦	೨೪೦	೮೫	-
೨೦೦೦-೦೧	೧೦೫೬	೨೧೯	೮೫	-
೨೦೦೧-೦೨	೧೧೫೨	೨೧೪	೧೩೭	-
೨೦೦೨-೦೩	೯೯೨	೧೦೦	೮೨	-
೨೦೦೩-೦೪	೧೩೪೪	೧೪೫	೧೬	-
೨೦೦೪-೦೫	೬೭೨	೧೨೨	-	-
೨೦೦೫-೦೬	೬೪೦	೯೪	-	-
೨೦೦೬-೦೭	೧೦೭೨	೨೧೯	-	-
೨೦೦೭-೦೮	೭೦೪	೩೪೧	-	-
ಅಗಸ್ಟ ೨೦೦೮ ಕ್ಕೆ	೫೬೦	೨೦೦	-	೧೭೬

ಆಧಾರ : ಸಂಘದ ಕಂಬ ಉತ್ಪಾದನಾ ದಾಖಲಾತಿ.

ಈ ಸಂಘವು ಒಳ್ಳೆಯ ಗುಣಮಟ್ಟದ ಸಿಮೆಂಟ ಕಂಬಗಳನ್ನು ಉತ್ಪಾದಿಸುತ್ತಿದ್ದು, ಮಾರುಕಟ್ಟೆಯ ಹೊಲಿಕೆಯಲ್ಲಿ ಸಂಘವು ಉತ್ಪಾದಿಸಿದ ಪ್ರತಿ ಸಿಮೆಂಟ ಕಂಬಕ್ಕೆ ಅಂದಾಜು ೨೦೦-೦೦ ರೂ ಗಳಷ್ಟು ಉಳಿತಾಯವಾಗುತ್ತದೆ. ಇದರಲ್ಲಿ ಒಂದೇ ಬಾರಿಗೆ ೩೨ ಕಂಬಗಳನ್ನು ತಯಾರಿಸಬಹುದಾಗಿದೆ. ಅದಲ್ಲದೇ ೨೦೦೬-೦೭ ರಲ್ಲಿ ಈ ಘಟಕವನ್ನು ವಿಸ್ತರಿಸಿದ್ದು, ಅದು ಪ್ರತಿ ದಿವಸಕ್ಕೆ ಸುಮಾರು ೯೬ ಕಂಬಗಳನ್ನು ತಯಾರಿಸುವ ಸಾಮರ್ಥ್ಯವನ್ನು ಹೊಂದಿದೆ. ಸದರಿ ಘಟಕವು ೧೯೯೫-೯೬ ರಲ್ಲಿ ಕೇವಲ ೪೮ ಪಿ.ಸಿ.ಸಿ ಕಂಬಗಳನ್ನು ಉತ್ಪಾದಿಸಿದ್ದರೆ, ೨೦೦೦-೦೧ ಕ್ಕೆ ೧,೦೫೬ ಪಿ.ಸಿ.ಸಿ, ೨೧೯ ಆರ್.ಸಿ.ಸಿ, ೮೫ ಪೆನ್ನಿಂಗ್ ಕಂಬಗಳನ್ನು ಉತ್ಪಾದಿಸಿತ್ತು. ಈಗ ಪ್ರಸ್ತುತ ೨೦೦೭-೦೮ ಕ್ಕೆ ೭೦೪ ಪಿ.ಸಿ.ಸಿ, ೩೪೧ ಆರ್.ಸಿ.ಸಿ ಕಂಬಗಳನ್ನು ಉತ್ಪಾದಿಸಿತ್ತು. ಅದಲ್ಲದೆ ಅಗಸ್ಟ ೨೦೦೮ ಕ್ಕೆ ೫೬೦ ಪಿ.ಸಿ.ಸಿ, ೨೦೦ ಆರ್.ಸಿ.ಸಿ, ೧೭೬ ಪಿ.ಎಸ್.ಸಿ, ಕಂಬಗಳನ್ನು ಉತ್ಪಾದಿಸಿದೆ. ಹೆಸ್ಕಾಂ ಇವರು ಸಂಘದ ಹೆಸರನ್ನು ತಮ್ಮ ವೆಂಡರ ಯಾದಿಯಲ್ಲಿ ಸೇರಿಸಿ ಸಿಮೆಂಟ ಕಂಬಗಳನ್ನು

[illegible]

ಪೂರೈಸಲು ಬೇಡಿಕೆ ಮಾಡಿದ್ದು ಅವರ ಬೇಡಿಕೆಗೆ ಅನುಗುಣವಾಗಿ ಸಿಮೆಂಟ ಕಂಬಗಳನ್ನು ಪುರೈಸಲು ಮುಂದಾಗಿದೆ.

೩.೧೦. ಕ. ಸಂಘದ ಕಾರ್ಯಾಗಾರ (ವರ್ಕಶಾಪ) :

ಸಂಘವು ತನ್ನದೇ ಆದ ಸ್ವಂತ ವರ್ಕಶಾಪ ಹೊಂದಿದ್ದು, ರಚನಾತ್ಮಕ ಹಾಗೂ ಉಸ್ತುವಾರಿ ಕಾರ್ಯಗಳಿಗಾಗಿ ಬೇಕಾಗುವ ಸೆಟ್, ಟುಪಿನ್‌ಕ್ರಾಸ್ ಆರ್ಮ, ೪ ಪಿನ್‌ಕ್ರಾಸ ಆರ್ಮ, ಗಾರಡಿಂಗ ಕ್ರಾಸ್ ಆರ್ಮೆ, ಆರ್, ಸಿ, ಸಿ/ ಪಿ.ಎಸ್.ಸಿ ಕ್ಲ್ಯಾಂಪ್ಸ್, ಟಿ.ಸಿ.ಸೆಟ್ಸ್, ಡಿ.ಪಿ.ಸೆಟ್ಸ್, ಹಾಗೂ ಲೈನಗಳಿಗೆ ಸಂಬಂಧಪಟ್ಟ ಎಲ್ಲ ಸಲಕರಣೆಗಳನ್ನು ಸ್ವಂತ ಸಂಘದ ಕಾರ್ಯಾಗಾರದಲ್ಲಿ ತಯಾರಿಸಲಾಗುತ್ತಿದೆ. ಈ ಸಲಕರಣೆಗಳ ಪ್ರಗತಿ ನೋಟವನ್ನು ಕೋಷ್ಠಕ ೩.೯ ರಲ್ಲಿ ಕೊಡಲಾಗಿದೆ. ಸದ್ಯಕ್ಕೆ ಹೆಸ್ಕಾಂದವರು ಸದರಿ ಸಲಕರಣೆಗಳ ಪೂರೈಕೆಗಾಗಿ ಸಂಘದ ಹೆಸರನ್ನು ವೆಂಡರ ಯಾದಿಯಲ್ಲಿ ಸೇರಿಸಿ ಸಲಕರಣೆಗಳ ಪೂರೈಕೆಗಾಗಿ ಬೇಡಿಕೆ ಪತ್ರ ಮಂಡಿಸಿರುತ್ತಾರೆ. ಅವರ ಬೇಡಿಕೆಯಂತೆ ಸಂಘವು ಹೆಚ್ಚಿನ ಸಲಕರಣೆಗಳ ತಯಾರಿಸುವ ಕಾರ್ಯ ಪ್ರಾರಂಭಿಸಿದೆ.

ಕೋಷ್ಠಕ ೩.೯

ಸಂಘದ ಸಲಕರಣೆಗಳ ತಯಾರಿಕಾ ಕಚ್ಚಾ ಸಾಮಗ್ರಿಗಳ ಖರೀದಿ, ಉಪಯೋಗ ಮತ್ತು ಉಳಿದ ಸಲಕರಣೆಗಳ ಯಾದಿ

(ಲಕ್ಷ ರೂ ಗಳಲ್ಲಿ)

ಕ್ರ.ಸಂ	ವರ್ಷಗಳು	ಕಚ್ಚಾ ಸಾಮಗ್ರಿಗಳ ಖರೀದಿ (ಲಕ್ಷ ರೂಗಳು)	ಉಪಯೋಗ ಮಾಡಿದ 'ವಿದ್ಯುತ್' ಉಪಕರಣಗಳ ಯಾದಿ		ಉಳಿದ ವಿದ್ಯುತ್ ಸಲಕರಣೆಗಳ ಯಾದಿ	
			ಪ್ರಮಾಣ (ಸಾವಿರ)	ಬೆಲೆ (ಲಕ್ಷರೂ)	ಪ್ರಮಾಣ (ಸಾವಿರ)	ಬೆಲೆ (ಲಕ್ಷರೂ)
೧	೨೦೦೨-೦೩	೭೨..೦೬	೩೮೮.೧೩	೧೭೬.೦೭	೮೫.೪೦	೩೨.೧೯
೨	೨೦೦೩-೦೪	೯೬.೫೧	೪೩೬.೯೬	೧೫೩.೭೮	೬೯.೭೦	೪೮.೪೯
೩	೨೦೦೪-೦೫	೯೩.೭೭	೩೮೪.೫೬	೧೨೮.೧೯	೧೮೦.೨೪	೫೭.೫೬
೪	೨೦೦೫-೦೬	೧೨೩.೭೪	೩೯೭.೦೨	೨೨೧.೧೯	೧೦೭.೨೧	೫೩.೦೨
೫	೨೦೦೬-೦೭	೨೪೭.೬೦	೫೨೭.೯೪	೨೯೪.೩೩	೨೩೬.೮೬	೧೨೩.೬೩
೬	೨೦೦೭-೦೮	೨೨೫.೪೯	೬೦೩.೯೫	೨೬.೮೬	೧೯೭.೨೭	೧೨೮.೬೯

ಆಧಾರ : ಸಂಘಗಳ ವಿದ್ಯುತ್ ಸಲಕರಣೆಗಳ ದಾಸ್ತಾನು ದಾಖಲಾತಿ.

ಈ ಕೋಷ್ಠಕ ನಂ. ೩.೯ ನ್ನು ನೋಡಲಾಗಿ ಸಂಘವು ತನಗೆ ಬೇಕಾಗುವ ಸಲಕರಣೆಗಳನ್ನು ತಯಾರು ಮಾಡಲಿಕ್ಕೆ ಕಚ್ಚಾ ವಿದ್ಯುತ್ ಸಲಕರಣೆಗಳ ಸಾಮಗ್ರಿಗಳನ್ನು ೨೦೦೨-೦೩ ರಲ್ಲಿ ೭೨.೦೬ ಲಕ್ಷ ರೂ ಗಳಷ್ಟು ಖರಿದಿಸಿದ್ದಾರೆ. ೨೦೦೭-೦೮ ರ ವೇಳೆಗೆ ೨೨೫.೪೯ ಲಕ್ಷ ರೂ ಗಳಷ್ಟು ಖರಿದಿಸಿದೆ. ಇದರಿಂದ ಸಂಘವು ಎಷ್ಟೊಂದು ವಿದ್ಯುತ್ ಲೈನಗಳನ್ನು ವಿಸ್ತರಿಸುತ್ತಿದೆ, ಅನ್ನುವದು ಗೊತ್ತಾಗುತ್ತದೆ. ಅದಲ್ಲದೆ ಸಂಘವು ಕಚ್ಚಾ ವಿದ್ಯುತ ಸಲಕರಣೆಗಳನ್ನು ಸಿದ್ದವಸ್ತುಗಳನ್ನಾಗಿ ತಯಾರಿಸಿ ೨೦೦೨-೦೩ ರಲ್ಲಿ ೩೮೮.೧೩ ಸಾವಿರಗಳ ಪ್ರಮಾಣದ ೧೭೬.೦೭ ಲಕ್ಷ ರೂಗಳನ್ನು ಉಪಯೋಗ

[illegible]

[illegible]

[illegible]

[illegible]

[illegible]

[illegible]

ಮಾಡಿದರೆ, ೨೦೦೭-೦೮ ರ ವೇಳೆಗೆ ೬೦೩.೯೫ ಸಾವಿರಗಳ ಪ್ರಮಾಣದ ೨೬.೮೬ ಲಕ್ಷ ರೂಗಳಷ್ಟು ಉಪಯೋಗ ಮಾಡಿದೆ. ನಂತರ ವಿದ್ಯುತ್ ಸಲಕರಣೆಗಳ ಸಿದ್ದವಸ್ತುಗಳ ಉಳಿತಾಯವು ೨೦೦೨-೦೩ ರಲ್ಲಿ ೮೫.೪೦ ಸಾವಿರ ಪ್ರಮಾಣದ ೩೨.೧೯ ಲಕ್ಷಗಳಷ್ಟಿದ್ದರೆ, ೨೦೦೭-೦೮ ರ ವೇಳೆಗೆ ೧೯೭.೨೭ ಸಾವಿರಗಳ ಪ್ರಮಾಣದ ೧೨೮.೬ ಲಕ್ಷಗಳಷ್ಟಿತ್ತು.

ಈ ಮೇಲಿನ ಅಂಕಿ ಅಂಶಗಳಿಂದ ಕಂಡು ಬರುವುದೆನೆಂದರೆ, ಸಂಘವು ತನ್ನ ವಿದ್ಯುತ್ ಗ್ರಾಹಕರಿಗೆ ತ್ವರಿತವಾಗಿ ವಿದ್ಯುತ್ ಸೇವೆ ಒದಗಿಸಲು ಬೇಕಾಗುವ ಕಚ್ಚಾ ವಿದ್ಯುತ್ ಸಲಕರಣೆಗಳು ಮತ್ತು ಅವುಗಳ ಸಿದ್ದ ವಿದ್ಯುತ್ ಸಲಕರಣೆಗಳನ್ನಾಗಿ ಪರಿವರ್ತಿಸಿ ಹಾಗೂ ಯಾವಾಗಲೂ ಈ ಸಲಕರಣೆಗಳು ದಾಸ್ತಾನು ಇರುವಂತೆ ನೋಡಿಕೊಳ್ಳುತ್ತದೆ. ಇದರಿಂದ ಸಂಘವು ತನ್ನ ಆರ್ಥಿಕ ಅಭಿವೃದ್ಧಿಯಲ್ಲಿ ಈ ಕಾರ್ಯಾಗಾರವನ್ನು ಸರಿಯಾಗಿ ಸದುಪಯೋಗ ಪಡಿಸಿಕೊಳ್ಳುತ್ತಲಿದೆ.

೩.೧೧. ಸಂಘದ ವಿದ್ಯುತ್ ಮಾರಾಟದಿಂದ ಬರುವ ಆದಾಯ :

ಸಂಘದ ಮಹತ್ವದ ಹಣಕಾಸಿನ ಮೂಲಗಳಲ್ಲಿ ವಿದ್ಯುತ್ ಮಾರಾಟದ ಆದಾಯವು ಕೂಡಾ ಮಹತ್ವದ್ದಾಗಿದೆ. ಸಂಘವು ತಾನು ಪೂರೈಸುವ ವಿದ್ಯುತ್‌ಗೆ ಕೆ.ಇ.ಆರ್.ಸಿ. ಯಿಂದ ನಿಗಧಿ ಮಾಡಿದ ಗ್ರಾಹಕ ವಿದ್ಯುತ್ ಬೆಲೆಗಳನ್ನು ಆಕರಣೆ ಮಾಡಿ ಆದಾಯವನ್ನು ಪಡೆದುಕೊಳ್ಳುತ್ತದೆ. ಸಂಘವು ತಾನು ಖರೀದಿ ಮಾಡಿದ ವಿದ್ಯುತ್ ವಿವಿಧ ಉದ್ದೇಶಗಳಿಗೆ ವಿತರಿಸಲ್ಪಡುತ್ತದೆ. ಮನೆಗಳಿಗೆ, ಸಂಘಗಳಿಗೆ, ಉದ್ದಿಮೆಗಳಿಗೆ, ನೀರಾವರಿ ಮೊದಲಾದ ಯೋಜನೆಗಳಿಗೆ ವಿತರಿಸಲ್ಪಡಿತ್ತದೆ.

ಕೋಷ್ಟಕ ೩.೧೦

ಸಂಘದ ವಿವಿಧ ವಿದ್ಯುತ್ ಜೋಡಣೆಗಳಿಂದ ವಿದ್ಯುತ್ ಆದಾಯ

ಅ.ನಂ	ವಿವರ	೧೯೭೧	೧೯೮೦	೧೯೯೦	೨೦೦೦	೨೦೦೮
೧	ಮನೆಗಳಿಂದ	೧೪೬೪೨೭-೧೫	೯೪೭೩೩೨೭-೫೭	೪೨೮೯೦೨-೨೨	೨೩೫೦೩೮೭೩-೦೨	೪೭೨೫೬೨೨೨.೯೨
೨	ವ್ಯಾಪರೊದ್ದಿಮೆಗಳಿಂದ	೬೬೩೩೩-೭೮	೩೫೮೧೭೨-೪೦	೧೪೩೯೦೦೪-೦೧	೧೩೩೧೨೬೭೧.೮೩	೨೦೨೯೬೦೩೮.೩೫
೩	ಚಿಕ್ಕ ಉದ್ದಿಮೆಗಳಿಂದ	೯೬೨೪೪-೮೩	೮೪೭೨೮೩-೧೧	೩೨೧೫೭೯೯೩-೯೪	೮೭೮೬೯೩೦.೭೧	೧೩೬೨೮೦೮೪.೭೫
೪	ದೊಡ್ಡ ಉದ್ದಿಮೆಗಳಿಂದ	೩೭೮೭೪-೯೨	೪೦೧೬೮೧-೪೧	೧೭೯೦೭೯೦-೬೦	೧೨೯೫೮೭೬೬.೭೦	೨೫೭೯೪೮೦೪.೬೭
೫	ಸಾರ್ವಜನಿಕ ದೀಪಗಳಿಂದ	೧೫೭೯೪-೨೯	೧೭೬೭೮೫-೫೭	೭೪೨೧೬೩-೬೨	೨೧೪೬೬೪೮.೪೦	೬೮೧೫೬೨೨.೭೩
೬	ನೀರಾವರಿ ಪಂಪಸೆಟ್ಟಗಳಿಂದ	೨೮೮೭೬-೯೮	೧೬೫೮೮೮೯-೮೫	೪೫೬೨೫೭೫-೪೬	೨೨೯೪೬೪೫೮.೦೪	೬೯೪೮೫೬೩೬.೩೯
೭	ಸಾರ್ವಜನಿಕ ನೀರು ಪೂರೈಕೆಯಿಂದ	೭೪೦೪-೧೭	೮೮೫೮೭-೩೪	೯೮೯೧೧೩೨-೦೩	೭೯೫೦೭೫೪.೮೮	೧೫೮೪೩೩೨೪.೭
೮	ತಾತ್ಪೂರ್ತಿಕ ಜೋಡಣೆಗಳಿಂದ	-	೧೬೨೧೮-೭೦	೬೨೧೦೦-೧೦	೧೧೫೧೩೪.೦೦	೬೬೨೧೫೩.೨೦
	ಒಟ್ಟು	೪೪೮೯೫೬-೧೨	೪೪೯೪೯೪೫-೯೫	೧೭೯೧೫೬೧-೯೮	೯೧೭೨೧೨೩೭.೫೮	೨೧೦೮೮೧೮೮೭.೭೧

ಆಧಾರ: ವಾರ್ಷಿಕ ವರದಿ ಮತ್ತು ಅಢಾವೆ ಪತ್ರಿಕೆ ೧೯೭೧ ರಿಂದ ಮಾರ್ಚ ೨೦೦೮ ರ ವರೆಗೆ.

[illegible]

ಆ ವಿವಿಧ ಮಾರಾಟದ ಮೂಲಗಳಿಂದ ಸಂಗ್ರಹಿಸಿದ ಆಧಾಯವನ್ನು ಕೋಷ್ಟಕ ೩.೧೦ ರಲ್ಲಿ ತೋರಿಸಲಾಗಿದೆ.

ಈ ಮೇಲಿನ ವರದಿ ಅಂಕಿ ಅಂಶಗಳನ್ನು ಗಮನಿಸಿದಾಗ ೧೯೭೧ ರಲ್ಲಿ ೪,೪೮,೯೫೬.೧೨ ರೂಗಳ ಆದಾಯ ಬಂದಿದ್ದರೆ, ೧೯೯೦ ಕ್ಕೆ ೧,೭೦,೯೧,೫೬೧.೯೮ ರೂ ಗಳ ಆದಾಯ ಬಂದಿತ್ತು. ಸನ್ ೨೦೦೦ ರ ಹೊತ್ತಿಗೆ ೯,೧೭,೨೧,೨೩೭.೫೮ ರೂಗಳು ಇದ್ದರೆ, ಮಾರ್ಚ ೨೦೦೮ ರ ವೇಳೇಗೆ ೨೧,೦೮,೮೧,೮೮೭.೭೧ ರೂ ಗಳಿಗೆ ಹೆಚ್ಚಾಗಿದೆ. ಇದರಿಂದ ತಿಳಿದು ಬರುವುದೆನೆಂದರೆ, ಸಂಘವು ವರ್ಷದಿಂದ ವರ್ಷಕ್ಕೆ ವಿದ್ಯುತ್ ಮಾರಾಟದ ಮೂಲಗಳಿಂದ ಆದಾಯ ಹೆಚ್ಚಾಗುತ್ತಿರುವದನ್ನು ಗಮನಿಸಬಹುದು. ಸಂಘದ ಮನೆಗಳಿಂದ ವ್ಯಾಪಾರೋದ್ಯಮಿಗಳಿಂದ, ಸಾರ್ವಜನಿಕ ದೀಪಗಳಿಂದ ಇತ್ತಿಚೀನ ವರ್ಷಗಳಲ್ಲಿ ಸಾಕಷ್ಟು ಆದಾಯ ಬರುತ್ತಿದೆ ಅನ್ನುವುದು ಮೇಲಿನ ಕೋಷ್ಟಕದಿಂದ ತಿಳಿದುಬರುತ್ತದೆ.

೩.೧೨. ರಾಜೀವ ಗಾಂಧಿ ಗ್ರಾಮೀಣ ವಿದ್ಯುದ್ಧೀಕರಣ ಯೋಜನೆ :

ಈ ಯೋಜನೆಯು ಬಡತನ ರೇಖೇಗಿಂತ ಕೆಳಗಿರುವ ಫಲಾನುಭವಿಗಳಿಗೆ ಉಚಿತ ವಿದ್ಯುತ ಸಂಪರ್ಕ ಕಲ್ಪಸುವ ಯೋಜನೆಯಾಗಿದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಕರ್ನಾಟಕ ಸರಕಾರದ ಇಂಧನ ಇಲಾಖೆ, ಗ್ರಾಮೀಣ ವಿದ್ಯುತ್ತೀಕರಣ ಮಹಾಮಂಡಳ ಹೊಸದಿಲ್ಲಿ ಹಾಗೂ ಸಂಘ ಈ ಮೂವರ ತ್ರೀಪಕ್ಷಿಯ ಒಪ್ಪಂದ ಆಗಬೇಕಾಗಿರುತ್ತದೆ. ಈಗಾಗಲೇ ಸಂಘಕ್ಕೆ ರೂ. ೭.೨೧ ಕೋಟಿ ರೂ ಗಳು ರಾಜೀವ ಗಾಂಧಿ ವಿದ್ಯುತ್ತೀಕರಣ ಯೋಜನೆಯಡಿಯಲ್ಲಿ ಮಂಜೂರಾಗಿದ್ದು, ಸದರಿ ಯೋಜನೆಯಿಂದ ಹುಕ್ಕೇರಿ ತಾಲೂಕಿನ ೧೪,೦೭೦ ಬಡತನ ರೇಖೇಗಿಂತ ಕೆಳಗಿರುವ ಫಲಾನುಭವಿಗಳಿಗೆ ಉಚಿತ ವಿದ್ಯುತ್ ಸಂಪರ್ಕ ಒದಗಲಿದೆ. ಅಂದಾಜು ವೆಚ್ಚದಲ್ಲಿ ಪ್ರತಿ ಶತ ೯೦ ರಷ್ಟು ಕೇಂದ್ರ ಸರಕಾರದ ಸಹಾಯ ಧನ ಹಾಗೂ ೧೦ ಪ್ರತಿಶತದಷ್ಟು ಮರು ಪಾವತಿಸುವ ಸಾಲವಾಗಿರುತ್ತದೆ. ಸದರಿ ಯೋಜನೆಯನ್ನು ಸಂಘವು ೧೮ ತಿಂಗಳಲ್ಲಿ ಪೂರ್ತಿಗೊಳಿಸುವ ಕಾರ್ಯಕ್ರಮ ಹಾಕಿಕೊಂಡಿರುತ್ತದೆ. ಸರಕಾರ ಈ ಯೋಜನೆಗೆ ಕೂಡಲೇ ಹಣವನ್ನು ಬಿಡುಗಡೆ ಗೊಳಿಸಿದರೆ ಸಂಘವು ಬಡ ಜನರಿಗೆ ವಿದ್ಯುತ್‌ನ್ನು ವಿತರಿಸಲು ಉತ್ಸುಕವಾಗಿದೆ.

೩.೧೩. ಸಂಘದ ಪ್ರಸ್ತುತ ಸ್ಥಿತಿ ಮತ್ತು ಆರ್ಥಿಕ ಪ್ರಗತಿ ನೋಟ :

ಹುಕ್ಕೇರಿ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘವನ್ನು ಆಳವಾಗಿ ಅಧ್ಯಯನ ಮಾಡಿದಾಗ, ಪ್ರಸ್ತುತ ಅವಧಿಯಲ್ಲಿ ಅದು ವಿದ್ಯುತ್ ಮಾರಾಟದಿಂದ ಸಾಕಷ್ಟು ಆದಾಯಗಳನ್ನು ಗಳಿಸಿದ್ದರೂ, ಅದು ನಷ್ಟದಲ್ಲಿರುವದು ಕಂಡು ಬರುತ್ತದೆ. ಪ್ರಸ್ತುತ ಅವಧಿಯಲ್ಲಿ ಸಂಘವು ತನ್ನ ಎಲ್ಲ ಕಟ್ಟಡಗಳನ್ನು ಸ್ವಂತ ಹೊಂದಿದೆ, ಅದಲ್ಲದೆ ಸಿಬ್ಬಂಧಿ ವಸತಿ ನಿಲಯಗಳು ಸಂಘದ ವತಿಯಿಂದ ಸ್ವಂತ ಕಟ್ಟಡ ಹೊಂದಿರುತ್ತವೆ. ಅದಲ್ಲದೆ ಇತ್ತೀಚಿನ ವಿದ್ಯುತ್ ಬೇಡಿಕೆಗೆನುಗುಣವಾಗಿ ವಿದ್ಯುತ್ ಗ್ರಾಹಕರಿಗೆ ವಿದ್ಯುತ್ ಒದಗಿಸಲು ಪ್ರಯತ್ನಸುತ್ತಿದೆ.

[illegible]

[illegible]

[illegible]

[illegible]

ಜೂನ ೧೯೭೦ ರಲ್ಲಿ ಸಂಘವು ೧,೨೪೭ ಸದಸ್ಯರನ್ನು ಹೊಂದಿತ್ತು. ಮಾರ್ಚ ೧೯೮೫ ರಲ್ಲಿ ೨೨,೩೬೬ ಸದಸ್ಯರನ್ನು ಹೊಂದಿತ್ತು. ಈಗ ಮಾರ್ಚ ೨೦೦೮ ರ ಹೊತ್ತಿಗೆ ೭೦,೯೯ ಸದಸ್ಯರನ್ನು ಹೊಂದಿದೆ. ಇದನ್ನು ನೋಡಿದಾಗ ವಿದ್ಯುತ್ ಗ್ರಾಹಕ ಸದಸ್ಯರು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದ್ದಾರೆ. ಅದಲ್ಲದೇ ಗ್ರಾಹಕ ಸದಸ್ಯರಿಂದ ಜೂನ ೧೯೭೦ ರಲ್ಲಿ ೩೧,೧೭೫ ರೂ ಗಳನ್ನು ಸಂಗ್ರಹಿಸಿದ್ದರೆ, ಮಾರ್ಚ ೨೦೦೮ ರ ಹೊತ್ತಿಗೆ ೨,೯೬,೦೯,೧೨೧ ರೂ ಗಳ ಶೇರು ಹಣವನ್ನು ಸಂಗ್ರಹಿಸಲಾಗಿದೆ. ಇದನ್ನು ಅವಲೋಕಿಸಿದಾಗ ಸದಸ್ಯರ ಸಂಖ್ಯೆ ಮತ್ತು ಶೇರು ಹಣದಿಂದ ಸಂಘ ತನ್ನ ಕಾರ್ಯವನ್ನು ವಿಸ್ತರಿಸುತ್ತಿದೆ ಎಂಬುದು ತಿಳಿದು ಬರುತ್ತದೆ.

ಸಂಘದ ಹಣಕಾಸು ವ್ಯವಸ್ಥೆಯನ್ನು ನೋಡಿದಾಗ ಗ್ರಾಮೀಣ ವಿದ್ಯುದ್ದೀಕರಣ ಮಹಾಮಂಡಳ ದೇಹಲಿ (ರೂರಲ್ ಇಲೆಕ್ಟ್ರಿಫಿಕೇಶನ್ ಕಾರ್ಪೋರೇಶನ್) ಇವರು ಸಂಘಕ್ಕೆ ಮೂರು ಯೋಜನೆಗಳಲ್ಲಿ ಸಾಲ ಒದಗಿಸಿದ್ದು ೧೯೭೦-೭೭ ರಲ್ಲಿ ೧೭೩.೪೦ ಲಕ್ಷ, ೧೯೭೭-೭೯ ರಲ್ಲಿ ೨೫.೦೦ ಲಕ್ಷ ೧೯೮೧-೮೪ ರಲ್ಲಿ ೮೫.೦೦ ಲಕ್ಷ ರಂತೆ ಒದಗಿಸಿದ್ದಾರೆ. ಮೂಲ ಯೋಜನಾ ಸಾಲದ ಮೊದಲಿನ ೫ ವರ್ಷಗಳ ಬಡ್ಡಿಯನ್ನು ಸಂಘದಲ್ಲಿಯೇ ಶೇರು ಅಮಾನತು ಅಂತ ಇಟ್ಟಿದ್ದಾರೆ. ಅದಲ್ಲದೇ ಈ ಮೇಲಿನ ಎಲ್ಲ ಯೋಜನಾ ಸಾಲಗಳನ್ನು ನಿಗಧಿತ ಅವಧಿಯಲ್ಲಿ ಬಡ್ಡಿ ಸಮೇತವಾಗಿ ಸಂಘವು ಭರಣಾ ಮಾಡುತ್ತ ಬಂದಿದೆ. ಈಗ ಮಾರ್ಚ ೨೦೦೮ ರ ವೇಳೆಗೆ ಕೇವಲ ೧೮ ಲಕ್ಷ ರೂ ಮರು ಪಾವತಿ ಮಾಡುವದು ಬಾಕಿ ಇರುತ್ತದೆ. ಈ ಮೇಲಿನ ಯೋಜನಾ ಸಾಲಗಳಿಂದ ಸಂಘವು ಕಟ್ಟಡ, ಲೈನುಗಳ ನಿರ್ಮಾಣ ಇತ್ಯಾದಿ ಗಳಿಗೆ ಹಣ ವಿನಯೋಗಿಸಿ ಸದಸ್ಯರ ಆರ್ಥಿಕ ಪ್ರಗತಿಗೆ ಶ್ರಮಿಸುತ್ತಿದೆ.

ಸಂಘದ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಅವಲೋಕಿಸಿದಾಗ ಮೊದಲು ಸನ್ ೧೯೭೧ ರಲ್ಲಿ ಹುಕ್ಕೇರಿಯಲ್ಲಿಯ ಉಪ ಕೇಂದ್ರದಿಂದ (ಸ್ಟೇಶನ) ವಿದ್ಯುತ್ ವಿತರಣೆಯಾಗುತ್ತಿತ್ತು. ನಂತರ ಮಾರ್ಚ ೧೯೯೨ ರ ಹೊತ್ತಿಗೆ ಹುಕ್ಕೇರಿಯಲ್ಲಿಯ ೧೧೦ ಕೆವಿ ಸ್ಟೇಶನಗಳ ಮೂಲಕ ಒದಗಿಸುತ್ತಿದ್ದರು. ಈಗ ಮಾರ್ಚ ೨೦೦೮ ರ ಹೊತ್ತಿಗೆ ೫ ಸ್ಟೇಶನಗಳಿಂದ ಸುಮಾರು ೮೫ ಎಮ್.ವಿ.ಎ. ವಿದ್ಯುತ್ ವಿತರಣೆ ಮಾಡಲಾಗುತ್ತಿದೆ. ಅದಲ್ಲದೆ ಈಗ ಪ್ರಸ್ತುತ ಹೆಬ್ಬಾಳ ವಿದ್ಯುತ್ ವಿತರಣಾ ಕೇಂದ್ರದ ಕಾರ್ಯ ಪ್ರಾರಂಭವಾಗುವ ಸ್ಥಿತಿಯಲ್ಲಿರುತ್ತದೆ. ಹೀಗಾಗಿ ಹುಕ್ಕೇರಿ ಭಾಗದ ವಿದ್ಯುತ್ ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಒಳ್ಳೆಯ ವೋಲ್ಟ ವಿದ್ಯುಚ್ಛಕ್ತಿ ಪುರೈಸಲು ಸಾಧ್ಯವಾಗುತ್ತದೆ.

ಅದಲ್ಲದೇ ಸಂಘವು ಒಳ್ಳೆಯ ಗುಣಮಟ್ಟದ ಟ್ರಾನ್ಸಫಾರ್ಮರ ಮತ್ತು ಕಂಬ ತಯಾರಿಕೆಯನ್ನು ಮಾಡುತ್ತಿದ್ದು, ಅದು ಸಂಘದ ಗುಣಮಟ್ಟದ ಕಾರ್ಯ ಮಾಡಲು ನೇರವಾಗುತ್ತಿದೆ. ಸನ್ ೧೯೯೫ ರಲ್ಲಿ ಟ್ರಾನ್ಸಫಾರ್ಮರ ಉತ್ಪಾದನೆಯಿಂದ ೮ ಲಕ್ಷ ರೂ ಗಳು ಸಂಘಕ್ಕೆ ಉಳಿತಾಯವಾಗಿರುತ್ತದೆ. ಅದಲ್ಲದೇ ಕಂಬ ತಯಾರಿಕೆಯಿಂದ ಸಂಘಕ್ಕೆ ಪ್ರತಿ ಕಂಬಿಗೆ ೨೦೦-೦೦ ರೂ ಉಳಿತಾಯವಾಗುತ್ತದೆ. ಅದಲ್ಲದೇ ೨೦೦೭-೦೮ ರ ಹೊತ್ತಿಗೆ ಹೆಸ್ಕಾಂ ದವರು ಟ್ರಾನ್ಸಫಾರ್ಮರ ರೀಪೇರಿ ಮಾಡಿಕೊಡಲು ಕೆಲವೊಂದು ಭಾಗಗಳಿಗೆ ಸಂಘವನ್ನು ನೇಮಿಸಿದ್ದಾರೆ.

[illegible]

ಅದಲ್ಲದೇ ಕಂಬಗಳನ್ನು ಸಂಘದಿಂದ ಖರೀದಿ ಮಾಡಲು ಒಪ್ಪಿದ್ದಾರೆ. ಇದರಿಂದ ಸಂಘದ ಆರ್ಥಿಕತೆ ಬೆಳೆಯಲು ಅನೂಕೂಲವಾಗುತ್ತಿದೆ.

ಸಂಘದ ವಿದ್ಯುತ್ ಮಾರಾಟದಿಂದ ಬರುವ ಆದಾಯವನ್ನು ಗಮನಿಸಿದರೆ ಸನ್ ೧೯೭೧ ರಲ್ಲಿ ೪,೪೮,೯೫೬-೧೨ ರೂ ಗಳಿದಿದ್ದದ್ದು, ಸನ್ ೧೯೯೦ ರ ಹೊತ್ತಿಗೆ ೧,೭೦,೯೧,೫೬೧-೯೮ ರೂ ಗಳಷ್ಟಾಯಿತು. ಈಗ ಸನ್ ೨೦೦೮ ರ ಹೊತ್ತಿಗೆ ೨,೧೦,೮೮೭.೭೧ ರೂ ಗಳಷ್ಟಾಗಿದೆ. ಈ ಅಂಕಿ ಅಂಶಗಳನ್ನು ಗಮನಿಸಿದಾಗ ಸಂಘವು ವಿದ್ಯುತ್ ಮಾರಾಟದಿಂದ ಸಾಕಷ್ಟು ಆದಾಯವನ್ನು ಗಳಿಸುತ್ತಿದೆ. ಅನ್ನುವದು ತಿಳಿದು ಬರುತ್ತದೆ. ಅದಲ್ಲದೇ ಈ ಗಳಿಕೆ ತನ್ನ ಆರ್ಥಿಕ ಬೆಳವಣಿಗೆಗೆ ಸಹಾಯವಾಗಿದೆ.

ಸಂಘದ ವಿದ್ಯುತ್ ಬಿಲ್ಲು ತಯಾರಿಸುವ ಹಾಗೂ ಇದಕ್ಕೆ ಸಂಬಂಧಪಟ್ಟ ಪೂರಕ ಕಾರ್ಯಗಳನ್ನು ಮತ್ತು ಶೇರುಖಾತೆ, ಸ್ಟೋರ ಖಾತೆ, ಸಿಬ್ಬಂಧಿ ಸಂಬಳ ಹಾಗೂ ಲೆಕ್ಕ ಪತ್ರ ಇವೆಲ್ಲವುಗಳನ್ನು ಸನ್ ೧೯೮೭ ರಲ್ಲಿ ಗಣಕೀಕರಣಗೊಳಿಸಲಾಗಿದೆ. ಇದಲ್ಲದೆ ಸಂಘವು ಇತ್ತಿಚಿಗೆ ಇಂಟರನೇಟ ಸೌಲಭ್ಯ ಪಡೆದುಕೊಂಡಿದೆ. ಇವುಗಳ ಅಳವಡಿಕೆಯಿಂದ ಸಂಘದ ಕಾರ್ಯ ಕ್ಷಮತೆಯನ್ನು ಹೆಚ್ಚಿಸಿ ಸಿಬ್ಬಂದಿಯ ಕೊರತೆಯನ್ನು ತುಂಬಿಕೊಂಡಿರುತ್ತದೆ. ಇದರಿಂದ ಸಂಘದ ಎಲ್ಲ ವ್ಯವಹಾರಗಳ ಚಟುವಟಿಕೆಗಳನ್ನು ತ್ವರಿತವಾಗಿ ಕೈಗೊಳ್ಳಲು ಅನಕೂಲವಾಗಿದೆ.

ಸಂಘದ ಆರ್ಥಿಕ ಪ್ರಗತಿ ನೋಟವನ್ನು ತಿಳಿದುಕೊಳ್ಳಲು ಕೋಷ್ಟಕ ೩.೧೧ ರಲ್ಲಿ ಕೊಡಲಾಗಿದೆ.

ಕೋಷ್ಟಕ ೩.೧೧

ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ ನಿಯಮಿತ, ಹುಕ್ಕೇರಿ ಸಂಘದ ಪ್ರಗತಿ ನೋಟ.

ಅ.ನಂ	ವಿಷಯ	ವಿವರ
೧)	ನೋಂದಣಿ ಕ್ರಮಾಂಕ ಮತ್ತು ತಾರೀಖ	ಎ.ಆರ್.ಬಿ.ಜಿ: ೧೪೫೮: ೧೯೬೯ ತಾರೀಖ ೩೧-೦೭-೧೯೬೯
೨)	ವಿದ್ಯುತ್ ವಿತರಣಾ ಲಾಯಿಸನ್ಸ ನಂಬರ	ಪಿ.ಡಬ್ಲ್ಯೂಡಿ: ೧೧೫ ಇಆಯ್‌ಜಿ: ೯೬ ರಿಂದ ೨೦೦೧. ಮತ್ತು ಕೆ.ಇ.ಆರ್.ಸಿ. ದಿಂದ ಸಪ್ಟೆಂಬರ ೨೦೦೧ ರಿಂದ ಅಕ್ಟೋಬರ ೨೦೦೬. ಅಕ್ಟೋಬರ ೨೦೦೬ ರಿಂದ ೨೫ ವರ್ಷಗಳ ಲಾಯಿಸನ್ಸ್ ಪಡೆಯಲಾಗಿದೆ.
೩)	ಕಾರ್ಯಾಚರಣೆ ಪ್ರಾರಂಭಿಸಿದ್ದು	೧೨-೧೦-೧೯೭೦
೪)	ಕಾರ್ಯಕ್ಷೇತ್ರ	ಪೂರ್ಣ ಹುಕ್ಕೇರಿ ತಾಲೂಕ ಹಾಗೂ ಬೆಳಗಾವಿ ತಾಲೂಕಿನ ಸುತಗಟ್ಟಿ ಗ್ರಾಮ.
೫)	ಅಧಿಕೃತ ಶೇರು ಬಂಡವಾಳ	ರೂ ೪.೦೦ ಕೋಟಿ.

[illegible]

೬)	ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿದ ಪ್ರಗತಿ					
ಅ.ನಂ	ವಿವರ	೧೯೭೦	೧೯೮೦	೧೯೯೨	೨೦೦೦	೨೦೦೮
೧	ಸಂಗ್ರಹಿಸಿದ ಶೇರು ಬಂಡವಾಳ (ಲಕ್ಷಗಳಲ್ಲಿ)	೩೧	೧೩.೨೫	೯೯.೪೫	೨೦೦.೪೫	೨೯೬.೦೯
೨	ಸಂಘದ ಸದಸ್ಯರು	೧೨೪೭	೧೧೯೬೨	೩೮೮೮೩	೫೫೫೬೯	೭೦೯೯೯
೩	ದುಡಿಯುವ ಬಂಡವಾಳ (ಕೋಟಿಗಳಲ್ಲಿ)	೧.೩೭೦೯	೩.೫೮೦೦೯	೮.೨೬	೨೭.೪೫೦	೯೪೨೩.೭೫
೪	ಆಸ್ತಿಗಳು (ಲಕ್ಷಗಳಲ್ಲಿ)	೬೫.೯೩	೨೨೮.೬೩	೬೫೬.೫೭	೧೪೯೬.೨೨	೨೫೪೯.೪೦
೫	ಗ್ರಾಮ ವಿದ್ಯುತ್ತೀಕರಣ	೨೦	೮೭೧೨೩	೧೩೬	೧೩೬	೧೩೬
೬	ಎಚ್.ಟಿ.ಲಾಯಿನ್ (ಕಿ.ಮೀ)	೨೧೩	೩೨೭	೬೭೯	--	೯೯೦.೭
೭	ಎಲ್.ಟಿ.ಲಾಯಿನ್ (ಕಿ.ಮೀ)	೨೫೮	೯೪೫	೨೩೨೩	--	೩೨೫೭.೫೭
೮	ಟ್ರಾನ್ಸ್ ಫಾರ್ಮರಗಳು	೧೧೪	--	೫೮೫	--	೧೩೨೬
೯	ವಿದ್ಯುತ್ ಜೋಡಣೆಗಳು					
	ಅ) ಮನೆ ಹಾಗೂ ವ್ಯಾಪಾರೊದ್ದಿಮೆಗಳು	೪೬೪೬	೯೬೫೭	೩೯೦೦೦	೫೪೫೨೨	೬೪೫೨೫
	ಬ) ಚಿಕ್ಕ ಉದ್ದಿಮೆಗಳ	೧೯೬	೩೭೨	೧೫೭೬	೧೩೩೦	೧೯೬೯
	ಕ) ದೊಡ್ಡ ಉದ್ದಿಮೆಗಳ	೪	೪	೬	೧೩	೧೩
	ಡ) ನೀರಾವರಿ ಪಂಪಸೆಟ್ಟಗಳು	೭೪೩	೩೫೪೦	೧೧೯೯೫	೧೪೬೩೭	೧೭೫೧೧
	ಇ) ಬೀದಿ ದೀಪಗಳು	--	--	--	--	--
	ಎ) ಪಾಯಿಂಟಗಳು	೧೭	--	೧೭೩	--	೨೨೨
	ಬಿ) ಬ್ರಾಕೆಟಗಳು	೧೬೫೦	೪೫೮೦	೮೮೯೪	--	೯೯೦೦

ಆಧಾರ : ಸಂಘದ ೧೯೭೦-೭೧ ರಿಂದ ೨೦೦೭-೦೮ ರ ವಾರ್ಷಿಕ ಮತ್ತು ಅಢಾವೆ ಪತ್ರಿಕೆಗಳ ವರದಿಗಳು.

ಆಕರಗಳು :

೧. ಸಂಘದ ೧೯೭೦-೭೧ ರಿಂದ ೨೦೦೭-೦೮ ರ ವಾರ್ಷಿಕ ಮತ್ತು ಅಢಾವೆ ಪತ್ರಿಕೆಗಳ ವರದಿಗಳು.

೨. ಬೆಳಗಾವಿ ಜಿಲ್ಲೆಯ ಅಂಕಿಅಂಶಗಳ ನೋಟ ೨೦೦೬-೦೭ ರ ಪು.ಸಂ.೫೮

೩. ಗ್ರಾಮೀಣ ವಿದ್ಯುದ್ಧಿಕರಣ ನಿಗಮ ಹೊಸದಿಲ್ಲಿ ಇವರು ಸಂಘಕ್ಕೆ ನೀಡಿದ ಯೋಜನಾ ಸಾಲದ ದಾಖಲಾತಿಗಳು

೪. ಕರ್ನಾಟಕ ವಿದ್ಯುತ್ ಮಂಡಳಿ / ಕರ್ನಾಟಕ ಗ್ರಾಮೀಣ ವಿದ್ಯುತ್ ನಿಯಂತ್ರಣ ಆಯೋಗರವರ ವಿದ್ಯುತ್ ಖರೀದಿ ಮತ್ತು ಮಾರಾಟದ ದರಗಳ ೧೯೭೦ ರಿಂದ ೨೦೦೮ ರ ವರದಿಗಳು

ಅಧ್ಯಾಯ-೪

ಸಂಘದ ಕಾರ್ಯವೈಖರಿಯ ವೈಶಿಷ್ಟ್ಯತೆಗಳು

ಪರಿವಿಡಿ

ಅಧ್ಯಾಯ–೪

ಸಂಘದ ಕಾರ್ಯವೈಖರಿಯ ವೈಶಿಷ್ಟ್ಯತೆಗಳು

ಅಧ್ಯಾಯ ೪
ಸಂಘದ ಕಾರ್ಯವೈಖರಿಯ ವೈಶಿಷ್ಟ್ಯತೆಗಳು

ಹುಕ್ಕೇರಿ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರ ಸಂಘವು ದಿನಾಂಕ: ೩೧-೦೭-೧೯೬೯ ರಂದು ನೋಂದಣಿಯಾಗಿ ದಿನಾಂಕ: ೧೨-೧೦-೧೯೭೦ ರಲ್ಲಿ ೧,೨೪೭ ಸದಸ್ಯರನ್ನು ಮತ್ತು ೩೧,೧೭೫ ರೂ ಶೇರು ಬಂಡವಾಳದೊಂದಿಗೆ ಪ್ರಾರಂಭವಾಗಿತ್ತು. ಪ್ರಸ್ತುತ ಅವಧಿಯಲ್ಲಿ ೭೦,೯೯೯ ಸದಸ್ಯರನ್ನು ಹೊಂದಿ ಕಾರ್ಯ ನಿರ್ವಹಿಸುತ್ತಿದೆ. ಆದರೂ ಕೂಡಾ ಸಂಸ್ಥೆಯ ಆದಾಯವನ್ನು ಅವಲೋಕಿಸಿದಾಗ ಪ್ರತಿ ವರ್ಷ ಸಂಘವು ಹಾನಿಯನ್ನು ಎದುರಿಸುತ್ತಿದೆ.

ಆದರೂ ಸಹ ಸಂಘವು ಕರ್ನಾಟಕದ ಇತರೆ ವಿದ್ಯಚ್ಛಕ್ತಿ ವಿತರಣಾ ಸಂಸ್ಥೆಗಳಾದ ಹೆಸ್ಕಾಂ, ಬೆಸ್ಕಾಂ, ಮೆಸ್ಕಾಂ, ಜೆಸ್ಕಾಂ ಮತ್ತು ಚೆಸ್ಕಾಂ ಗಳಂತೆ ತನ್ನ ಎಲ್ಲ ವಿದ್ಯುತ್ ಗ್ರಾಹಕರಿಗೆ ವಿದ್ಯುತನ್ನು ವಿತರಿಸುತ್ತದೆ. ಅದಲ್ಲದೆ ಸಂಸ್ಥೆಯ ಸಂಸ್ಥಾಪಕರಾದ ದಿ. ಅಪ್ಪಣಗೌಡಾ ಪಾಟೀಲರ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ಸಂಘದ ಆಡಳಿತ ವ್ಯವಸ್ಥೆ ಕಾರ್ಯ ನಿರ್ವಹಿಸುತ್ತದೆ.

೪.೧. ಸಂಘದ ಸಂಘಟನೆ :

ಹುಕ್ಕೇರಿ ಗ್ರಾಮೀಣ ವಿದ್ಯುಚ್ಛಕ್ತಿ ಸಂಘದ ಸಂಘಟನೆಯು ಇತರೆ ಸಂಘಗಳಂತೆ ಪ್ರಜಾಪ್ರಭುತ್ವದ ತಳಹದಿಯ ಮೇಲೆ ಮತ್ತು ಸಹಕಾರಿ ಕಾಯ್ದೆಯ ಅನುಗುಣವಾಗಿ ತನ್ನದೇ ಆದ ಸಂಘಟನೆಯನ್ನು ಮೂರು ಸ್ತರಗಳಲಿ ಹೊಂದಿರುತ್ತದೆ. ಅದನ್ನು ಕೋಷ್ಟಕ ೪.೧ ರಲ್ಲಿ ತೊರಿಸಲಾಗಿದೆ.

ಮೊದಲನೆ ಅಂದರೆ ಮೇಲ್ಮಟ್ಟದ ಸ್ತರದಲ್ಲಿ ಸಂಘದ ನಿರ್ವಹಣೆ ಅಂದರೆ ನೀತಿ ನಿಯಮಗಳನ್ನು ಜಾರಿಗೆ ತರುವದು. ಈ ಸ್ತರದಲ್ಲಿ ಶೇರುದಾರರು, ನಿರ್ದೇಶಕರ ಮಂಡಳಿ ಮತ್ತು ವ್ಯವಸ್ಥಾಪನಾ ನಿರ್ದೇಶಕರು ಬರುತ್ತಾರೆ. ಸಂಘಕ್ಕೆ ಸಂಬಂಧಿಸಿದ ವಿಷಯಗಳು ಸಾಮಾನ್ಯ ಸಭೆಗಳ ಮೂಲಕ ಅನುಮೋದಿಸಲ್ಪಟ್ಟ ನಂತರ ನಿರ್ದೇಶಕ ಮಂಡಳಿ ಕಾರ್ಯರೂಪಕ್ಕೆ ತರಲು ಯೋಜನೆ ತಯಾರಿಸುತ್ತದೆ.

ಎರಡನೆ ಸ್ತರದಲ್ಲಿ ಅಂದರೆ ಮಧ್ಯಮ ಮಟ್ಟದಲ್ಲಿ ಸಂಘದ ಕಾರ್ಯಗಳನ್ನು ಮೂರು ವಿಭಾಗಗಳಲ್ಲಿ ವಿಂಗಡಿಸಿದ್ದು, ಅವುಗಳೆಂದರೆ ತಾಂತ್ರಿಕ, ಲೆಕ್ಕ ಮತ್ತು ಆಡಳಿತ ವಿಭಾಗಗಳು. ತಾಂತ್ರಿಕ ಮುಖ್ಯಸ್ಥರು ಸ್ಥಾನಿಕ ಅಭಿಯಂತರರು (ರೆಸಿಡೆನ್ಸಿಯಲ್ ಇಂಜನಿಯರ್) ಇರುತ್ತಾರೆ. ಇವರ ಆಧಿನದಲ್ಲಿ ಎಲ್ಲ ವಿಭಾಗ ಅಭಿಯಂತರರು, ದಾಸ್ತಾನು ಪಾಲಕರು ಮತ್ತು ಕಂಬ ಹಾಗೂ ಟಾನ್ಸಫಾರ್ಮರ ಉತ್ಪಾದನಾ ಘಟಕಗಳ ಮುಖ್ಯಸ್ಥರು ಬರುತ್ತಾರೆ. ಲೆಕ್ಕಧಿಕಾರಿ ಇವರ ಆಧಿನದಲ್ಲಿ ರೇವಿನ್ಯೂ ಅಕೌಂಟಂಟ ಮತ್ತು ಜನರಲ್ ಅಕೌಂಟಂಟ ಸಿಬ್ಬಂದಿ ವರ್ಗ ಬರುತ್ತದೆ. ಇವರು ಸಂಘದ ಎಲ್ಲ ಲೆಕ್ಕದ ವ್ಯವಹಾರಗಳನ್ನು ನೋಡಿಕೊಳ್ಳುತ್ತಾರೆ. ಮತ್ತು ವ್ಯವಸ್ಥಾಪಕ ತನ್ನ ಸಿಬ್ಬಂಧಿ ವರ್ಗದಿಂದ ಎಲ್ಲ ಆಡಳಿತದ ವ್ಯವಹಾರಗಳನ್ನು ನೋಡಿಕೊಳ್ಳುತ್ತಾರೆ. ಕೊನೆಯ ಹಾಗೂ ಕೆಳಮಟ್ಟದ ಸ್ತರಗಳಲ್ಲಿ

[illegible]

[illegible]

[illegible]

[illegible]


[illegible]

[illegible]

[illegible]

[illegible]

ಕೋಷ್ಟಕ ನಂ ೪.೧
ಹುಕ್ಕೇರಿ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘದ ಸಂಘಟಣೆ



ಮೂರು ವಿಭಾಗಗಳ ವಿವಿಧ ಅಧಿಕಾರಿಗಳು ಬರುತ್ತಾರೆ. ಅವರು ಸಂಘದ ದಿನನಿತ್ಯದ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಾರೆ. ಈ ರೀತಿ ವಿದ್ಯುಚ್ಛಕ್ತಿ ಸಹಕಾರಿ ಸಂಘವು ತನ್ನ ಸಂಘಟನೆಯನ್ನು ಹೊಂದಿದೆ.

೪.೨. ಸಂಘದ ನಿರ್ದೇಶಕ ಮಂಡಳಿ :

ಸಂಘದ ಪೋಟ ನಿಯಮಗಳ ಪ್ರಕಾರ ಸಂಘವು ೧೨ ಜನ ನಿರ್ದೇಶಕ ಮಂಡಳಿಯನ್ನು ಒಳಗೊಂಡಿರುತ್ತದೆ. ಸದರಿ ಸಂಘದ ಕಾರ್ಯಕ್ಷೇತ್ರವನ್ನು ಸದಸ್ಯರ ಸಂಖ್ಯೆಗನುಗುಣವಾಗಿ ಕೆಳಗಿನಂತೆ ೧೨ ವಿಭಾಗಗಳನ್ನಾಗಿ ಮಾಡಲಾಗಿದೆ.

೧.	ಹುಕ್ಕೇರಿ	೨.	ಸಂಕೇಶ್ವರ	೩.	ಶಿರಗಾಂವ
೪.	ಕಣಗಲಾ	೫.	ಹೆಬ್ಬಾಳ	೬.	ಬೆಲ್ಲದಬಾಗೇವಾಡಿ
೭.	ಯಮಕನಮರ್ಡಿ	೮.	ಎಲಿಮುನ್ನೊಳಿ	೯.	ಪಾಶ್ವಾಪೂರ
೧೦.	ಬಸ್ಸಾಪೂರ	೧೧.	ದಡ್ಡಿ	೧೨.	ಅಮ್ಮಣಗಿ

ಪ್ರತಿ ವಿಭಾಗಕ್ಕೆ ಒಬ್ಬರಂತೆ ೧೨ ಜನ ಪ್ರತಿನಿಧಿಗಳನ್ನು ಚುನಾಯಿಸಲಾಗುತ್ತದೆ. ಅವರು ಸಂಘದ ಸಂಪೂರ್ಣ ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಾರೆ. ಈ ಒಂದು ನಿರ್ದೇಶಕ ಮಂಡಳಿಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷರನ್ನು ಚುನಾಯಿಸಲಾಗುತ್ತದೆ. ಈ ಸಂಘಕ್ಕೆ ಸಹಕಾರ ಕಾಯ್ದೆಯಡಿಯಲ್ಲಿ ಸರಕಾರದ ಪರವಾಗಿ ವ್ಯವಸ್ಥಾಪಕ ನಿರ್ದೇಶಕರನ್ನು ನೇಮಿಸಲಾಗುತ್ತದೆ. ಈ ವ್ಯವಸ್ಥಾಪಕ ನಿರ್ದೇಶಕನು ನಿರ್ದೇಶಕ ಮಂಡಳಿಯೊಡನೆ ಎಲ್ಲ ಯೋಜನೆಗಳ ನಿರ್ವಹಿಸುವಲ್ಲಿ ಭಾಗಿಯಾಗಿರುತ್ತಾನೆ. ಸದರಿ ಸಂಘದ ಎಲ್ಲ ಸಿಬ್ಬಂದಿ ವರ್ಗಕ್ಕೆ ಮೇಲಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಾನೆ. ನಿರ್ದೇಶಕ ಮಂಡಳಿಯ ಯೋಜನೆಗಳನ್ನು ಸಿಬ್ಬಂದಿ ಸಹಾಯದಿಂದ ಅನುಷ್ಠಾನಗೊಳಿಸುತ್ತಾರೆ. ಸಂಘದ ಪ್ರತಿನಿಧಿಗಳಿಗೆ ಸನ್ ೨೦೦೬ ರಂದು ಮಾತ್ರ ಚುನಾವಣೆ ಜರುಗಿತು. ಸಂಘ ಪ್ರಾರಂಭದಿಂದಲೂ ಚುನಾವಣೆ ನಡೆಯದೇ ಅವಿರೋಧವಾಗಿ ಪ್ರತಿನಿಧಿಗಳು ಆಯ್ಕೆಯಾಗಿದ್ದಾರೆ. ಸಂಘದ ಪ್ರತಿನಿಧಿಗಳು ತಮ್ಮ ಭಾಗದ ವಿದ್ಯುತ್ ಗ್ರಾಹಕರ ಸಮಸ್ಯೆಗಳಿಗೆ ಸ್ಪಂದಿಸಿ ತ್ವರಿತ ಸೇವೆಯನ್ನು ಒದಗಿಸಲು ಪ್ರಯತ್ನಿಸುತ್ತಾರೆ.

೪.೩. ಸಂಘದ ಸಿಬ್ಬಂದಿ ವರ್ಗ :

ಸಂಘವು ತನ್ನದೇ ಆದ ಸಿಬ್ಬಂದಿಯನ್ನು ಒಳಗೊಂಡಿರುತ್ತದೆ. ಈ ಸಿಬ್ಬಂದಿ ವರ್ಗವನ್ನು ಕೋಷ್ಟಕ ೪.೨ ರಲ್ಲಿ ತೋರಿಸಲಾಗಿದೆ. ಈ ಸಂಘದಲ್ಲಿ ಒಟ್ಟು ೨೨೬ ಹುದ್ದೆಗಳು ಮಂಜೂರು ಇದ್ದು ಅವುಗಳಲ್ಲಿ ಮಾರ್ಚ ೨೦೦೮ ಕ್ಕೆ ೧೬೭ ಹುದ್ದೆಗಳು ಭರ್ತಿ ಇವೆ. ೫೯ ಹುದ್ದೆಗಳು ಖಾಲಿ ಇವೆ. ಅದಲ್ಲದೇ ಈ ಸಂಘದ ದಿನನಿತ್ಯದ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗಲಿಕ್ಕೆ ಅಂದರೆ ಲೈನ ಹಾಕುವದು, ಟ್ರಾನ್ಸಫಾರ್ಮರ ತಯಾರಿಸಲಿಕ್ಕೆ, ಸಿಮೆಂಟ ಕಂಬ ತಯಾರಿಸಲಿಕ್ಕೆ ದಿನಗೂಲಿ

[illegible]

[illegible]

[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]

[illegible]

[illegible]

ಕೋಷ್ಟಕ ೪.೨

ದಿನಾಂಕ ೦೧-೦೬-೨೦೦೮ ಕ್ಕೆ ಇದ್ದಂತೆ ಸಂಘದಲ್ಲಿ ಮಂಜೂರಾದ ವೃಂದಬಲ ಭರ್ತಿ ಇರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರ.

ಅ.ನಂ	ಹುದ್ದೆಯ ಹೆಸರು	ಮಂಜೂರಾದ ಹುದ್ದೆಗಳು	ಭರ್ತಿ ಇರುವ ಹುದ್ದೆಗಳು	ಖಾಲಿ ಇರುವ ಹುದ್ದೆಗಳು
೧.	ವ್ಯವಸ್ಥಾಪಕರು (ಮ್ಯಾನೇಜರ)	೦೧	--	೦೧
೨.	ಲೆಕ್ಕಾಧಿಕಾರಿ (ಅಕೌಂಟ್ಸ ಆಫೀಸರ)	೦೧	--	೦೧
೩.	ಲೆಕ್ಕ ಪಾಲಕ (ಅಕೌಂಟಂಟ)	೦೨	೦೨	--
೪.	ಸ್ಥಾನಿಕ ಅಭಿಯಂತಕರು (ರೆಸಿಡೆಂಟ್ ಇಂಜನೀಯರ)	೦೧	೦೧	--
೫.	ಕಿರಯ ತಾಂತ್ರಿಕ ಸಹಾಯಕ (ಜ್ಯುನಯರ ಟೆಕ್ನಕಲ್ ಅಸಿಸ್ಟಂಟ)	೦೧	--	೦೧
೬.	ಸಹಾಯಕ ಅಭಿಯಂತರರು (ಅಸಿಸ್ಟಂಟ ಇಂಜಿನೀಯರ)	೦೪	೦೩	೦೧
೭.	ಕಿರಿಯ ಅಭಿಯಂತಕರು (ಜ್ಯುನೀಯರ ಇಂಜಿನೀಯರ)	೦೨	೦೧	೦೧
೮.	ದಾಸ್ತಾನು ಪಾಲಕ (ಸ್ಟೋರ ಕೀಪರ)	೦೧	--	೦೧
೯.	ಮೀಟರ ತಪಾಸಕರು (ಮಿಟರ ಟೆಸ್ಟರ)	೦೧	--	೦೧
೧೦.	ನಕ್ಷೆಗಾರ (ಡ್ರಾಫಟ್ಸಮನ್)	೦೧	--	೦೧
೧೧.	ಸಹಾಯಕ ದಾಸ್ತಾನು ಪಾಲಕ (ಅಸಿಸ್ಟಂಟ ಸ್ಟೋರ ಕೀಪರ್)	೦೧	--	೦೧
೧೨.	ತಪಾಸಣಾ ನಿರಿಕ್ಷಕರು (ವ್ಹಿಜಲನ್ಸ್ ಇನ್ಸ್‌ಪೆಕ್ಟರ)	೦೧	--	೦೧
೧೩.	ಆಂತರಿಕ ಲೆಕ್ಕ ಪರಿಶೋಧಕರು (ಇಂಟರ್ನಲ್ ಆಡಿಟರ)	೦೧	--	೦೧
೧೪.	ವಾಹನ ಚಾಲಕ (ಡ್ರಾವರ)	೦೪	೦೪	--
೧೫.	ವಾಹನ ಸ್ವಚ್ಛೇತೆಗಾರ (ಕ್ಲೀನರ)	೦೧	--	೦೧
೧೬.	ಮಾರ್ಗದಾಳು (ಲೈನಮನ್ ವರ್ಗ -೧)	೦೨	--	೦೨
೧೭.	ಮಾರ್ಗದಾಳು ((ಲೈನಮನ್ ವರ್ಗ -೨)	೦೬	೦೪	೦೨
೧೮.	ಮಾರ್ಗದಾಳು ((ಲೈನಮನ್ ವರ್ಗ -೩)	೧೦೭	೯೫	೧೨
೧೯.	ದಾಸ್ತಾನು ಸಹಾಯಕ (ಸ್ಟೋರ ಹೆಲ್ಪರ)	೦೪	೦೩	೦೧
೨೦.	ರಚನಾ ಸಹಾಯಕರು	೧೨	೦೫	೦೭
೨೧.	ಯಂತ್ರಗಾರ (ಮೆಕ್ಯಾನಿಕ್)	೦೧	--	೦೧
೨೨.	ಪ್ರಥಮ ದರ್ಜೆ ಗುಮಾಸ್ತ (ಎಫ್.ಡಿ.ಸಿ)	೦೨	೦೧	೦೧
೨೩.	ಪಾವತಿ ತಪಾಸಕರು (ಬಿಲ್ ಚೆಕ್ಕರ)	೦೩	--	೦೩
೨೪.	ಖಚಾಂಚಿ (ಕ್ಯಾಶೀಯರ)	೦೧	೦೧	--
೨೫.	ರಶೀದಿ ತಯಾರಕರು (ಬಿಲ್ಲಿಂಗ ಕ್ಲಾರ್ಕ)	೨೮	೨೦	೦೮
೨೬.	ದ್ವಿತಿಯ ದರ್ಜೆ ಗುಮಾಸ್ತ (ಎಸ್.ಡಿ.ಸಿ)/ಎಮ್.ಆರ್)	೧೦	೦೮	೦೨
೨೭.	ದ್ವಿತಿಯ ದರ್ಜೆ ಗುಮಾಸ್ತ ವಿದ್ಯುತ್ ಯಂತ್ರ ಜೋಡಣೆ ಓದುವರು (ಎಸ್.ಡಿ.ಸಿ/ಎಮ್.ಆರ್)	೦೪	೦೪	--

೨೮.	ವಿದ್ಯುತ್ ಯಂತ್ರ ಜೋಡಣೆ ಓದುವರು (ಮೀಟರ ರೀಡರ)	೧೦	೦೭	೦೩
೨೯.	ಬೆರಳಚ್ಚುಗಾರ (ಟೈಪಿಸ್ಟ)	೦೩	೦೧	೦೨
೩೦.	ಗಣಕಯಂತ್ರ ಮೇಲ್ವಿಚಾರಕ (ಕಂಪ್ಯೂಟರ ಸುಪರವೈಜರ)	೦೧	--	೦೧
೩೧.	ಗಣಕಯಂತ್ರ ನಿರ್ವಹಣಾಗಾರ (ಕಂಪ್ಯೂಟರ ಆಪರೇಟರ)	೦೩	೦೩	--
೩೨.	ಜವಾನ (ಸಿಪಾಯಿ)	೦೫	೦೪	೦೧
೩೩.	ಕಾವಲುಗಾರ (ವಾಚಮನ್)	೦೧	--	೦೧
೦	ಒಟ್ಟು	೨೨೬	೧೬೭	೫೯

ಆಧಾರ : ಸಂಘದ ಸಿಬ್ಬಂದಿ ವರ್ಗ ದಾಖಲಾತಿ ೦೧/೦೬/೨೦೦೮ ಕ್ಕೆ ಇದ್ದಂತೆ

ಕಾರ್ಮಿಕರನ್ನು ನಿಯಮಿಸಿಕೊಳ್ಳುತ್ತದೆ. ಈ ಸದರಿ ಸಿಬ್ಬಂದಿ ವರ್ಗದಲ್ಲಿ ಲೈನಮನ್ ವರ್ಗ ೩,೧೦೭ ನ್ನು ಅತಿ ಹೆಚ್ಚು ಹೊಂದಿದ್ದು, ಅವರು ಪ್ರತಿ ಹಳ್ಳಿಯಲ್ಲಿ ಕಾರ್ಯನಿರ್ವಹಿಸುತ್ತಾರೆ. ಅದರಂತೆ ೨೮ ಬಿಲ್ಲಿಂಗ ಕ್ಲರ್ಕರನ್ನು ಹೊಂದಿದೆ. ೧೦ ಜನ ಮೀಟರ ರೀಡರನ್ನು ಹೊಂದಿದೆ. ಸಂಘದ ಎಲ್ಲ ಕೆಲಸ ಕಾರ್ಯಗಳನ್ನು ಆಡಳಿತ ವ್ಯವಸ್ಥೆಯನ್ನು ಸರಿಯಾಗಿ ನೋಡಿಕೊಂಡು ಹೋಗುವಷ್ಟು ಸಿಬ್ಬಂದಿ ವ್ಯವಸ್ಥೆಯನ್ನು ಹೊಂದಿದೆ.

೪.೪ ನೆರೆಯ ತಾಲೂಕುಗಳೊಡನೆ ಸಂಘದ ವಿದ್ಯುತ್ ವಿತರಣಾ ಸಾಮರ್ಥ್ಯದ ಹೋಲಿಕೆ

ಹುಕ್ಕೇರಿ ತಾಲೂಕಿನ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘವು ಕರ್ನಾಟಕದಲ್ಲಿ ಸಹಕಾರಿ ರಂಗದಲ್ಲಿ ವಿದ್ಯುತ್ ವಿತರಿಸುವ ಏಕೈಕ ಸಂಘವಾಗಿದೆ. ಕರ್ನಾಟಕದಲ್ಲಿ ಇತರ ಎಲ್ಲ ಭಾಗಗಳಲ್ಲಿ ಸರಕಾರದಿಂದ ನೇಮಿಸಲ್ಪಟ್ಟ ಹೆಸ್ಕಾಂ, ಬೆಸ್ಕಾಂ, ಮೆಸ್ಕಾಂ, ಜೆಸ್ಕಾಂ ಮತ್ತು ಚೆಸ್ಕಾಂ ಅಂತಾ ೫ ಕಂಪನಿಗಳ ಮೂಲಕ ವಿದ್ಯುತ್ ವಿತರಿಸಲಾಗುತ್ತದೆ. ಇವುಗಳ ಉಸ್ತುವಾರಿ ನೋಡಿಕೊಳ್ಳಲು ಕೆ.ಪಿ.ಟಿ.ಸಿ.ಎಲ್‌ನ್ನು ನೇಮಿಸಲಾಗಿದೆ. ಈ ಎಲ್ಲ ವಿದ್ಯುತ್ ಕಂಪನಿಗಳಿಗೆ ಮತ್ತು ಹುಕ್ಕೇರಿ ವಿದ್ಯುತ್ ಸಹಕಾರಿ ಸಂಘಕ್ಕೆ ವಿದ್ಯುತ್ ದರ ನಿಗಧಿಮಾಡಲು ಮತ್ತು ಇನ್ನಿತರ ವಿದ್ಯುತ್ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ರಾಜ್ಯದ ಇಂಧನ ಇಲಾಖೆಯ ನಿಯಂತ್ರಣಕ್ಕೆ ಒಳಪಟ್ಟ, ಕೆ.ಇ.ಆರ್.ಸಿ (ಕರ್ನಾಟಕ ವಿದ್ಯುತ್‌ಚ್ಛಕ್ತಿ ನಿಯಂತ್ರಣ ಆಯೋಗ) ಯನ್ನು ಸರಕಾರ ಸ್ಥಾಪಿಸಿದೆ. ಕೆ.ಇ.ಆರ್.ಸಿ ಯು ಸಂಘದ ಎಲ್ಲ ಖರ್ಚು ವೆಚ್ಚಗಳನ್ನು ನೋಡಿ ವಿದ್ಯುತ್ ಖರೀದಿ ದರವನ್ನು ನಿಗಧಿಮಾಡುತ್ತಿದೆ. ಇದು ಸಂಘಕ್ಕೆ ಮಿತವ್ಯಯ ಸಾಧಿಸಲು ಸಮಂಜಸವಾಗುತ್ತಿಲ್ಲ. ಸಂಘವು ತಾನು ವಿದ್ಯುತ್‌ಚ್ಛಕ್ತಿ ವಿತರಣೆ ಮಾಡಬೇಕಾದರೆ ವಿದ್ಯುತ್ ವಿತರಣಾ ಕೇಂದ್ರಗಳನ್ನು ಈ ವಿಭಾಗದ ಕಂಪನಿಯಾದ ಹೆಸ್ಕಾಂ ವಿದ್ಯುತ್ತ ಕಂಪನಿಯು ಕೂಡಲೇ ವಿತರಣಾ ಕೇಂದ್ರಗಳನ್ನು ಸ್ಥಾಪನೆ ಮಾಡುತ್ತಿಲ್ಲ. ಆದರೆ ನೆರೆಯ ಇತರ

ತಾಲೂಕುಗಳಲ್ಲಿ ಹೆಸ್ಕಾಂ ಕಂಪನಿಯು ವಿದ್ಯುತ್ ವಿತರಣೆಯನ್ನು ಮಾಡುತ್ತಿದ್ದು, ಅಲ್ಲಿ ಸಾಕಷ್ಟು ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸಿದೆ. ಇದನ್ನು ಕೋಷ್ಟಕ ೪.೩ ರಿಂದ ತಿಳಿದುಕೊಳ್ಳಬಹುದಾಗಿದೆ.

ಕೋಷ್ಟಕ ೪.೩

ಸಂಘದ ಮತ್ತು ನೆರೆಯ ತಾಲೂಕುಗಳಲ್ಲಿರುವ ವಿದ್ಯುತ್ ವಿತರಣೆ ಮಾಡುವ ಕೇಂದ್ರಗಳು ಮತ್ತು ಅವುಗಳ ಸಾಮರ್ಥ್ಯ.

ಅ.ನಂ	ಹುಕ್ಕೇರಿ ತಾಲೂಕಾ ಗ್ರಾಮೀಣ ವಿದ್ಯುತ್ ಸಹಕಾರಿಸಂಘ	ರಾಯಭಾಗ ತಾಲೂಕ (ಹೆಸ್ಕಾಂದಿಂದ)	ಚಿಕ್ಕೊಡಿ ತಾಲೂಕ (ಹೆಸ್ಕಾಂದಿಂದ)	ಗೋಕಾಕ ತಾಲೂಕ (ಹೆಸ್ಕಾಂದಿಂದ)
೦೧	೦೨	೦೩	೦೪	೦೫
ಅ. ೧೧೦:೧೧ ಕೆ.ವಿ ವಿದ್ಯುತ್ ವಿತರಣಾ ಉಪ ಕೇಂದ್ರಗಳು				
೦೧	ಹಿಡಕಲ್ ಡ್ಯಾಂದಲ್ಲಿ ೧೧೦:೧೧ ಕೆ.ವಿ ಯ ೨x೧೦ ಎಂ.ವಿ.ಎ	ರಾಯಭಾಗದಲ್ಲಿ ೧೧೦:೧೧ ಕೆ.ವಿ ಯ ೨x೧೦ ಎಂ.ವಿ.ಎ	ಚಿಕ್ಕೋಡಿಯಲ್ಲಿ ೧೧೦:೩೩:೧೧ ಕೆ.ವಿ ಯ ೨x೧೦ ಎಂ.ವಿ.ಎ	ಘಟಪ್ರಭಾದಲ್ಲಿ ೧೧೦:೧೧ ಕೆ.ವಿ ಯ ೨x೧೦ ಎಂ.ವಿ.ಎ
೦೨	ಸಂಕೇಶ್ವರದಲ್ಲಿ ೧೧೦:೧೧ ಕೆ.ವಿ ಯ ೨x೧೦ ಎಂ.ವಿ.ಎ	ರಾಯಭಾಗದಲ್ಲಿ ೧೧೦:೧೧ ಕೆ.ವಿ ಯ ೧x೧೦ ಎಂ.ವಿ.ಎ	ನಿಪ್ಪಾಣಿಯಲ್ಲಿ ೧೧೦:೧೧ ಕೆ.ವಿ ಯ ೨x೧೦ ಎಂ.ವಿ.ಎ	ಅಂಕಲಗಿಯಲ್ಲಿ ೧೧೦:೧೧ ಕೆ.ವಿ ಯ ೧x೧೦ ಎಂ.ವಿ.ಎ
೦೩	ಹುಕ್ಕೇರಿಯಲ್ಲಿ ೧೧೦:೩೩:೧೧ ಕೆ.ವಿ ಯ ೨x೧೦ ಎಂ.ವಿ.ಎ	ಕುಡಚಿಯಲ್ಲಿ ೧೧೦:೧೧ ಕೆ.ವಿ ಯ ೧x೧೦ ಎಂ.ವಿ.ಎ	ಗಳತಗಾದಲ್ಲಿ ೧೧೦:೧೧ ಕೆ.ವಿ ಯ ೨x೧೦ ಎಂ.ವಿ.ಎ	ಗೋಕಾಕದಲ್ಲಿ ೧೧೦:೧೧ ಕೆ.ವಿ ಯ ೨x೧೦ ಎಂ.ವಿ.ಎ
೦೪	ಹತ್ತರಕಿಯಲ್ಲಿ ೧೧೦:೧೧ ಕೆ.ವಿ ಯ ೨x೧೦ ಎಂ.ವಿ.ಎ	ಹಿಡಕಲ್‌ದಲ್ಲಿ ೧೧೦:೧೧ ಕೆ.ವಿ ಯ ೨x೧೦ ಎಂ.ವಿ.ಎ	ಸದಲಗಾದಲ್ಲಿ ೧೧೦:೩೩:೧೧ ಕೆ.ವಿ ಯ ೨x೧೦ ಎಂ.ವಿ.ಎ	ಕುಲಗೋಡದಲ್ಲಿ ೧೧೦:೧೧ ಕೆ.ವಿ ಯ ೨x೧೦ ಎಂ.ವಿ.ಎ
೦೫	--	ಹಿಡಕಲ್‌ದಲ್ಲಿ ೧೧೦:೧೧ ಕೆ.ವಿ ಯ ೧x೨೦ ಎಂ.ವಿ.ಎ	ಅಂಕಲಿಯಲ್ಲಿ ೧೧೦:೩೩:೧೧ ಕೆ.ವಿ ಯ ೨x೧೦ ಎಂ.ವಿ.ಎ	ಮುಡಲಗಿಯಲ್ಲಿ ೧೧೦:೧೧ ಕೆ.ವಿ ಯ ೨x೧೦ ಎಂ.ವಿ.ಎ
೦೬	--	--	ಅಂಕಲಿಯಲ್ಲಿ ೧೧೦:೩೩:೧೧ ಕೆ.ವಿ ಯ ೧x೨೦ ಎಂ.ವಿ.ಎ	--
ಬ. ೩೩:೧೧ ಕೆ.ವಿ ಯ ವಿದ್ಯುತ್ ವಿತರಣಾ ಉಪಕೇಂದ್ರಗಳು				
೦೧	ಕಣಗಲಾದಲ್ಲಿ ೩೩:೧೧ ಕೆ.ವಿ ಯ ೧x೫ ಎಂ.ವಿ.ಎ	ಕೋಳಿಗುಡ್ಡದಲ್ಲಿ ೩೩:೧೧ ಕೆ.ವಿ ಯ ೨x೫ ಎಂ.ವಿ.ಎ	ಕಬ್ಬೂರದಲ್ಲಿ ೩೩:೧೧ ಕೆ.ವಿ ಯ ೨x೧೦ ಎಂ.ವಿ.ಎ	ಯಾದವಾಡದಲ್ಲಿ ೩೩:೧೧ ಕೆ.ವಿ ಯ ೨x೫ ಎಂ.ವಿ.ಎ

[illegible]

[illegible]

[illegible]

[illegible]

೦೨	--	ಯಲ್ಪಾರಟ್ಟಿಯಲ್ಲಿ ೩೩:೧೧ ಕೆ.ವಿ ಯ ೨x೫ ಎಂ.ವಿ.ಎ	ಕಡಕಲಾಟದಲ್ಲಿ ೩೩:೧೧ ಕೆ.ವಿ ಯ ೧x೫ ಎಂ.ವಿ.ಎ	ತಿಗಡಿಯಲ್ಲಿ ೩೩:೧೧ ಕೆ.ವಿ ಯ ೨x೫ ಎಂ.ವಿ.ಎ
೦೩	--	ಚಿಂಚಲಿಯಲ್ಲಿ ೩೩:೧೧ ಕೆ.ವಿ ಯ ೨x೫ ಎಂ.ವಿ.ಎ	ಖೋತವಾಡಿಯಲ್ಲಿ ೩೩:೧೧ ಕೆ.ವಿ ಯ ೨x೫ ಎಂ.ವಿ.ಎ	ಅರಳಿಮಟ್ಟಿಯಲ್ಲಿ ೩೩:೧೧ ಕೆ.ವಿ ಯ ೨x೫ ಎಂ.ವಿ.ಎ
೦೪	--	ಮಂಟೂರದಲ್ಲಿ ೩೩:೧೧ ಕೆ.ವಿ ಯ ೨x೫ ಎಂ.ವಿ.ಎ	ಬೆನ್ನಾಡಿಯಲ್ಲಿ ೩೩:೧೧ ಕೆ.ವಿ ಯ ೧x೫ ಎಂ.ವಿ.ಎ	ಕಲ್ಲೋಳಿಯಲ್ಲಿ ೩೩:೧೧ ಕೆ.ವಿ ಯ ೨x೫ ಎಂ.ವಿ.ಎ
೦೫	--	ಅಳಗವಾಡಿಯಲ್ಲಿ ೩೩:೧೧ ಕೆ.ವಿ ಯ ೨x೫ ಎಂ.ವಿ.ಎ	ಕುಗಟೊಳಿಯಲ್ಲಿ ೩೩:೧೧ ಕೆ.ವಿ ಯ ೨x೫ ಎಂ.ವಿ.ಎ	ಗೋಕಾಕದಲ್ಲಿ ೩೩:೧೧ ಕೆ.ವಿ ಯ ೧x೫ ಎಂ.ವಿ.ಎ
೦೬	--	ಸುಲ್ತಾನಪೂರದಲ್ಲಿ ೩೩:೧೧ ಕೆ.ವಿ ಯ ೨x೫ ಎಂ.ವಿ.ಎ	ಕುಣ್ಣೂರದಲ್ಲಿ ೩೩:೧೧ ಕೆ.ವಿ ಯ ೨x೫ ಎಂ.ವಿ.ಎ	--
೦೭	--	--	ಬೋಜದಲ್ಲಿ ೩೩:೧೧ ಕೆ.ವಿ ಯ ೨x೫ ಎಂ.ವಿ.ಎ	--
೦೮	--	--	ಬೋರಗಾಂವದಲ್ಲಿ ೩೩:೧೧ ಕೆ.ವಿ ಯ ೨x೫ ಎಂ.ವಿ.ಎ	--
೦೯	--	--	ನನದಿಯಲ್ಲಿ ೩೩:೧೧ ಕೆ.ವಿ ಯ ೨x೫ ಎಂ.ವಿ.ಎ	--
ಒಟ್ಟು	೮೫ ಎಂ.ವಿ.ಎ	೧೫೦ ಎಂ.ವಿ.ಎ	೨೧೦ ಎಂ.ವಿ.ಎ	೧೩೫ ಎಂ.ವಿ.ಎ

ಆಧಾರ : ಸಂಘ ಮತ್ತು ಹೆಸ್ಕಾಂ ಕಂಪನಿಗಳ ವಿದ್ಯುತ ವಿತರಣಾ ಉಪ ಕೇಂದ್ರಗಳ ಯಾದಿ

ಮೇಲಿನ ಕೋಷ್ಟಕ ೪.೩ ನ್ನು ನೋಡಿದಾಗ ತಿಳಿದುಬರುವುದೆನೆಂದರೆ, ೧೧೦:೧೧ ಕೆ.ವಿ ಯ ವಿದ್ಯುತ್ ವಿತರಣಾ ಉಪಕೇಂದ್ರಗಳು ಗೋಕಾಕ ತಾಲೂಕಿನಲ್ಲಿ ೦೫ ಕೇಂದ್ರಗಳೊಂದಿಗೆ ೯೦ ಎಂ.ವಿ.ಎ ಸಾಮಾರ್ಥ್ಯ ಹೊಂದಿದ್ದರೆ, ಚಿಕ್ಕೋಡಿ ತಾಲೂಕಿನಲ್ಲಿ ೦೬ ಕೇಂದ್ರಗಳೊಂದಿಗೆ ೧೨೦ ಎಂ.ವಿ.ಎ ಸಾಮಾರ್ಥ್ಯ ಹೊಂದಿದೆ, ರಾಯಭಾಗ ತಾಲೂಕಿನಲ್ಲಿ ೦೫ ಕೇಂದ್ರಗಳೊಂದಿಗೆ ೮೦ ಎಂ.ವಿ.ಎ ಸಾಮಾರ್ಥ್ಯ ಹೊಂದಿದ್ದರೆ, ಹುಕ್ಕೇರಿ ತಾಲೂಕಾ ಗ್ರಾಮೀಣ ವಿದ್ಯುತ್ ಸಹಕಾರ ಸಂಘವು ೮೦ ಎಂ.ವಿ.ಎ ಸಾಮರ್ಥ್ಯ ಹೊಂದಿರುತ್ತದೆ. ಮತ್ತು ೩೩:೧೧ ಕೆ.ವಿ ಯ ವಿದ್ಯುತ್ ವಿತರಣಾ ಉಪಕೇಂದ್ರಗಳನ್ನು ಗೋಕಾಕ ತಾಲೂಕಿನಲ್ಲಿ ೦೫ ಕೇಂದ್ರಗಳೊಂದಿಗೆ ೪೫ ಎಂ.ವಿ.ಎ ಸಾಮಾರ್ಥ್ಯ

ಹೊಂದಿದ್ದರೆ, ಚಿಕ್ಕೋಡಿ ತಾಲೂಕಿನಲ್ಲಿ ೦೯ ಕೇಂದ್ರಗಳೊಂದಿಗೆ ೯೦ ಎಂ.ವಿ.ಎ ಸಾಮಾರ್ಥ್ಯ ಹೊಂದಿದೆ, ರಾಯಭಾಗ ತಾಲೂಕಿನಲ್ಲಿ ೦೬ ಕೇಂದ್ರಗಳೊಂದಿಗೆ ೬೦ ಎಂ.ವಿ.ಎ ಸಾಮಾರ್ಥ್ಯ ಹೊಂದಿದ್ದರೆ, ಹುಕ್ಕೇರಿ ತಾಲೂಕಿನ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘವು ೦೧ ಕೇಂದ್ರದೊಂದಿಗೆ ೫ ಎಂ.ವಿ.ಎ ಸಾಮಾರ್ಥ್ಯ ಹೊಂದಿರುತ್ತದೆ. ಈ ಮೇಲಿನ ಅಂಕಿ ಅಂಶಗಳಿಂದ ತಿಳಿದು ಬರುವುದೆನೆಂದರೆ, ಸಂಘದ ವಿದ್ಯುತ್ ವಿತರಣಾ ಘಟಕಗಳು ನೆರೆಯ ತಾಲೂಕುಗಳಿಗಿಂತ ಕಡಿಮೆ ಸಾಮರ್ಥ್ಯವನ್ನು ಹೊಂದಿರುತ್ತದೆ.

೪.೫ ಸಂಘದ ಮುಂದಿರುವ ಸಮಸ್ಯೆಗಳು :-

ಗ್ರಾಮೀಣ ವಿದ್ಯುಧ್ಧಿಕರಣ ಕಾರ್ಯದಲ್ಲಿ ಸಂಘವು ನಿಗಧಿತ ಅವಧಿಗಿಂತ ಮುಂಚೆಯೇ ಗುರಿ ಮುಟ್ಟಿ ಗಣನೀಯ ಪ್ರಗತಿ ಸಾಧಿಸಿದೆ. ಅಂತರಿಕವಲ್ಲದ ಕೆಲವು ಸಮಸ್ಯೆಗಳಿಂದ ಸಂಘವು ಇತ್ತೀಚಿನ ಪ್ರಗತಿ ಕುಂಟಿತವಾಗಿದೆ. ಸಂಘವು ಎದುರಿಸುತ್ತಿರುವ ಸಮಸ್ಯೆಗಳನ್ನು ಕೆಳಗೆ ವಿಸ್ತರಿಸಲಾಗಿದೆ.

೧) ಸಂಘಕ್ಕೆ ಸಮಂಜಸವಾದ ವಿದ್ಯುತ್ ದರ ನಿಗಧಿ ಪಡಿಸುವದು :

ಸಂಘದ ವಿದ್ಯುತ್ ಖರೀದಿ ದರವನ್ನು ಕೆ.ಇ.ಆರ್.ಸಿ. ಯವರು ಸರಕಾರದ ಸಹಯೋಗದೊಂದಿಗೆ ನಿಗಧಿ ಪಡಿಸುತ್ತಾರೆ. ಅಂದರೆ ಸಂಘದ ವಿದ್ಯುತ್ ಗ್ರಾಹಕರ ದರಗಳು ರಾಜ್ಯದ ಇತರ ವಿದ್ಯುತ್ ಗ್ರಾಹಕರ ದರಗಳಿಗೆ ಸಮಾನವಾಗಿವೆ. ಸಂಘಕ್ಕೆ ನಿಗಧಿ ಪಡೆಸಿದ ವಿದ್ಯುತ್ ಖರೀದಿ ದರ ಮತ್ತು ಗ್ರಾಹಕರ ದರಗಳನ್ನು ಕೆ.ಇ.ಆರ್.ಸಿ. ಯವರು ನಿಗಧಿ ಪಡಿಸಿರುತ್ತಾರೆ. ವಿದ್ಯುತ್ ಗ್ರಾಹಕರಿಂದ ಸಂಘಕ್ಕೆ ಬರುವ ಆದಾಯವು, ಹೆಸ್ಕಾಂಗೆ ಸಂಘವು ವಿದ್ಯುತ್ ಪೂರೈಕೆಗಾಗಿ ಕೊಡಬೇಕಾದ ಒಟ್ಟಾರೆ ವೆಚ್ಚ ಮತ್ತು ಸಂಘದ ಆಡಳಿತಾತ್ಮಕ ಮತ್ತು ಇತರೆ ವೆಚ್ಚಗಳನ್ನು ತೂಗಿಸಿಕೊಂಡು ಹೋಗುವಷ್ಟರ ಮಟ್ಟಿಗಾದರೂ ಇರಬೇಕಾಗುತ್ತದೆ. ಸಂಘದ ಒಟ್ಟಾರೆ ಆದಾಯವು ಸಂಘದ ಒಟ್ಟಾರೆ ಖರ್ಚಿಗಿಂತ ಹೆಚ್ಚಾಗಿರಬೇಕಾದುದು ಉತ್ತಮ.

ಇತ್ತೀಚಿಗೆ ಸಂಘದ ಆದಾಯಕ್ಕಿಂತ ಕೆ.ಇ.ಆರ್.ಸಿ.ಯವರ ವಿದ್ಯುತ್ ಬಿಲ್ಲ ಅಧಿಕವಾಗಿದೆ. ವಿದ್ಯುತ್ ಗ್ರಾಹಕರಿಂದ ಸಂಘಕ್ಕೆ ಬರಬೇಕಾದ ಆದಾಯ ಕೇವಲ ೩೦ ಪ್ರತಿಶತ ವಿದ್ಯುತ್ ಹಂಚಿಕೆಯಿಂದ ಬರುತ್ತಿದ್ದು, ನೀರಾವರಿ ಪಂಪಸೆಟ್‌ಗಳಿಗೆ ಒದಗಿಸುವ ವಿದ್ಯುತಿನಿ ಆದಾಯ ಸನ್ ೧೯೯೫ ರ ವರೆಗೆ ಪ್ರತಿ ಯುನಿಟ್ಟಿಗೆ ೫ ಪೈಸೆ ಮಾತ್ರ ಇದ್ದು, ನಂತರ ೧೦ ಎಚ್.ಪಿ. ವರೆಗಿನ ನೀರಾವರಿ ಪಂಪಸೆಟ್‌ಗಳಿಗೆ ಪುಕ್ಕಟೆ ವಿದ್ಯುತ್ ಪೂರೈಸಬೇಕಾಗಿರುವುದರಿಂದ ಈ ಕುರಿತಾದ ಆದಾಯ ಶೂನ್ಯವಾಗಿರುತ್ತದೆ. ಸಂಘದ ಉಳಿತಾಯ ಮತ್ತು ಹಾನಿಯನ್ನು ಕೋಷ್ಟಕ ೪.೪. ರಲ್ಲಿ ತೋರಿಸಲಾಗಿದೆ. ಸನ್ ೧೯೭೦-೭೧ ರಲ್ಲಿ ೪೮,೪೭೨.೩೨ ರೂ ಹಾನಿ ಇದ್ದರೆ, ೧೯೯೯-೨೦೦೦ ರಲ್ಲಿ ೩,೯೪,೭೨,೭೩೪.೩೦ ರೂ ಹಾನಿ ಇದ್ದಿತ್ತು. ಪ್ರಸ್ತುತ ೨೦೦೭-೦೮ ರಲ್ಲಿ ೧೫,೬೧,೩೦,೩೪೫.೦೦ ರೂ ಹಾನಿಯನ್ನು ಎದುರಿಸುತ್ತಿದೆ. ಇದರಿಂದ ಸಂಘವು ಪ್ರತಿವರ್ಷ ಹಾನಿಯನ್ನು ಎದುರಿಸುತ್ತದೆ.

[illegible]

[illegible]

[illegible]

[illegible]

[illegible]

ಕೋಷ್ಟಕ ೪.೪
ಸಂಘದ ಉಳಿತಾಯ ಮತ್ತು ಹಾನಿಯ ಒಂದು ನೋಟ

ಕ್ರಸಂ	ವರ್ಷ	ಲಾಭ ಮತ್ತು ಹಾನಿ
೦೧	೧೯೭೦-೦೧	ಹಾನಿ ರೂ ೪೮,೪೭೨.೩೨
೦೨	೧೯೭೪-೭೫	--
೦೩	೧೯೭೯-೮೦	ಹಾನಿ ರೂ ೨೧,೪೮,೯೮೯.೮೬
೦೪	೧೯೮೪-೮೫	--
೦೫	೧೯೮೯-೯೦	--
೦೬	೧೯೯೪-೯೫	--
೦೭	೧೯೯೯-೨೦೦೦	ಹಾನಿ ರೂ ೩,೯೪,೭೨,೭೩೪.೩೦
೦೮	೨೦೦೦-೦೧	ಹಾನಿ ರೂ ೪,೮೦,೭೮,೮೧೪.೦೮
೦೯	೨೦೦೧-೦೨	ಹಾನಿ ರೂ ೧,೦೩,೯೦,೯೬೫.೫೭
೧೦	೨೦೦೨-೦೩	ಉಳಿತಾಯ ರೂ ೧,೮೦,೭೬,೧೧೭.೫೬
೧೧	೨೦೦೩-೦೪	ಉಳಿತಾಯ ರೂ ೩೪೨,೪೦,೭೬೦.೯೩
೧೨	೨೦೦೪-೦೫	ಹಾನಿ ರೂ ೧,೩೭,೪೬,೯೬೨.೬೩
೧೩	೨೦೦೫-೦೬	ಹಾನಿ ರೂ ೮೯,೯೭,೯೦೫.೭೧
೧೪	೨೦೦೬-೦೭	ಹಾನಿ ರೂ ೭,೮೨,೬೨,೯೨೮.೭೭
೧೫	೨೦೦೭-೦೮	ಹಾನಿ ರೂ ೧೫,೬೧,೩೦,೩೪೫.೦೦

ಆಧಾರ : ಸಂಘದ ವಾರ್ಷಿಕ ಮತ್ತು ಅಡಾವೆ ಪತ್ರಿಕೆ ವರದಿಗಳು.

೨) ಹುಕ್ಕೇರಿ ತಾಲೂಕಿನಲ್ಲಿ ವಿದ್ಯುತ್ ಪೂರೈಕೆ ಸಾಮರ್ಥ್ಯವನ್ನು ಹೆಚ್ಚಿಸುವುದರ ಅವಶ್ಯಕತೆ :

ಹುಕ್ಕೇರಿ ತಾಲೂಕಿನ ಸಂಘದ ಕನೆಕ್ಟಡ ಲೋಡ ೧೧೦ ಎಂ.ವಿ.ಎ. ಗಳಷ್ಟಿದ್ದು, ಆದರೆ ಈಗಿನ ವಿದ್ಯುತ್ ವಿತರಣಾ ಕೇಂದ್ರಗಳ ಸಾಮರ್ಥ್ಯ ೮೫ ಎಂ.ವಿ.ಎ. ಗಳಷ್ಟಿದೆ. ಈಗಾಗಲೇ ತಾಲೂಕಿನ ಎಲ್ಲ ವಿದ್ಯುತ್ ವಿತರಣಾ ಕೇಂದ್ರಗಳ ಫೀಡರಗಳು ಓವ್ಹರ ಲೋಡ ಆಗಿರುತ್ತವೆ. ಈ ಎಲ್ಲ ಕೇಂದ್ರಗಳ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿದರು ಗ್ರಾಹಕರಿಗೆ ನಿಯಮಿತವಾಗಿ ವಿದ್ಯುತ್ ಪೂರೈಕೆ ಸಾಧ್ಯವಾಗುತ್ತಿಲ್ಲ. ಅನಿಯಮಿತ ನಿಲುಗಡೆಯಿಂದ ಗ್ರಾಹಕರು ಹೆಚ್ಚಾಗಿ ನೀರಾವರಿ ಪಂಪಸೆಟ್ ಹೊಂದಿದ್ದ ರೈತರು ಮತ್ತು ಕೈಗಾರಿಕೆದಾರರು ಅಸಮರ್ಪಕ ವಿದ್ಯುತ್ ಪೂರೈಕೆಯಿಂದ ಅಸಂತೋಷ ಹೊಂದಿದ್ದು, ಪ್ರತಿರೋಧ ವ್ಯಕ್ತಪಡಿಸುತ್ತಿದ್ದಾರೆ. ಆದ್ದರಿಂದ ಈಗಾಗಲೇ ಮಂಜೂರಾದ ಮತ್ತು ನಿಯೋಜಿತ ಮತ್ತು ಗ್ರಾಹಕರ ಬೇಡಿಕೆಗನುಗುಣವಾಗಿ ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸವದು ಅವಶ್ಯವಾಗಿದೆ.

೩) ಸರಕಾರದ ಯೋಜನೆಗಳ ಅನುಷ್ಠಾನಕ್ಕೆ ಸರಕಾರದಿಂದ ಧನ ಸಹಾಯ ಒದಗಿಸುವದು :

ಸರಕಾರದ ವಿದ್ಯುತ್ ಯೋಜನೆಗಳಾದ **"ಜನತಾ ವೈರಿಂಗ ಯೋಜನೆ"** ಇದ್ದು, ಇದಕ್ಕೆ ಗ್ರಾಮೀಣ ವಿದ್ಯುತಿಕರಣ ಮಹಾಮಂಡಳಿ ಹೊಸದಿಲ್ಲಿ ಇವರು ಕೊಡಮಾಡಿದ ೨ ಲಕ್ಷ ರೂ ಅನುದಾನವನ್ನು ಈಗಾಗಲೇ ಸನ್ ೧೯೭೨ ರ ಪೂರ್ವದಲ್ಲಿ ವಿನಿಯೋಗಿಸಲಾಗಿದೆ. ಅದರಂತೆ ಸನ್

[illegible]

೧೯೯೩ ರ ಹೊತ್ತಿಗೆ ಭಾಗ್ಯಜ್ಯೋತಿ ಯೋಜನೆ ಬಂದಿತು. ತಾಲೂಕಿನಲ್ಲಿ ಅನುಷ್ಠಾನಗೊಳಿಸಲು ೪ ಲಕ್ಷ ರೂ ಗಳನ್ನು ಒದಗಿಸಲು ಬೆಳಗಾವಿ ಜಿಲ್ಲಾ ಪರಿಷತ್ತ ಸಚಿವಾಲಯಗಳ ಮುಖಾಂತರ ಪ್ರಸ್ತಾವ ಸಲ್ಲಿಸಿದರು. ಸರಕಾರವು ಅನುದಾನ ಬಿಡುಗಡೆಗೊಳಿಸದೇ ಇದ್ದುದ್ದರಿಂದ ಈ ಯೋಜನೆ ಅನುಷ್ಠಾನ ಸಾಧ್ಯವಾಗಿಲ್ಲ. ಈಗ ಸದ್ಯ ರಾಜೀವ ಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯನ್ನು ಸರಕಾರ ಬಡತನ ರೇಖೆಗಿಂತ ಕೆಳಗಿರುವ ಫಲಾನುಭವಿಗಳಿಗೆ ಉಚಿತ ವಿದ್ಯುತ್ ಸಂಪರ್ಕ ಕಲ್ಪಿಸುವ ಸಲುವಾಗಿ ಸಂಘಕ್ಕೆ ೭.೨೧ ಕೋಟಿ ರೂ ಮಂಜೂರಾಗಿದ್ದು. ೧೪,೦೭೦ ಫಲಾನುಭವಿಗಳಿಗೆ ಉಚಿತ ವಿದ್ಯುತ್ ದೊರೆಯಲಿದೆ. ಆದರೆ ಕರ್ನಾಟಕ ಸರಕಾರದ ಇಂಧನ ಇಲಾಖೆ ಗ್ರಾಮೀಣ ವಿದ್ಯುತ್ತೀಕರಣ ಮಹಾಮಂಡಳ ಹೊಸದಿಲ್ಲಿ ಹಾಗೂ ಸಂಘದ ತ್ರೀ ಪಕ್ಷಿಯ ಒಪ್ಪಂದ ಅವಶ್ಯವಿದ್ದು, ಅದು ನೆರವೇರದೇ ಇನ್ನೂ ಯೋಜನೆ ಅನುಷ್ಠಾನಗೊಂಡಿಲ್ಲ.

೪) ಕರ್ನಾಟಕ ಸರಕಾರದಿಂದ ಪಂಚಾಯತಿ ಬೀದಿದೀಪ ಮತ್ತು ನೀರು ಸರಬರಾಜು ಯೋಜನೆಗಳಿಂದ ಬರತಕ್ಕ ವಿದ್ಯುತ್ ಬಾಕಿ ಮತ್ತು ವಸೂಲಾತಿ :

ಸಂಘಕ್ಕೆ ೧೯೯೯ ನೇ ತಿಂಗಳ ಕೊನೆಗೆ ತಾಲೂಕಿನಲ್ಲಿಯ ಮಂಡಳ ಪಂಚಾಯತಿಗಳಿಂದ ರೂ. ೫.೧೭ ಲಕ್ಷ ಹಾಗೂ ೨ ಪುರಸಭೆಗಳಿಂದ ರೂ. ೧೧.೫೭ ಲಕ್ಷಗಳ ವಿದ್ಯುತ್ ಬಾಕಿಯು ಅವುಗಳ ದಾರಿ ದೀಪ ಮತ್ತು ಕುಡಿಯುವ ನೀರಿನ ಯೋಜನೆಗಳಿಂದ ವಿದ್ಯುತ್ ಒದಗಿಸಿದ್ದಕ್ಕಾಗಿ ಬರಬೇಕಾಗಿತ್ತು. ಅದು ಈಗ ಸನ್ ಮಾರ್ಚ ೨೦೦೮ ರ ಹೊತ್ತಿಗೆ ಒಟ್ಟಾಗಿ ೩೨,೨೦,೪೬೭-೦೦ ರೂ ಗಳಿಗೆರಿದೆ. ಕಾನೂನು ರೀತಿಯಿಂದ ಸಂಘವು ವಿದ್ಯುತ್‌ನ್ನು ನಿಲುಗಡೆಗೊಳಿಸಿದರೆ ನಾಗರಿಕರು ಮತ್ತು ಜನ ನಾಯಕರು ಪ್ರತಿರೋಧ ವ್ಯಕ್ತ ಮಾಡುತ್ತಾರೆ. ಹೊರತಾಗಿ ವಿದ್ಯುತ್ ಬಾಕಿ ಹಣ ಸಂದಾಯವಾಗುತ್ತಿಲ್ಲ.

೫) ಸರಕಾರದಿಂದ ಬರಬೇಕಾದ ರೂ ೧೨.೭೩ ಲಕ್ಷ ಬಡ್ಡಿ ಮತ್ತು ಸರಕಾರಕ್ಕೆ ಕೊಡಬೇಕಾದ ಬಡ್ಡಿ ೧೧.೬೧ ಲಕ್ಷಗಳ ಬಗ್ಗೆ :

ಸಂಘಕ್ಕೆ ತಾಲೂಕಿನಲ್ಲಿ ಮಾರ್ಚ ೧೯೮೭ ಕ್ಕಿಂತ ಪುರ್ವದಲ್ಲಿದ್ದ, ಗ್ರಾಮ ಮತ್ತು ಪಟ್ಟಣ ಪಂಚಾಯತಿಗಳ ದಾರಿ ದೀಪ ಮತ್ತು ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಒದಗಿಸಿದ್ದ ಪರಿಣಾಮವಾಗಿ ಸರಕಾರದಿಂದ ಬರಬೇಕಾದ ಬಾಕಿ ಹಣ ೧೭.೬೬ ಲಕ್ಷ ರೂ ಗಳನ್ನು ಮಾರ್ಚ ೧೯೯೦ ರಲ್ಲಿ ಸರಕಾರವು ಭರಣಾ ಮಾಡಿದ್ದು, ಮೇಲಿನ ಬಡ್ಡಿ ೧೨.೭೩ ಲಕ್ಷ ರೂ ಗಳನ್ನು ತುಂಬಿರುವದಿಲ್ಲ. ಇದರ ಪರಿಣಾಮವಾಗಿ ಸಂಘವು ಮೇ ೧೯೮೬ ರಿಂದ ನವ್ಹೆಂಬರ ೧೯೮೭ ರ ವರೆಗಿನ ಸರಕಾರಕ್ಕೆ ತೂಬಬೇಕಾದ ತೇರಿಗೆ ಹಣ ೧೫,೮೯ ಲಕ್ಷಗಳಷ್ಟನ್ನು ಸಂಘದಲ್ಲಿಯೇ ಉಳಿಸಿಕೊಂಡಿತ್ತು. ಈ ಅವಧಿಯಲ್ಲಿ ಗ್ರಾಮ ಮತ್ತು ಪಟ್ಟಣ ಪಂಚಾಯತಿಗಳ ವಿದ್ಯುತ್ ಬಾಕಿಯು ಸರಕಾರದಿಂದ ಬರಬೇಕಾದ ಹಣ ೨೦.೨೨ ಲಕ್ಷ ರೂ ಗಳಾಗಿತ್ತು. ಕೊನೆಗೆ ಮಾರ್ಚ ೧೯೯೦ ರಲ್ಲಿ ಸರಕಾರದಿಂದ ಬರಬೇಕಾದ ಬಾಕಿ ೩೦.೩೯ ಲಕ್ಷ ಬಡ್ಡಿ ಸೇರಿ ಬಂದಿತ್ತು. ಕೂಡಲೇ ಸಂಘವು ಸರಕಾರಕ್ಕೆ ಕೊಡಬೇಕಾದ ೧೫.೮೯ ಲಕ್ಷ ರೂಗಳ ಹಣವನ್ನು ತುಂಬಲಾಯಿತು. ಆದರೆ ಸರಕಾರ ಈ

ಹಣದ ಮೇಲಿನ ಬಡ್ಡಿ ೧೧.೬೧ ಲಕ್ಷ ರೂ ಗಳನ್ನು ತುಂಬಲು ಸಂಘಕ್ಕೆ ತಿಳಿಸಲಾಗಿದೆ. ಆದರೆ ಸಂಘದ ಅಭಿಪ್ರಾಯವೆನೆಂದರೆ, ಸಂಘಕ್ಕೆ ಬರಬೇಕಾದ ೧೨.೭೩ ಲಕ್ಷ ರೂಗಳ ಹಣ ಬಂದ ನಂತರ ಆ ತೇರಿಗೆ ಬಾಕಿ ಹಣದ ಮೇಲಿನ ಬಡ್ಡಿ ರೂ. ೧೧.೬೧ ಲಕ್ಷ ಗಳನ್ನು ತುಂಬಲಾಗುವದು. ಈ ರೀತಿ ಹಣದ ಹೊಂದಾಣಿಕೆಯು ಇವತ್ತಿನವರೆಗಿಯೂ ಹೋಂದಾಣಿಕೆ ಆಗದೇ ಉಳಿದಿದೆ.

೬) ಸಂಘವು ವಿದ್ಯುತ್ ಹಾನಿಯನ್ನು ಎದುರಿಸುತ್ತಿರುವ ಸಮಸ್ಯೆ :

ಸಂಘವು ತಾನು ಖರೀದಿ ಮಾಡಿದ ಪ್ರತ್ಯಕ್ಷ ವಿದ್ಯುತ್ ಯುನಿಟ್‌ಗಳಿಗಿಂತ ಪ್ರತ್ಯಕ್ಷ ವಿತರಿಸಿದ ವಿದ್ಯತ್ ಯುನಿಟ್‌ಗಳು ಕಡಿಮೆಯಾಗಿವೆ. ಅಂದರೆ ಸಂಘವು ವಿದ್ಯುತ್‌ಹಾನಿಯನ್ನು (ಲೈನ್‌ಲಾಸ್) ಎದುರಿಸುತ್ತಿದೆ. ಇದನ್ನು ಕೋಷ್ಟಕ ೪.೫ ರಿಂದ ತಿಳಿದುಕೊಳ್ಳಬಹುದು.

ಕೋಷ್ಟಕ ೪.೫

ಸಂಘವು ಖರೀದಿಸಿದ ಪ್ರತ್ಯಕ್ಷ ವಿದ್ಯುತ್ ಯುನಿಟ್ಟ್‌ಗಳು ಮತ್ತು ಸಂಘವು ವಿತರಣೆ ಮಾಡಿದ ಪ್ರತ್ಯಕ್ಷ ಯುನಿಟ್ಟ್‌ಗಳು

ಕ್ರ.ಸಂ	ವರ್ಷ	ಪ್ರತ್ಯಕ್ಷ ಖರೀದಿಸಿದ ವಿದ್ಯುತ್ ಯುನಿಟ್‌ಗಳು	ಪ್ರತ್ಯಕ್ಷ ವಿತರಿಸಿದ ವಿದ್ಯುತ್ ಯುನಿಟ್‌ಗಳು	ವಿದ್ಯುತ್ ಹಾನಿ	ಪ್ರತಿಶತ ವಿದ್ಯುತ್ ಹಾನಿ
೦೧	೧೯೮೪-೮೫	೩೨,೫೩,೨೩,೮೭	೨,೨೭,೫೧,೬೨೪	೯೭,೮೦,೭೬೩	೩೦.೬%
೦೨	೧೯೮೯-೯೦	೫,೮೭,೭೮,೧೨೪	೪,೫೦,೮೪,೩೮೩	೧,೩೬,೯೩,೭೪೧	೨೩.೩೦%
೦೩	೧೯೯೪-೯೫	೮,೦೪,೧೯,೮೧೧	೭,೦೫,೪೩,೩೦೮	೯೮,೭೬,೫೦೩	೧೨.೨೮%
೦೪	೧೯೯೯-೨೦೦೦	೧೩,೦೩,೧೮,೭೯೭	೧೦,೬೫,೫೯,೮೨೨	೨,೩೭,೫೮,೯೭೫	೧೮.೨೩%
೦೫	೨೦೦೦-೦೧	೧೩,೪೪,೩೦,೯೯೭	೧೧,೧೬,೨೪,೫೨೮	೨,೨೮,೦೬,೪೬೯	೧೬.೯೬%
೦೬	೨೦೦೧-೦೨	೧೩,೫೪,೬೪,೬೮೬	೧೧,೩೧,೨೭,೬೪೧	೨,೨೩,೩೭,೦೪೫	೧೬.೪೯%
೦೭	೨೦೦೨-೦೩	೧೩,೪೩,೭೯,೩೧೧	೧೧,೩೩,೭೮,೭೩೭	೨,೧೦,೦೦,೫೭೪	೧೫.೬೩%
೦೮	೨೦೦೩-೦೪	೧೩೩೯೪೮೨೦೪	೧೧೩೬೨೪೯೩೨	೨೦೩೨೩೨೭೨	೧೫.೧೭%
೦೯	೨೦೦೪-೦೫	೧೪,೮೨,೪೧,೬೨೨	೧,೨೫,೧೮,೯೦	೨,೩೦,೫೪,೬೩೨	೧೫.೫೫%
೧೦	೨೦೦೫-೦೬	೧೪,೮೮,೬೦,೧೯೭	೧೨,೬೪,೭೨,೦೫೬	೨,೨೩,೮೮,೧೪೧	೧೫.೦೪%
೧೧	೨೦೦೬-೦೭	೧೮,೩೭,೦೮,೬೬೨	೧೫,೫೪,೦೫,೫೮೭	೨,೮೩,೦೩,೦೭೫	೧೫.೪೧%

ಆಧಾರ : ಸಂಘದ ವಾರ್ಷಿಕ ಮತ್ತು ಅಥಾವೆ ಪತ್ರಿಕೆಗಳ ವರದಿಗಳು

ವಿದ್ಯುತ್ ಹಾನಿಯು ೧೯೮೪-೮೫ ರಲ್ಲಿ ೯೭,೮೦,೭೬೩ ಯುನಿಟ್ಟ್‌ಗಳು ಅಂದರೆ ಪ್ರತಿಶತ ೩೦.೬ ಇದ್ದದ್ದು ೧೯೯೯-೨೦೦೦ ರಲ್ಲಿ ೨,೩೭,೫೮,೯೭೫ ಯುನಿಟ್ಟ್‌ಗಳು ಅಂದರೆ ಪ್ರತಿಶತ ೧೮.೨೩ ವಿದ್ಯುತ್ ಹಾನಿ ಇತ್ತು. ಈಗ ೨೦೦೬ ಮತ್ತು ೨೦೦೭ ರಲ್ಲಿ ೨,೮೩,೦೩,೦೭೫ ಯುನಿಟ್ಟ್‌ಗಳು ಅಂದರೆ ಪ್ರತಿಶತ ೧೫.೪೧ ವಿದ್ಯುತ್ ಹಾನಿಯನ್ನು ಸಂಘವು ಎದುರಿಸುತ್ತಿದೆ. ಸಂಘವು ಪ್ರಾರಂಭದ ದಿನಗಳಲ್ಲಿ ಹೆಚ್ಚು ವಿದ್ಯುತ್ ಹಾನಿಯನ್ನು ಎದುರಿಸುತ್ತಿದರೆ ಅದು ಇತ್ತಿಚೀನ ದಿನಗಳಲ್ಲಿ ಕಡಿಮೆಯಾದರೂ ಸಹ ಸಂಪೂರ್ಣವಾಗಿ ಅದನ್ನು ತಡೆಗಟ್ಟಲು ಆಗುತ್ತಿಲ್ಲ.

೪.೬ ಸಂಘದ ಗ್ರಾಹಕರಿಂದ ವಿದ್ಯುತ್ ಬಾಕಿ ಹಣ ವಸೂಲಿಗೆ ಕೈಗೊಂಡ ಕ್ರಮಗಳು :

ಸಂಘದ ಗ್ರಾಹಕರ ವಿದ್ಯುತ್ ಬಾಕಿ ಹಣವು ಹೆಚ್ಚುತ್ತಾ ಹೊದಂತೆ ಸಂಘದ ಕಾರ್ಯ ಚಟುವಟಿಕೆಗಳನ್ನು ಸುಗಮವಾಗಿ ನಡೆಸಲು ತೊಂದರೆಯಾಗುತ್ತದೆ. ಸಂಘದ ಗ್ರಾಹಕರ ವಿದ್ಯುತ್ ಬಾಕಿಯ ವಿವರಣೆಯನ್ನು ಕೋಷ್ಟಕ ೪.೬ ರಲ್ಲಿ ತೋರಿಸಲಾಗಿದೆ.

ಕೋಷ್ಟಕ ೪.೬

ಸಂಘದ ವಿದ್ಯುತ್ ಪೂರೈಕೆಯಿಂದ ಬರತಕ್ಕ ಗ್ರಾಹಕರ ಬಾಕಿ ಹಣ

ಕ್ರಸಂ	ವರ್ಷ	ಬರತಕ್ಕ ಬಾಕಿ ಹಣ (ಲಕ್ಷ ರೂ ಗಳಲ್ಲಿ)	ಹಿಂದಿನ ವರ್ಷಗಳಿಂದ ಪ್ರತಿಶತ ಬದಲಾವಣೆ
೦೧	೧೯೭೦-೭೧	೧.೫೭	--
೦೨	೧೯೭೪-೭೫	೨.೩೭	೫೦.೫೦
೦೩	೧೯೭೯-೮೦	೯.೩೭	೩೧೦.೨೧
೦೪	೧೯೮೪-೮೫	೧೬.೭೧	೭೧.೬೯
೦೫	೧೯೮೯-೯೦	೩೬.೩೩	೧೧೭.೪೦
೦೬	೧೯೯೪-೯೫	೧೦೧.೩೬	೧೭೯.೦೦
೦೭	೧೯೯೯-೨೦೦೦	೩೬೫.೫೦	೨೬೦.೫೯
೦೮	೨೦೦೦-೦೧	೫೧೨.೦೦	೪೦.೦೮
೦೯	೨೦೦೧-೦೨	೫೬೮.೨೨	೧೦.೯೮
೧೦	೨೦೦೨-೦೩	೧೦೩೨.೪೬	೮೧.೭೦
೧೧	೨೦೦೩-೦೪	೧೮೮೧.೦೪	೮೨.೧೯
೧೨	೨೦೦೪-೦೫	೨೮೮೪.೧೦	೫೩.೩೨
೧೪	೨೦೦೫-೦೬	೩೬೭೧.೩೮	೨೪.೮೭
೧೫	೨೦೦೬-೦೭	೩೧೧೯೬.೨೧	೭೬೬.೨೨
೧೬	೨೦೦೭-೦೮	೪೧೮೨.೯೦	೧೧೮.೬೪

ಆಧಾರ : ಸಂಘದ ವಾರ್ಷಿಕ ಮತ್ತು ಅಡಾವೆ ಪತ್ರಿಕೆಗಳ ವರದಿ.

ಸನ್ ೧೯೭೦-೭೧ ರಲ್ಲಿ ೧.೫೭ ಲಕ್ಷ ರೂಗಳ ವಿದ್ಯುತ್ ಬಾಕಿ ಇದ್ದದ್ದು ಸನ್ ೧೯೭೯-೮೦ ಕ್ಕೆ ೯.೭೩ ಲಕ್ಷ ರೂಗಳು, ಹಿಂದಿನ ವರ್ಷಗಳಿಂದ ಪ್ರತಿಶತ ೩೧೦.೨೧ ಹೆಚ್ಚಾದರೆ, ಸನ್ ೧೯೯೯-೨೦೦೦ ಕ್ಕೆ ೩೬೫.೫೦ ಲಕ್ಷ ರೂಗಳು ಹಿಂದಿನ ವರ್ಷಗಳಿಂದ ಪ್ರತಿ ಶತ ೨೬೦.೫೯ ಹೆಚ್ಚಾದರೆ, ಸನ್ ೨೦೦೪-೦೫ ಕ್ಕೆ ೨೮೮೪.೧೦ ಲಕ್ಷ ರೂಗಳು ಹಿಂದಿನ ವರ್ಷದಿಂದ ಪ್ರತಿಶತ ೫೩.೩೨ ಹೆಚ್ಚಾದರೆ ಈಗ ೨೦೦೭-೦೮ ಕ್ಕೆ ೪೧೮೨.೯೦ ಲಕ್ಷ ರೂಗಳು ಹಿಂದಿನ ವರ್ಷದಿಂದ ಪ್ರತಿಶತ ೧೧೮.೬೪ ಏರಿದೆ. ಅಂದರೆ ಸಂಘದ ವಿದ್ಯುತ್ ಬಾಕಿಯು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಾ ಹೋಗುತ್ತಿದೆ.

ಆದ್ದರಿಂದ ಈ ಮೇಲೆ ತೋರಿಸಿದಂತೆ ವಿದ್ಯುತ್ ಬಾಕಿಯ ಹಣ ವಸೂಲಿಗಾಗಿ ಸಂಘವು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳುತ್ತಿದೆ.

೧. ಸಂಘವು ತನ್ನ ಗ್ರಾಹಕರ ವಿದ್ಯುತ್ ಬಿಲ್ಲಗಳನ್ನು ಮುಂಚಿತವಾಗಿ ಒಂದು ವಾರ ಕಾಲಾವಕಾಶದೊಂದಿಗೆ ಗ್ರಾಹಕರಿಗೆ ಕಳುಹಿಸಲಾಗುತ್ತದೆ. ಆ ಗ್ರಾಹಕರು ನಿಗಧಿತ ದಿನಾಂಕದೊಳಗೆ ಬಿಲ್ಲ ಪಾವತಿಸಲು ತಪ್ಪಿದರೆ ಮತ್ತೆ ಕೊನೆಯ ದಿನಾಂಕದಿಂದ ೭ ದಿನಗಳ ನೋಟೀಸ್ ಅಂತಾ ದಂಡದೊಂದಿಗೆ ಕಾಲಾವಕಾಶ ಕೊಡುತ್ತದೆ. ಅದರಲ್ಲಿಯು ತಪ್ಪಿದ ಗ್ರಾಹಕರ ಲಗತ್ತನ್ನು ಸಂಘದ ಕಾರ್ಯಾಲಯದಲ್ಲಿ ತಯಾರಿಸಿ ಪ್ರತಿ ಹಳ್ಳಿಯ ಲೈನ್‌ಮ್ಯಾನ್‌ಗಳಿಗೆ ಕಳುಹಿಸಿ ಕೊಡಲಾಗುತ್ತದೆ. ಅಂತಹ ಗ್ರಾಹಕರ ವಿದ್ಯುತ್ ಜೊಡಣೆಗಳನ್ನು ನಿಲುಗಡೆಗೊಳಿಸಲಾಗುತ್ತದೆ. ಮತ್ತು ಆ ಬಾಕಿ ಹಣಕ್ಕೆ ಬಡ್ಡಿಯನ್ನು ಸೇರಿಸಿ ವಸೂಲಿ ಮಾಡಲಾಗುತ್ತದೆ.

೨. ಸಂಘದಲ್ಲಿ ತಪಾಸಣಾ ನೀರಿಕ್ಷಕರು (ವ್ಹಿಜಿಲನ್ಸ ಇನಸ್ಪೆಕ್ಟರ) ಅಂತಾ ಒಬ್ಬ ಅಧಿಕಾರಿ ಇದ್ದು, ಅವನು ತನ್ನ ೬ ಜನ ಸಿಬ್ಬಂದಿಯೊಂದಿಗೆ ಅನಧಿಕೃತ ವಿದ್ಯುತ್ ಜೋಡಣೆಗಳ ಮೇಲೆ ದಾಳಿ ಮಾಡಿ ಆ ವಿದ್ಯುತ್ ಸಲಕರಣೆಗಳನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಾರೆ. ಅದಲ್ಲದೆ ಅಂತಹ ವ್ಯಕ್ತಿಗಳಿಗೆ ದಂಡವನ್ನು ವಿಧಿಸುತ್ತಾರೆ.

೩. ಪ್ರತಿ ಹಳ್ಳಿಗೆ ಲೈನ್‌ಮ್ಯಾನ್ ಅಂತಾ ಕಾರ್ಯ ನಿರ್ವಹಿಸುತ್ತಿದ್ದು, ಅವನು ತನ್ನ ಕಾರ್ಯಕ್ಷೇತ್ರದಲ್ಲಿ ವಿದ್ಯುತ್ ಬಾಕಿ ಇರುವ ಗ್ರಾಹಕರಿಗೆ ಹಣ ತುಂಬಲು ಬಿಗಿಯಾದ ಕ್ರಮ ಕೈಗೊಳ್ಳುತ್ತಾನೆ. ಅದಲ್ಲದೆ ಅನಧಿಕೃತವಾಗಿ ಯಾವುದೇ ವ್ಯಕ್ತಿ ವಿದ್ಯುತ್ತನ್ನು ಬಳಸುತ್ತಿದ್ದರೆ, ಅವನ ಮೇಲೆ ಬಿಗಿಯಾದ ಕ್ರಮ ಕೈಗೊಳ್ಳುತ್ತಾನೆ.

ಈ ರೀತಿಯಾಗಿ ಸಂಘದ ಬೀಗಿಯಾದ ಕ್ರಮದಿಂದ ವಿದ್ಯುತ್ ಬಾಕಿ ಹಣ ವಸೂಲಾಗುತ್ತದೆ. ಮತ್ತು ಸಂಸ್ಥೆಯು ತನ್ನ ಎಲ್ಲಾ ಕಾರ್ಯಗಳನ್ನು ನಿರ್ವಹಿಸಲು ಸಹಾಯಕಾರಿಯಾಗಿದೆ. ಏಕೆಂದರೆ ಸಂಘದ ಒಟ್ಟು ಜೋಡಣೆಗಳಲ್ಲಿ ಪ್ರತಿಶತ ೭೦ ರಷ್ಟು ನೀರಾವರಿ ಪಂಪ್‌ಸೆಟ್‌ಗಳ ಜೋಡಣೆಯ ವಿದ್ಯುತ್, ಸರಕಾರದ ನೀತಿಯಿಂದ ಪುಕ್ಕಟೆಯಾಗಿರುತ್ತದೆ. ಆದುದರಿಂದ ಪ್ರತಿಶತ ೩೦ ರಲ್ಲಿ ಬರುವ ವಿದ್ಯುತ್ ಆದಾಯದಲ್ಲಿ ಸಂಘವು ತನ್ನೆಲ್ಲ ಚಟುವಟಿಕೆಗಳನ್ನು ನಿಭಾಯಿಸಿಕೊಂಡು ಹೋಗಲು ಸಾದ್ಯವಾಗಿದೆ.

೪.೭ ಸಂಘದ ಇತರ ಸೇವೆಗಳು :-

ಸಂಘವು ತನ್ನ ಸದಸ್ಯರಿಗೆ ಹಲವಾರು ರೀತಿಯಿಂದ ಸೇವೆಯನ್ನು ಸಲ್ಲಿಸುತ್ತಿದೆ. ತನ್ನ ಗ್ರಾಹಕರಿಗೆ ಉತ್ತಮ ರೀತಿಯ ವಿದ್ಯುತ್ ಒದಗಿಸುವುದರ ಜೊತೆಗೆ ಕೆಳಗಿನ ಇತರ ಸೇವೆಗಳನ್ನು ಮಾಡುತ್ತದೆ.

ಅ. ಸಂಘವು ತನ್ನ ಕಾರ್ಯಕ್ಷೇತ್ರದಲ್ಲಿಯ ಕೆಲಸ ಕಾರ್ಯಗಳನ್ನು ಕೈಗೊಳ್ಳಲು ದಿನಾಲು ದಿನಗೂಲಿ ಕಾರ್ಮಿಕರನ್ನು ನೇಮಿಸಿಕೊಳ್ಳುತ್ತದೆ.

ಬ. ಗ್ರಾಹಕ ಸದಸ್ಯರ ಅವಶ್ಯಕತೆಗಣುಗುಣವಾಗಿ ಜಾತ್ರೆಗಳು, ಸಮಾರಂಭಗಳು, ಹಬ್ಬಗಳು ಮೊದಲಾದ ಕಾರ್ಯಕ್ರಮಗಳಿಗೆ ವಿದ್ಯುತ್‌ನ್ನು ಪೂರೈಸುತ್ತದೆ.

ಕ. ಸಂಘವು ಕೇವಲ ವಿದ್ಯುತ್ ವಿತರಣಾ ಕಾರ್ಯವಲ್ಲದೆ ಹಲವಾರು ಸಾಂಸ್ಕೃತೀಕ ಕ್ಷೇತ್ರಗಳಲ್ಲಿಯ ಪಾಲುಗಾರಿಕೆಯಾಗಿದೆ. ಅದರಂತೆ ಹಲವಾರು ಸಂಘಗಳಿಗೆ, ಸಹಕಾರಿ ಕ್ಷೇತ್ರದ ದುರೀಣರಿಗೆ ಸನ್ಮಾನ, ಬಹುಮಾನ, ಸಹಾಯಧನ ಮುಂತಾದವುಗಳ ರೂಪದಲ್ಲಿ ನೀಡಲಾಗುತ್ತದೆ.

ಡ. ಸಂಘವು ತನ್ನ ಎಲ್ಲ ದೈನಂದಿನ ವ್ಯವಹಾರಗಳನ್ನು ತ್ವರಿತವಾಗಿ ಕೈಗೊಳ್ಳಲಿಕ್ಕೆ ಗಣಕೀಕರಣ ವ್ಯವಸ್ಥೆಯನ್ನು ಹೊಂದಿದ್ದು ಅದು ವಿದ್ಯುತ್ ಗ್ರಾಹಕರಿಗೆ ವಿದ್ಯುತ್ ಬಿಲ್ಲ್‌ನ್ನು ನಿಗದಿತ ದಿನಾಂಕದೊಳಗೆ ತಲುಪಿಸಲು ಅನುಕೂಲಕಾರಿಯಾಗಿದೆ. ಹಾಗೂ ಸಂಘದ ಎಲ್ಲ ದಾಖಲಾತಿಗಳನಿಡಲು ಅನುಕೂಲಕಾರಿಯಾಗಿದೆ.

ಇ. ಸಂಘವು ಇಂಟರ್‌ನೆಟ್ (ಅಂತರಜಾಲ) ಸೇವೆಯನ್ನು ಹೊಂದಿದ್ದು, ತನಗೆ ಬೇಕಾದ ಹೆಸ್ಕಾಂ, ಕೆ.ಪಿ.ಟಿ.ಸಿ.ಎಲ್., ಕೆ.ಇ.ಆರ್.ಸಿ., ಮಹಿತಿಯನ್ನು ಪಡೆಯಲು ಅನುಕೂಲವಾಗಿದೆ.

ಈ. ಸಂಘವು ಸರಕಾರದ ಯಾವುದೇ ಯೋಜನೆಗಳು, ಅಂದರೆ ಕುಟೀರ ಜ್ಯೋತಿ, ಬಾಗ್ಯ ಜ್ಯೋತಿ, ರಾಜೀವ ಗಾಂಧಿ ಗ್ರಾಮೀಣ ವಿದ್ಯುದ್ದಿಕರಣ ಮೊದಲಾದ ಯೋಜನೆಗಳ ಅಡಿಯಲ್ಲಿ ಧನ ಸಹಾಯ ಬಂದರೆ, ಅಂತಹ ಫಲಾನುಭವಿಗಳ ಮನೆ ಬಾಗಿಲಿಗೆ ತನ್ನ ಸೇವೆಯನ್ನು ಕಲ್ಪಿಸುತ್ತದೆ.

ಉ. ಆಲಮಟ್ಟಿ ನೀರಿನಿಂದ ಬಾಗಲಕೊಟ ಪುನರ್‌ವಸತಿ ಕೇಂದ್ರಗಳಲ್ಲಿ ಗುತ್ತಿಗೆ ಆಧಾರದ ಮೇಲೆ ವಿದ್ಯುಚ್ಛಕ್ತಿ ಲಾಯನ್‌ಗಳ ರಚನೆಯನ್ನು ಮಾಡಿದೆ. ಹಾಗೂ ರನ್ನ ಶುಗರ್ಸ ಮುಧೋಳ ಮತ್ತು ಸೋಮೇಶ್ವರ ಶುಗರ್ಸ ಬೆಳವಡಿ ಪ್ಯಾಕ್ಟರಿಗಳಲ್ಲಿ ಲೈನ್ ನಿರ್ಮಾಣ ಕೆಲಸಗಳನ್ನು ಗುತ್ತಿಗೆ ಆಧಾರದ ಮೇಲೆ ಪಡೆದು ನಿಗಧಿತ ಸಮಯದಲ್ಲಿ ಪೂರ್ಣಗೊಳಿಸಿದೆ.

ಊ. ಸಂಘವು ತನ್ನ ಕಾರ್ಯಕ್ಷೇತ್ರದಲ್ಲಿಯ ಕೃಷಿಕರಿಗೆ ಹಾಗೂ ಇನ್ನಿತರ ಜನರಿಗೆ ಗುಡಿಸಲುಗಳ ನಿರ್ಮಾಣಕ್ಕೆ, ನಿವೇಶನಗಳ ನಿರ್ಮಾಣಕ್ಕೆ ಬೇಕಾಗುವ ಪೆನ್ನಿಂಗ್ ಕಂಬಗಳನ್ನು ಸಂಘದ ಕಂಬ ಉತ್ಪಾದನಾ ಘಟಕದಲ್ಲಿ ತಯಾರಿಸಿ ಕಡಿಮೆ ದರದಲ್ಲಿ ಮಾರಾಟ ಮಾಡುತ್ತದೆ.

ಎ. ಕೆಲವೊಂದು ಸಂದರ್ಭಗಳಲ್ಲಿ ವಿದ್ಯುತ್ ಗ್ರಾಹಕರಿಗೆ ಸಂಘದ ಬಾಕಿ ಹಣವನ್ನು ಕಂತುಗಳಲ್ಲಿ ತುಂಬಲು ಅನಕೂಲ ಮಾಡಿಕೊಡುತ್ತದೆ.

ಈ ರೀತಿಯಾಗಿ ಸಂಘವು ಸಮಾಜಕ್ಕೆ ಇತರೆ ಸೇವೆಗಳನ್ನು ಸಲ್ಲಿಸುತ್ತದೆ.

ಆಕರಗಳು :

೧. ಪೋಟ ನಿಯಮಗಳು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ ನಿಯಮಿತ, ಹುಕ್ಕೇರಿ (ತಿದ್ದುಪಡಿಗಳೊಂದಿಗೆ)

೨. ೧೦-೦೨-೦೮ ಕ್ಕೆ ಸಂಘದ ಮಾನ್ಯತೆ ಇರುವ ಮತ್ತು ಖಾಲಿ ಇರುವ ಸಿಂಬ್ಬಂದಿ ವರ್ಗದ ದಾಖಲಾತಿಗಳು

೩. ಚಿಕ್ಕೋಡಿ,ರಾಯಬಾಗ ಮತ್ತು ಗೋಕಾಕ ತಾಲೂಕುಗಳ ಹೆಸ್ಕಾಂ ವಿದ್ಯುತ್ ವಿತರಣಾ ಸಾಮರ್ಥ್ಯದ ದಾಖಲಾತಿಗಳು ೨೦೦೭-೦೮

೪. ಸಂಘದ ೧೯೭೦-೭೧ ರಿಂದ ೨೦೦೭-೦೮ ರ ವರೆಗಿನ ವಾರ್ಷಿಕ ಮತ್ತು ಅಧಾವೆ ಪತ್ರಿಕೆ ವರದಿಗಳು

ಅಧ್ಯಾಯ–೫

ಸಮಾರೋಪ

ಪರಿವಿಡಿ

ಅಧ್ಯಾಯ–೫

ಸಮಾರೋಪ

೫.೧ ಪ್ರಸ್ತಾವನೆ

೫.೨ ಸಲಹೆ ಸೂಚನೆಗಳು

ಅಧ್ಯಾಯ ೫
ಸಮಾರೋಪ

೫.೧ ಪ್ರಸ್ತಾವನೆ :

ಸಹಕಾರ ಚಳುವಳಿ ಮತ್ತು ಸಹಕಾರಿ ಸಂಘಗಳ ಕಾರ್ಯ ನಿರ್ವಹಣೆಯ ಬಗ್ಗೆ ವಿಧ್ವಾಂಸರು ಅಧ್ಯಯನಗಳನ್ನು ಭಾರತದಲ್ಲಿ ಕೈಗೊಂಡಿದ್ದಾರೆ. ಈ ಎಲ್ಲಾ ಅಧ್ಯಯನಗಳು, ಜನರ ಆರ್ಥಿಕ ಕಲ್ಯಾಣ ಬಿಂಬಿಸುವಲ್ಲಿ ಯಶಸ್ವಿಯಾಗಿವೆ. ಪ್ರಸ್ತುತ ಅಧ್ಯಯನವು ಸಹಕಾರಿ ಚಳುವಳಿಯಿಂದ ಜನರ ಸಾಮಾಜಿಕ ಆರ್ಥಿಕ ಮತ್ತು ಶೈಕ್ಷಣಿಕ ಬೆಳವಣಿಗೆ ಹೇಗೆ ಆಗುತ್ತಲಿವೆ ಹಾಗೂ ಜನರ ಈ ಚಳುವಳಿಯಲ್ಲಿ ತಮ್ಮನು ತಾವೇ ಹೇಗೆ ಅಳವಡಿಸಿಕೊಂಡಿದ್ದಾರೆ. ಎಂಬುದನ್ನು ತಿಳಿಯಲು ಪ್ರಯತ್ನಿಸಲಾಗಿದೆ. ಬಡತನ, ಅಜ್ಞಾನ, ಜಾತೀಯತೆ, ಅಪ್ರಭುದ್ದತೆ ಇದ್ದಾಗಿಯು ಸಹ, ಜನರು ಅವುಗಳನ್ನು ಬದಿಗೊತ್ತಿ ಸಹಕಾರಿ ಚಳುವಳಿಯ ಪ್ರವಾಹದಲ್ಲಿ ಏಕಿಕ್ರತಗೊಂಡು, ತಮ್ಮ ಅಭಿವೃದ್ಧಿಯು ತಮ್ಮಿಂದಲೆ ಸಾದ್ಯವೆಂದು ತಿಳಿದು, ಸರಕಾರ ಮತ್ತು ಸಮಾಜದ ಮೇಲೆ ಹೆಚ್ಚು ಅವಲಂಬಿತರಾಗಿರದೇ, ತಮ್ಮಲ್ಲಿರುವ ಸಂಪನ್ಮೂಲಗಳನ್ನು ಕ್ರೂಢೀಕರಿಸಿ ಸ್ವಸಹಾಯ ಮತ್ತು ಸ್ವಾಭಿಮಾನದ ಜೀವನ ಸಾಗಿಸುತ್ತಿರುವದು, ಸಾಮಾಜಿಕ ಅರ್ಥಿಕ ಬದಲಾವಣೆಯ ಕುರಹ ಆಗಿದೆ ಎಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ ನಿಯಮಿತ, ಹುಕ್ಕೇರಿ ಇದರ ಸಮಗ್ರ ಅಭಿವೃದ್ಧಿಯ ಅಧ್ಯಯನವನ್ನು ಹಮ್ಮಿಕೊಳ್ಳಲಾಗಿದೆ. ಈ ಅಧ್ಯಯನವನ್ನು ಐದು ಅಧ್ಯಾಯಗಳಲ್ಲಿ ಅಧ್ಯಯನಮಾಡಲಾಗಿದೆ.

ಮೊದಲನೆಯ ಅಧ್ಯಾಯ ಪೀಠಿಕೆಯಲ್ಲಿ ಸಹಕಾರದ ಹಿನ್ನಲೆ ಮತ್ತು ಸಹಕಾರ ಚಳುವಳಿಯ ಸೈದ್ಧಾಂತಿಕ ನಿಲುವುಗಳನ್ನು ಅಧ್ಯಯನ ಮಾಡಲಾಗಿದೆ, ಹಾಗೂ ಅಧ್ಯಯನದ ಕ್ಷೇತ್ರವನ್ನು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ ನಿಯಮಿತ, ಹುಕ್ಕೇರಿ ಇದ್ದಕ್ಕೆ ಸಿಮೀತಗೊಳಿಸಿ ೧೯೭೦ ರಿಂದ ೨೦೦೮ರ ವರೆಗಿನ ಅಂಕಿಅಂಶಗಳನ್ನು ದಾಖಲಿಸಲಾಗಿದೆ. ಹಾಗೂ ಸದರಿ ಅಧ್ಯಯನದಲ್ಲಿ ಸಹಕಾರ ಸಂಘಗಳಿಗೆ ಸಂಬಂಧಿಸಿದ ಸಾಹಿತ್ಯದ ಪುನರಾವಲೋಕನವನ್ನು ಮಾಡಲಾಗಿದೆ.

ಎರಡನೆಯ ಅಧ್ಯಾಯ ಸಹಕಾರ ರಂಗದಲ್ಲಿ ವಿವಿಧ ವಿದ್ವಾಂಸರ ಸಹಕಾರದ ವ್ಯಾಖೆಗಳನ್ನು ಅಧ್ಯಯನ ಮಾಡಲಾಗಿದೆ. ಪ್ರಂಪಚದಲ್ಲಿ ಸಹಕಾರ ಚಳುವಳಿಯ ಉಗಮ ಹಾಗೂ ಭಾರತದಲ್ಲಿ ಸಹಕಾರ ಚಳುವಳಿಯ ಉಗಮ, ಭಾರತದ ಸ್ವಾತಂತ್ರ್ಯ ಪೂರ್ವದಲ್ಲಿ ಹಾಗೂ ಸ್ವತಂತ್ರ್ಯದ ನಂತರ ವಿವಿಧ ಯೋಜನೆಗಳಲ್ಲಿ ಸಹಕಾರದ ಪ್ರಗತಿಯನ್ನು ಅಂಕಿಅಂಶಗಳ ಮೂಲಕ ಅಧ್ಯಯನ ಮಾಡಲಾಗಿದೆ. ಕರ್ನಾಟಕ ಮತ್ತು ಬೆಳಗಾವಿ ಜಿಲ್ಲೆಯಲ್ಲಿ ಸಹಕಾರದ ಪ್ರಗತಿಯನ್ನು ಅಂಕಿಅಂಶಗಳ

ಮೂಲಕ ವಿಶ್ಲೇಷಿಸಲಾಗಿದೆ. ಭಾರತದಲ್ಲಿ ಸಹಕಾರ ಸಂಘಗಳ ರಚನೆಯು ಪಿರಾಮಿಡ್ ತರಹ ಹೊಂದಿರುವುದನ್ನು ಮತ್ತು ಸಹಕಾರ ಸಂಘಗಳ ಪ್ರಕಾರಗಳನ್ನು ಅಧ್ಯಯನಮಾಡಲಾಗಿದೆ. ಸೇವೆಯ ಉದ್ದೇಶವನ್ನು ಇಟ್ಟುಕೊಂಡ ವಿವಿಧ ಗ್ರಾಹಕ ಸಂಘಗಳನ್ನು ಅಧ್ಯಯನಮಾಡಲಾಗಿದೆ.

ಮೂರನೆಯ ಅಧ್ಯಾಯ ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ ನಿಯಮಿತ, ಹುಕ್ಕೇರಿ ಇದರ ಪಾತ್ರದಲ್ಲಿ ಸಂಘದ ಹಿನ್ನಲೆ, ಭೌಗೋಳಿಕ ಸ್ಥಾನವನ್ನು ಅಧ್ಯಯನಮಾಡಲಾಗಿದೆ. ಅದಲ್ಲದೆ ಸಂಘದ ಸಂಸ್ಥಾಪಕರ ವಿವರಣೆಯನ್ನು, ಸಂಘವು ಹೊಂದಿರುವ ಉದ್ದೇಶ ಮತ್ತು ಗುರಿಗಳನ್ನು ಹಾಗೂ ಸಂಘದ ಕಾರ್ಯ ಕ್ಷೇತ್ರವನ್ನು ಅಧ್ಯಯನಮಾಡಲಾಗಿದೆ. ಸಂಘದ ಸದಸ್ಯರ ಸಂಖ್ಯೆ, ಸಂಘದ ಹಣಕಾಸು ವ್ಯವಸ್ಥೆಗಳಾದ ಯೋಜನಾ ಸಾಲ, ಶೇರು ಹಣ ಮತ್ತು ಗ್ರಾಹಕರ ಠೇವಣಿಗಳ ಬಗ್ಗೆ ಅಂಕಿಅಂಶಗಳ ಮೂಲಕ ವಿಶ್ಲೇಷಿಸಲಾಗಿದೆ. ಸಂಘದ ವಿದ್ಯುತ್ ಖರೀದಿ ಮತ್ತು ಮಾರಾಟದ ದರಗಳ ಬಗ್ಗೆ ವಿವರಿಸಲಾಗಿದೆ. ಅದಲ್ಲದೆ ವಿದ್ಯುತ್ ವಿತರಣಾ ವ್ಯವಸ್ಥೆ ಮತ್ತು ವಿದ್ಯುತ್ ವಿತರಣಾ ಸಲಕರಣೆಗಳ ಉತ್ಪಾದನಾ ಘಟಕಗಳ ಪ್ರಗತಿ ನೋಟವನ್ನು ಚಿತ್ರಿಸಲಾಗಿದೆ. ಸಂಘದ ವಿದ್ಯುತ್ ಮಾರಾಟದಿಂದ ಬರುವ ಆದಾಯದ ವಿವರಗಳನ್ನು ಮತ್ತು ಸರಕಾರದ ವಿವಿಧ ವಿದ್ಯುತ್ ಯೋಜನೆಗಳ ಬಗ್ಗೆ ಅಂಕಿಅಂಶಗಳೊಡನೆ ಅಧ್ಯಯನಮಾಡಲಾಗಿದೆ. ಕೊನೆಯಲ್ಲಿ ಸಂಘದ ಪ್ರಾರಂಭದಿಂದ, ಪ್ರಸಕ್ತ ಅವಧಿಯ ಆರ್ಥಿಕ ಪ್ರಗತಿ ನೋಟವನ್ನು ಅಂಕಿಅಂಶಗಳ ಮೂಲಕ ಅಧ್ಯಯನಮಾಡಲಾಗಿದೆ.

ನಾಲ್ಕನೆಯ ಅಧ್ಯಾಯ ಸಂಘದ ಕಾರ್ಯ ವೈಖರಿಯ ವೈಶಿಷ್ಟ್ಯತೆಗಳು, ಇದರಲ್ಲಿ ಸಂಘವು ಹೊಂದಿದ ಸಂಘಟನೆಯ ಸ್ತರಗಳನ್ನು ವಿವರಿಸಲಾಗಿದೆ. ಸಂಘದ ಆಡಳಿತದ ನಿರ್ದೇಶಕ ಮಂಡಳಿಯನ್ನು ಮತ್ತು ಸಿಬ್ಬಂದಿ ವರ್ಗದ ಚಿತ್ರಣವನ್ನು ಸಂಘದ ಪೋಟ ನಿಯಮಗಳ ಅಡಿಯಲ್ಲಿ ವಿವರಿಸಲಾಗಿದೆ. ಸಂಘದ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ನೇರೆಯ ತಾಲೂಕುಗಳಾದ ಚಿಕ್ಕೋಡಿ ಗೋಕಾಕ ಮತ್ತು ರಾಯಬಾಗಗಳೊಡನೆ ಹೊಲಿಕೆ ಮಾಡಲಾಗಿದೆ. ಸಂಘದ ಮುಂದಿರುವ ಸಮಸ್ಯೆಗಳಾದ, ಸಮಂಜಸ ವಿದ್ಯುತ್ ದರ ನಿಗಧಿ, ವಿದ್ಯುತ್ ಸಾಮರ್ಥ್ಯ ಹೆಚ್ಚಿಸುವುದು, ಸರಕಾರದ ಯೋಜನೆಗಳಿಗೆ ಧನ ಸಹಾಯ, ಸರಕಾರದ ನಿಗಮಗಳಿಂದ ಬರತಕ್ಕ ಬಾಕಿ ವಸೂಲಾತಿ, ಸರಕಾರ ಮತ್ತು ಸಂಘದ ಲೆಕ್ಕ ಪತ್ರಗಳ ಹೊಂದಾಣಿಕೆ ಮತ್ತು ಸಂಘದ ವಿದ್ಯುತ್ ಹಾನಿಯನ್ನು ವಿವರಿಸಲಾಗಿದೆ. ಸಂಘವು ವಿದ್ಯುತ್ ಬಾಕಿ ವಸೂಲಿಗೆ ಕೈಗೊಂಡಕ್ರಮಗಳು ಮತ್ತು ಸಂಘದ ಇತರ ಸೇವೆಗಳ ಬಗ್ಗೆ ಅಧ್ಯಯನ ಮಾಡಲಾಗಿದೆ.

ಈ ಕೊನೆಯ ಐದನೆಯ ಅಧ್ಯಾಯವು ಸಮಾರೋಪ ಮತ್ತು ಸಲಹೆಗಳನ್ನು ಒಳಗೊಂಡಿರುತ್ತದೆ. ಈ ಅಧ್ಯಯನದಲ್ಲಿ ಕೆಲವು ಪೂರ್ವ ಗ್ರಹಿಕೆಗಳನ್ನು ಅಳವಡಿಸಿಕೊಂಡು

ಅಧ್ಯಯನವನ್ನು ಮುಂದುವರೆಸಲಾಗಿದೆ. ಪೂರ್ವ ಗ್ರಹಿಕೆಗಳನ್ನು ರುಜುವಾತು ಪಡಿಸಲು ಕ್ಷೇತ್ರ ಕಾರ್ಯ ಕೈಗೊಂಡು, ಕ್ಷೇತ್ರಕಾರ್ಯದ ಅಂಕಿ ಅಂಶಗಳು ಮತ್ತು ಮಾಹಿತಿ ಆಧಾರದ ಮೇಲೆ ಎಲ್ಲವುಗಳನ್ನು ಮೌಲ್ಯಯುತ ಪೂರ್ವಗ್ರಹಿಕೆಗಳು ಎಂದು ತಿಳಿಯಲಾಗಿದೆ. ಅವುಗಳನ್ನು ಕೆಳಗಿನಂತೆ ವಿಶ್ಲೇಷಿಷಲಾಗಿದೆ.

ಮೊದಲನೆಯ ಪೂರ್ವ ಗ್ರಹಿಕೆಯು **"ಸಹಕಾರಿ ಚಳುವಳಿಯಿಂದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯಾಗುವದು",** ಯಾವುದೇ ರಾಷ್ಟ್ರ ಅಭಿವೃದ್ಧಿ ಹೊಂದಿದ ರಾಷ್ಟ್ರ ಎನಿಸಿಕೊಳ್ಳಬೇಕಾದರೆ ಅದು ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದಿದ್ದರೆ ಮಾತ್ರ ಅದು ಇಡೀ ವಿಶ್ವದಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರ ಎನಿಸಿಕೊಳ್ಳುವದು. ಇದು ಈ ಅದ್ಯಯನದಲ್ಲಿ ಹೇಗೆ ಸತ್ಯವಾಗಿದೆ ಅಂದರೆ, ಹುಕ್ಕೇರಿ ವಿದ್ಯುತ್ ಸಹಕಾರಿ ಸಂಘವು ಹುಕ್ಕೇರಿಯಲ್ಲಿ ಪ್ರಾರಂಭವಾದ ಮೇಲೆ ಜನರು ಇದರಿಂದ ತಮ್ಮ ವಿದ್ಯುತ್ ಜೋಡಣೆಗಳನ್ನು ಪಡೆದುಕೊಂಡು ತಮ್ಮ ಆರ್ಥಿಕತೆಯನ್ನು ಅಭಿವೃದ್ಧಿಪಡಿಸಿಕೊಂಡಿದ್ದಾರೆ. ಮನೆಗಳಿಗೆ, ವ್ಯಾಪಾರ ಉದ್ಯಮಿಗಳಿಗೆ ನೀರಾವರಿ ಪಂಪಸೇಟ್ಟಳಿಗೆ ಚಿಕ್ಕ ಉದ್ಯಮಿಗಳಿಗೆ, ದೊಡ್ಡ ಔದ್ಯೋಗೀಕ ಹಾಗು ಕೃಷಿ ಜೋಡಣೆಗಳಿಗೆ ಮತ್ತು ಬೀದಿ ದೀಪಗಳಿಗೆ ಈ ರೀತಿ ಮೊದಲಾದ ವಲಯದಲ್ಲಿ ವಿದ್ಯುತ್ ಆಧಾರಿತ ವಿವಿಧ ಉದ್ಯೋಗಗಳನ್ನು ಕೈಗೊಂಡು ತಮ್ಮ ಆರ್ಥಿಕ ಮತ್ತು ಸಾಮಾಜಿಕ ಜೀವನವನ್ನು ಅಭಿವೃದ್ಧಿ ಪಡಿಸಿಕೊಂಡು ತಮ್ಮ ಜೀವನಮಟ್ಟವನ್ನು ಸುಧಾರಿಸಿಕೊಂಡಿದ್ದಾರೆ. ಇದನ್ನು ಕೋಷ್ಠಕ ೩.೧೧ ರಲ್ಲಿ ರುಜುವಾತು ಪಡಿಸಲಾಗಿದೆ. ಪ್ರಸ್ತುತ ಮಾರ್ಚ ೨೦೦೮ ಕ್ಕೆ ಮನೆ ಹಾಗೂ ವ್ಯಾಪಾರ ಉದ್ಯಮಿಗಳಿಗೆ ೬೪,೫೨೫, ಚಿಕ್ಕ ಉದ್ಯಮಿಗಳಿಗೆ ೧,೯೬೯, ದೊಡ್ಡ ಉದ್ಯಮಿಗಳಿಗೆ ೧೩ ನೀರಾವರಿ ಪಂಪ್ ಸೆಟ್ ಗಳಿಗೆ ೧೭,೫೧೧ ಮತ್ತು ಬೀದಿ ದೀಪಗಳಿಗೆ ೧೦,೧೨೨ ವಿದ್ಯುತ ಜೋಡಣೆಗಳನ್ನು ಹೊಂದಿದೆ. ಈ ಅಂಕಿ ಅಂಶಗಳನ್ನು ಪರೀಶಿಲಿಸಿದಾಗ ಈ ಪೂರ್ವ ಗ್ರಹಿಕೆಯು ಸತ್ಯವಾಗಿದೆ ಎಂದು ಹೆಳಬಹುದು.

ಎರಡನೇಯ ಪೂರ್ವ ಗ್ರಹಿಕೆಯು **"ಸಹಕಾರಿ ಚಳುವಳಿಯು ಚಳುವಳಿಯಿಂದ ಸಾಮಾನ್ಯ ಜನರಲ್ಲಿ ಪ್ರಜಪ್ರಭುತ್ವದ ಕಲ್ಪನೆ ಮೂಡುತ್ತದೆ."** ಪ್ರಜಾಪ್ರಭುತ್ವದ ಜೀವಾಳ, ಸಾಂಘಿಕ ಜೀವನ ಮತ್ತು ಸಾಮೂಹಿಕ ಬದಲಾವಣೆ, ಭಾತೃತ್ವ ಸಮಾನತೆ, ಮತ್ತು ನ್ಯಾಯ ಪ್ರಜಾಪ್ರಭುತ್ವದ ಅಡಿಗಲ್ಲುಗಳು. ಸಮಾಜದಲ್ಲಿ ಇರುವ ಕಟ್ಟ ಕಡೆಯ ಮನುಷ್ಯನ ಆರ್ಥಿಕ, ಸಾಮಾಜಿಕ, ರಾಜಕೀಯ ಬೆಳವಣಿಗೆ ಆಗಬೇಕೆಂಬುದೆ, ಪ್ರಜಾಪ್ರಭುತ್ವದ ಸಂಘಟಣೆ ಮತ್ತು ಸಿದ್ದಾಂತದ ಮೂಲ ಆಶಯ. ಭಾರತದ ಸಂವಿಧಾನದ ೪ ನೇ ಅಧ್ಯಾಯ ರಾಜ್ಯ ನೀತಿ ನಿರ್ದೆಶಕ ತತ್ವಗಳನ್ನು ಅಳವಡಿಸಿ ಮಹತ್ಮಾ ಗಾಂಧಿಜೀಯವರ ಸರ್ವೋದಯದ ಕನಸನ್ನು ಅದರಲ್ಲಿ ಬಿಂಬಿಸಲಾಗಿದೆ. ಇನ್ನೊಂದು ಬಹು ಮುಖ್ಯವಾದ ಪ್ರಜಾ ಪ್ರಭುತ್ವದ ತತ್ವ ಜನರಲ್ಲಿ ಪಾಲ್ಗೊಳ್ಳುವಿಕೆಯ ಅರಿವನ್ನು ಮೂಡಿಸುವುದು. ಜನರ

[illegible]

ಕ್ರೀಯಾ ಶೀಲತೆ ಅತಿ ಮಹತ್ವವಾದದ್ದು. ಈ ಅಂಶಗಳನ್ನು ಸಾಭಿತುಪಡಿಸಲು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಾಕಾರಿ ಸಂಘವು ತನ್ನ ಎಲ್ಲ ವಿದ್ಯುತ್ ಗ್ರಾಹಕರನ್ನು ಸಂಘದ ಸದಸ್ಯರನ್ನಾಗಿ ಮಾಡಿಕೊಳ್ಳುತ್ತದೆ. ಇದು ಕೋಷ್ಟಕ ೩.೧ ರಲ್ಲಿ ರುಜುವಾತಾಗಿದೆ. ಜೂನ ೧೯೭೦ ರಲ್ಲಿ ೧,೨೪೭ ಸದಸ್ಯರಿದ್ದರೆ, ಪ್ರಸ್ತುತ ಮಾರ್ಚ ೨೦೦೮ ರಲ್ಲಿ ೭೦,೯೯ ಸದಸ್ಯರಿದ್ದಾರೆ. ಹೀಗೆ ಜನರು ಸಂಘದ ಸದಸ್ಯರಾಗಿ ಪ್ರಜಾಪ್ರಭುತ್ವದ ಕಲ್ಪನೆಯನ್ನು ತೋರಿಸಿಕೊಟ್ಟಿದ್ದಾರೆ ಎಂಬುದು ಅಂಕಿ ಅಂಶಗಳಿಂದ ತಿಳಿದು ಬರುತ್ತದೆ.

ಮೂರನೇ ಪೂರ್ವ ಗ್ರಹಿಕೆಯು **"ಹುಕ್ಕೇರಿ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘವು ವಿದ್ಯುತ್‌ನ್ನು ಗ್ರಾಹಕರ ಅಭಿರುಚಿಗೆ ಅನುಗುಣವಾಗಿ ವಿತರಿಸಲು ಸಮರ್ಥವಾಗಿದೆ."** ಸಂಘವು ಗ್ರಾಹಕರ ಅವಶ್ಯಕತೆಗೆ ಅನುಗುಣವಾಗಿ ವಿದ್ಯುತ್ ವಿತರಣೆ ಮಾಡುತ್ತಿದೆ. ಗ್ರಾಹಕರ ಯಾವ ವಲಯಕ್ಕೆ ವಿದ್ಯತ್ ಅವಶ್ಯವಿದೆ. ಆ ವಲಯಕ್ಕೆ ವಿದ್ಯುತ್ ಒದಗಿಸಲಾಗುತ್ತದೆ. ಈಗಾಗಲೇ ಸಂಘದ ಕಾರ್ಯಕ್ಷೇತ್ರದಲ್ಲಿ ಬರುವ ಎಲ್ಲ ಹಳ್ಳಿಗಳು, ಪುನರ್ ನಿವೇಶನಾ ಕೇಂದ್ರಗಳು ಮತ್ತು ಹೆಮ್ಲೆಟಗಳಿಗೆ ನಿಗಧಿತ ಅವಧಿಗಿಂತ ಮುಂಚೆ ವಿದ್ಯುತ್‌ನ್ನು ಒದಗಿಸಲಾಗಿದೆ. ಅದಲ್ಲದೆ ಯವುದೇ ಗ್ರಾಹಕರು ತಾವು ಈ ಸಂಘದ ಕಾರ್ಯ ಕ್ಷೇತ್ರದಲ್ಲಿ ಹೊಸ ನಿವೇಶನಗಳನ್ನು ಮತ್ತು ಬಡಾವಣೆಗಳನ್ನು ನಿರ್ಮಿಸಿದರೆ, ಅಂತಹ ಗ್ರಾಹಕರಿಗೆ ತ್ವರಿತವಾಗಿ ವಿದ್ಯುತ್ತನ್ನು ಒದಗಿಸಲಾಗುತ್ತದೆ. ಅದಲ್ಲದೆ ರಾಷ್ಟ್ರದ ಮಹತ್ವದ ಉದ್ಯೋಗವಾಗಿರುವ ಕೃಷಿಗೆ ಬೇಕಾಗುವ ಲೈನಗಳ ರಚನೆ, ಟಾನ್ಸಫಾರ್ಮರಗಳ ಜೋಡಣೆ ಮೊದಲಾದ ಕಾರ್ಯಗಳನ್ನು ಕೂಡಲೇ ಕೈಗೆತ್ತಿಕೊಳ್ಳುತ್ತದೆ. ಅದಲ್ಲದೆ ಯಾವುದೇ ಸಭೆ ಸಮಾರಂಭಗಳಿಗೆ ಬೇಕಗುವ ತಾತ್ಕಾಲಿಕ ವಿದ್ಯುತ್ ಜೋಡಣೆಗಳನ್ನು ತ್ವರಿತವಾಗಿ ಕೈಗೊಳ್ಳುತ್ತದೆ. ಇದು ಕೋಷ್ಟಕ ೩.೧೧ ರಲ್ಲಿ ರುಜುವಾತಾಗಿದೆ. ಸನ್ ೧೯೭೦ ರಲ್ಲಿ ೨೦ ಗ್ರಾಮಗಳು, ೨೧೩ ಕಿ. ಮೀ ಎಚ್.ಟಿ. ಲೈನ್, ೨೫೮ ಕಿ.ಮೀ ಎಲ್.ಟಿ. ಲೈನ್ ಮತ್ತು ಕ್ಷೇತ್ರದಲ್ಲಿ ೧೧೪ ಟಾನ್ಸಫಾರ್ಮರುಗಳ ಜೋಡಣೆ ಇದ್ದರೆ, ಪ್ರಸ್ತುತ ೨೦೦೮ ರಲ್ಲಿ ೧೩೬ ಗ್ರಾಮಗಳ ವಿದ್ಯುದ್ದೀಕರಣ, ೯೯೦.೦೭ ಎಸ್.ಟಿ. ಲೈನ್, ೩೨೫೭.೫೭ ಕಿ.ಮೀ ಎಲ್.ಟಿ. ಲೈನ್ ೧೩೨೬ ಟಾನ್ಸಫಾರ್ಮರಗಳನ್ನು ಕ್ಷೇತ್ರದಲ್ಲಿ ಅಳವಡಿಸಲಾಗಿದೆ. ಈ ರೀತಿಯಾಗಿ ಸಂಘವು ತನ್ನ ಗ್ರಾಹಕರ ಅಭಿರುಚಿಗಣುಗುಣವಾಗಿ ವಿದ್ಯುತ್ ವಿತರಿಸಲು ಸಮರ್ಥವಾಗಿದೆ ಎಂಬುದು ಮೇಲಿನ ಅಂಕಿ ಅಂಶಗಳನ್ನು ನೋಡಿದಾಗ ಈ ಪೂರ್ವಗ್ರಹಿಕೆ ನಿಜ ಎನ್ನುವುದು ರುಜುವಾತಾಗುತ್ತದೆ.

ನಾಲ್ಕನೆ ಪೂರ್ವಗ್ರಹಿಕೆಯು **"ಸಂಘದ ವಿದ್ಯುಚ್ಛಕ್ತಿ ವಿತರಣೆಯ ಆಡಳಿತದ ನೀತಿಗಳು ಅತ್ಯಂತ ಪರಿಣಾಮಕಾರಿಯಾಗಿವೆ."** ಸಂಘವು ತನ್ನೆಲ್ಲ ವಿದ್ಯುತ್ ಗ್ರಾಹಕರನ್ನು ಸದಸ್ಯರನ್ನಾಗಿ ಮಾಡಿಕೊಳ್ಳುತ್ತದೆ. ಸಂಘದ ಕ್ಷೇತ್ರವನ್ನು ಸದಸ್ಯರನುಗುಣವಾಗಿ ೧೨ ವಿಭಾಗಳನ್ನಾಗಿ ಮಾಡಲಾಗಿದೆ. ಪ್ರತಿಯೊಂದು

[illegible]

ವಿಭಾಗದಿಂದ ಒಬ್ಬ ಸದಸ್ಯ ಪ್ರತಿನಿಧಿಯನ್ನು ಚುಣಾಯಿಸಲಾಗುತ್ತಿದೆ. ಈ ಪ್ರತಿನಿಧಿಗಳು ತಮ್ಮ ವಿಭಾಗದ ಸದಸ್ಯರ ಯಾವುದೇ ವಿದ್ಯುತ್ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುತ್ತಾರೆ. ಅದಲ್ಲದೆ ಸಂಘವು ವಿದ್ಯುತ್ ಕಾರ್ಯಕ್ಷೇತ್ರವನ್ನು ೫ ವಿಭಾಗಗಳಲ್ಲಿ ವಿಂಗಡಿಸಲಾಗಿದ್ದು ಪ್ರತಿ ವಿಭಾಗಕ್ಕೆ ಒರ್ವ ಇಂಜನೀಯರ ಹಾಗೂ ಪ್ರತಿ ಹಳ್ಳಿಗಳಿಗೆ ಲೈನ್‌ಮನ್ ಗಳನ್ನು ನೇಮಿಸಲಾಗಿದೆ. ಸಂಘದ ವಿದ್ಯುತ್ ಗ್ರಾಹಕರಿಗೆ ತ್ವರಿತ ಸೇವೆ ಕೊಡಲಿಕ್ಕೆ ಸದಸ್ಯ ಪ್ರತಿನಿಧಿಗಳಿಗೆ ಈ ಕಾರ್ಯ ಕ್ಷೇತ್ರ ವಿಭಾಗಗಳ ಸಿಬ್ಬಂದಿಗಳ ಮೂಲಕ ಅನುಕೂಲವಾಗಿತ್ತದೆ. ಸಂಘದ ರೂಪ ರೇಷೆಗಳನ್ನು, ಸದಸ್ಯರ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಿದ ಯೋಜನೆಗಳನ್ನು ಜಾರಿಗೆ ತರಲ್ಲಿಕ್ಕೆ, ನಿರ್ದೇಶಕರು ಮತ್ತು ಸರಕಾರ ಪ್ರತಿನಿಧಿ ವ್ಯವಸ್ಥಾಪಕ ನಿರ್ದೇಶಕನು ಪ್ರತಿ ತಿಂಗಳ ಸಭೇ ಸೇರುತ್ತಾರೆ. ಇವರು ತಿರ್ಮಾನಿಸಿದ ಯೋಜನೆಗಳನ್ನು ಜಾರಿಗೆ ತರಲು ವ್ಯವಸ್ಥಾಪಕ ನಿರ್ದೇಶಕನು ಸಂಘದ ಎಲ್ಲ ಸಿಬ್ಬಂದಿಯೊಂದಿಗೆ ಕ್ರಮ ಕೈಗೊಳ್ಳುತ್ತಾನೆ. ಸಂಘದ ಕಾರ್ಯ ಚಟುವಟಿಕೆಗಳ ಆಡಳಿತದ ಆಧಾರದ ಮೇಲೆ ಸಂಘದ ಸಂಘಟಣೆಯನ್ನು ಮೂರು ವಿಭಾಗಗಳಲ್ಲಿ ವಿಂಗಡಿಸಲಾಗಿದೆ. ಅದನ್ನು ಕೋಷ್ಠಕ ೪.೧ ರಲ್ಲಿ ರುಜುವಾತು ಪಡಿಸಲಾಗಿದೆ. ಹಾಗೂ ಸಂಘವು ಮಾನ್ಯತೆ ಪಡೆದ ೨೨೬ ಸಿಬ್ಬಂದಿಗಳೊಂದಿಗೆ ಕಾರ್ಯ ನಿರ್ವಹಿಸುತ್ತದೆ. ಇದನ್ನು ಕೋಷ್ಠಕ ೪.೨ ರಲ್ಲಿ ರುಜುವಾತು ಪಡಿಸಲಾಗಿದೆ. ಅದಲ್ಲದೆ ವಿದ್ಯುತ್ ಬಾಕಿ ಹಣ ವಸೂಲಿಗೆ ಬಿಗಿಯಾದ ಕ್ರಮ ಕೈಗೊಳ್ಳುತ್ತಿದೆ. ಹಾಗೂ ಅನಧಿಕೃತ ಜೋಡಣೆಗಳನ್ನು ಪತ್ತೆ ಹಚ್ಚಲು ತಪಾಸನಾ ಅಧಿಕಾರಿಗಳನ್ನೊಳಗೊಂಡ ಸಿಬ್ಬಂದಿ ದಳವಿದೆ. ಈ ಎಲ್ಲ ಅಂಶಗಳನ್ನು ಪರಿಶಿಲಿಸಿದಾಗ ಸಂಘದ ವಿದ್ಯುತ ವಿತರಣೆಯ ಆಡಳಿತ ನೀತಿಗಳು ಅತ್ಯಂತ ಪರಿಣಾಮಕಾರಿಯಾಗಿವೆ ಅನ್ನುವುದು ರುಜುವಾತಾಗಿದೆ.

ಐದನೆಯ ಪೂರ್ವಗೃಹಿಕೆಯು **"ಸಂಘದ ವಿದ್ಯುಚ್ಛಕ್ತಿ ವಿತರಣೆಗೆ ಸರಕಾರ ಪ್ರೋತ್ಸಾಹ ನೀಡುತ್ತದೆ."** ಸಂಘದ ವಿದ್ಯುತ ಖರೀದಿ ದರಗಳನ್ನು ಮೊದಲು ಕರ್ನಟಕ ವಿದ್ಯುಚ್ಛಕ್ತಿ ಮಂಡಳಿಯವರು ಪ್ರಸ್ತುತದಲ್ಲಿ ಕೆ.ಇ.ಆರ್.ಸಿ ಯವರು ನಿಗಧಿ ಪಡಿಸುತ್ತಾರೆ. ಇದನ್ನು ಕೋಷ್ಠಕ ೩.೫ ರಲ್ಲಿ ತೊರಿಸಲಾಗಿದೆ. ಏಪ್ರೀಲ್ ೧೯೭೧ ಕ್ಕೆ ೫.೫ ಪೈಸೆ ಇದ್ದದ್ದು ೧೯೮೧ ಕ್ಕೆ ೭ ಪೈಸೆ ಆಯಿತು ನಂತರ ೧೯೯೦ ಕ್ಕೆ ೩೦ ಪೈಸೆ ಇದ್ದದ್ದು, ೨೦೦೫ ಕ್ಕೆ ೧.೦೦ ರೂ ಆಯಿತು. ಈಗ ಮಾರ್ಚ ೨೦೦೮ ರಿಂದ ೩.೪೦ ಪೈಸೆ ಆಕರಣೆ ಮಾಡುತ್ತಿದ್ದಾರೆ. ಈ ದರಗಳು ಸಂಘಕ್ಕೆ ಅಸಮಂಜಸ ದರಗಳಾಗಿವೆ. ಸರಕಾರ 'ಪುರಿ' ಮತ್ತು 'ಮಥುರ' ಕಮೀಟಿಗಳ ವರದಿಯನ್ನು ಅನುಸರಿಸಲ್ಪಡುತ್ತಿಲ್ಲ. ಸರಕಾರವು ಸಂಘದ ಗ್ರಾಹಕರ ದರಗಳನ್ನು ರಾಜ್ಯದ ಇತರ ಕಂಪನಿಗಳ ದರಗಳಂತೆ ನಿಗಧಿ ಮಾಡುತ್ತಿದ್ದಾರೆ. ಇದು ಅಸಮಂಜಸವಾಗಿದ್ದು, ಅದಲ್ಲದೆ ನೀರಾವರಿ ಪಂಪಸೇಟ್‌ಗಳಿಗೆ ಉಚಿತ ವಿದ್ಯುತ ಇರುವುದರಿಂದ ಇದು ಪ್ರತಿ ಶತ ೭೦ ರಷ್ಟು ಆಗಿದೆ. ಇನ್ನುಳಿದ ಪ್ರತಶತ ೩೦ ರಲ್ಲಿ ಬರುವ

ಆದಾಯದಿಂದ ಸಂಘವು ತನ್ನೆಲ್ಲ ಕೆಲಸಗಳನ್ನು ನಿಭಾಯಿಸಬೇಕಾಗಿದೆ. ಹೀಗಾಗಿ ಸಂಘವು ಹಾನಿಯನ್ನು ಎದುರಿಸುತ್ತಿದೆ. ಇದನ್ನು ಕೋಷ್ಟಕ ೪.೪ ರಲ್ಲಿ ರುಜುವಾತು ಪಡಿಸಲಾಗಿದೆ. ೧೯೯೯-೨೦೦೦ ರ ಹೊತ್ತಿಗೆ ೩,೯೪,೭೨,೭೩೪.೩೦ ರೂ ಗಳ ಹಾನಿ ಎದುರಿಸಿದರೆ ೨೦೦೨-೦೩ ರ ವೇಳೆಗೆ ೧,೮೦,೭೬,೧೧೭.೫೬ ರೂ ಗಳ ಉಳಿತಾಯ ಮಾಡಿತ್ತು. ಪ್ರಸ್ತುತ ಹಾನಿ ರೂ ೧೫,೬೧,೩೦,೩೪೫.೦೦ ರೂಗಳಿಗೆ ಏರಿದೆ. ಸರಕಾರವು ಸಂಘಕ್ಕೆ ಯಾವುದೇ ಪ್ರೋತ್ಸಾಹಧನ ಅಥವಾ ಅನುದಾನವನ್ನು ನಿಡುತ್ತಿಲ್ಲ. ಅದಲ್ಲದೆ ಸರಕಾರದ ವಿದ್ಯುತ ಯೋಜನೆಗಳಾದ ಭಾಗ್ಯ ಜ್ಯೋತಿ ವಿದ್ಯುತ್ ಯೋಜನೆ, ರಾಜೀವ ಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿಯಲ್ಲಿ ಬರುವ ಅನುದಾನವನ್ನು ಸಂಘಕ್ಕೆ ಕೂಡಲೆ ನೀಡುತ್ತಿಲ್ಲ. ಹೀಗಾಗಿ ಭಾಗ್ಯ ಜ್ಯೋತಿ ವಿದ್ಯುತ್ ಯೋಜನೆ ರಾಜ್ಯದ ವಿವಿಧ ಭಾಗಗಳಲ್ಲಿ ಜಾರಿಯಾದರೆ ಸರಕಾರದ ಅನುದಾನ ಕೊರತೆಯಿಂದ ಸಂಘದ ಕಾರ್ಯಕ್ಷೇತ್ರದಲ್ಲಿ ಜಾರಿ ಆಗಲ್ಲಿಲ್ಲ. ಈಗ ಪ್ರಸ್ತುತ ರಾಜೀವ ಗಾಂಧಿ ವಿದ್ಯುತ್ ಯೋಜನೆ ಅಡಿಯಲ್ಲಿ ೭.೨೧ ಕೊಟಿ ರೂ ಮಂಜೂರ ಆದರೂ ಸರಕಾರ ಅನುಮತಿ ಇಲ್ಲದೆ ಇನ್ನೂ ಪ್ರಾರಂಬವಾಗಿಲ್ಲ. ಈ ಮೇಲಿನ ವಿಷಯಗಳನ್ನು ನೋಡಿದಾಗ ಸರಕಾರವು ಸಂಘದ ವಿದ್ಯುಚ್ಛಕ್ತಿ ವಿತರಣೆಗೆ ಪ್ರೋತ್ಸಾಹ ನೀಡುತ್ತಿಲ್ಲ ಅನ್ನುವುದು ರುಜುವಾತಾಗುತ್ತದೆ.

೫.೨ ಸಲಹೆ ಸೂಚನೆಗಳು :

ಮುಂದಿನ ಅಧ್ಯಯನಕ್ಕೆ ಪೂರಕವಾಗುವ ಪ್ರಸ್ತುತ ಅಧ್ಯಯನದ ಮೇಲೆ ಸಂಶೋಧನೆ ಮಾಡಲು ಅನುಕೂಲವಾಗುವ ದೃಷ್ಟಿಯಿಂದ ಈ ಕೆಳಗಿನ ಸಲಹೆಗಳನ್ನು ಕೊಡಲಾಗಿದೆ.

೧. ಜನರು ಸ್ವತಃ ತಾವಾಗಿಯೇ ಮುಂದೆ ಬಂದು ಸಹಕಾರಿ ಚಳುವಳಿಯನ್ನು ಜನಾಂದೋಲನ ಚಳುವಳಿಯನ್ನಾಗಿ ರೂಪಿಸಿಕೊಳ್ಳಬೇಕು.

೨. ಜನರಿಗೆ ಸಹಕಾರ ಚಳುವಳಿಯ ಮಹತ್ವವನ್ನು ಹಾಗೂ ಅದರಿಂದಾಗುವ ಲಾಭಗಳ ಬಗ್ಗೆ ಸರಕಾರ ಮತ್ತು ಹುಕ್ಕೇರಿ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘವು ಪ್ರಚಾರ ಕೈಗೊಳ್ಳಬೇಕು.

೩. ಸರಕಾರ, ಸಂಘಗಳಿಗೆ ಇನ್ನೂ ಹೆಚ್ಚಿನ ಸಹಾಯ, ಸಹಕಾರ ಮತ್ತು ಪ್ರೋತ್ಸಾಹವನ್ನು ನೀಡಬೇಕು.

೪. ಸರಕಾರ, ವಿದ್ಯುತ್ ಯೋಜನೆಗಳ ಅನುದಾನವನ್ನು ತ್ವರಿತವಾಗಿ ಸಂಘಕ್ಕೆ ಮಂಜೂರ ಮಾಡಬೇಕು.

೫. ಸಂಘವು ಅರೆಕಾಲಿಕ ಕಾರ್ಮಿಕರ ಉದ್ಯೋಗಗಳನ್ನು ಬದ್ರಗೋಳಿಸಬೇಕು.

೬. ಸಂಘದ ಗ್ರಾಹಕರಿಗೆ ಸರಕಾರ ಕಡಿಮೆ ವಿದ್ಯುತ್ ದರಗಳನ್ನು ನಿಗಧಿ ಪಡಿಸಬೇಕು.

[illegible]

೭. ಸಂಘದ ಕಾರ್ಯಕ್ಷೇತ್ರದ ಸಾಮರ್ಥ್ಯದ ಅನುಗುಣವಾಗಿ ಸರಕಾರ ವಿದ್ಯುತ್ ವಿತರಣಾ ಕೇಂದ್ರಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಬೆಕು.

೮. ಸಂಘವು ಪಟ್ಟಣಗಳಂತೆ ಹಳ್ಳಿಗಳಲ್ಲಿ ವ್ಯಾಪಾರೋದ್ಯಮಿಗಳನ್ನು ಪ್ರಾರಂಭಿಸಲು ಹೆಚ್ಚಿನ ಅವಧಿ ವಿದ್ಯುತ್ ಪೂರೈಕೆ ಮಾಡಲು ಕ್ರಮ ಕೈಗೊಳ್ಳಬೇಕು.

೯. ಸಂಘವು ವಿದ್ಯುತ್ ಹಾನಿ ತಡೆಗಟ್ಟಲು ಬಿಗಿಕ್ರಮಕೈಗೊಳ್ಳಬೇಕು.


೧೦. ಸಂಘವು ವಿದ್ಯುತ್ ದುರ್ಗಘಟನೆಗಳನ್ನು ತಪ್ಪಿಸಲು ಜನರಲ್ಲಿ ಜಾಗೃತಿ ಮೂಡಿಸಬೇಕು.

ಕೋಷ್ಟಕಗಳ ಯಾದಿ


[illegible]

[illegible]


ಕರ್ನಾಟಕ ರಾಜ್ಯ
ಹುಕ್ಕೇರಿ
ಬೆಳಗಾವಿ ಜಿಲ್ಲೆ
ಸೂಚಿ
ಅಧ್ಯಯನ ಕ್ಷೇತ್ರ
ಉ


ಬೆಳಗಾವಿಜಿಲ್ಲೆ
ಅಥಣಿ
ಚಿಕ್ಕೋಡಿ
ರಾಯಭಾಗ
ಗೋಕಾಕ
ಹುಕ್ಕೇರಿ
ರಾಮದುರ್ಗ
ಸವದತ್ತಿ
ಬೆಳಗಾವಿ
ಬೈಲಹೊಂಗಲ
ಖಾನಾಪೂರ
ಸೂಚಿ
ಅಧ್ಯಯನ ಕ್ಷೇತ್ರ
ಉ

ಹುಕ್ಕೇರಿ ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರಿ ಸಂಘ ನಿ., ಹುಕ್ಕೇರಿ ಇದರ ಕಾರ್ಯ ಕ್ಷೇತ್ರ.





ಸಂಘದ ಪ್ರಧಾನ ಕಛೇರಿ



ಸಂಸ್ಥಾಪಕ ದಿ. ಅಪ್ಪಣಗೌಡ ಪಾಟೀಲ ರವರ ಪುತಳಿ



ಅಪ್ಪಣಗೌಡಾ ಪಾಟೀಲ ಸಿಮೆಂಟ ಕಂಬ ತಯಾರಿಕಾ ಘಟಕ



ಶ್ರೀ ದುರುದುಂಡೇಶ್ವರ ಟ್ರಾನ್ಸಫಾರ್ಮರ ಉತ್ಪಾದನಾ ಘಟಕ

ಪರಾಮರ್ಶನ ಗ್ರಂಥಗಳು

BOOKS **ENGLISH**

1. BEDI R. D - Theory History and Practice of Co-Operation
Layal Book Depot, Near Govt. College Meerut. 1978
2. B. S. Yathur - Co-Operation in India
Sahitya Bhavan Publishing House Agra 1995.
3. Desai vasant - Rural development vol,VI, Rural development in the VII th plan
pub.Meena pandey, Himalaya publishing house ramdoot Dr.Bhatia.Marg.Girgaon. Bombay-4, 1988.
4. Deb.K. - Rural development in India since independence
pub., Sterling Publishers PVT.Ltd. 2-10 Green park extention new Delhia-16, 1986.
5. DIGBY - The Indian Economy,
Sultan Chand Sons Delhi – 1981
6. Ecklein Joan - Communtiy organizer
Pub John wiley and sons 1972 New York.
7. Ed. Mamoria & Saksena Co-operation in India
8. Gupta R.K.and Srivastava S.P. - Action sociology and dynamics of Rural developamant
Pub. Sulabh International centre for action sociology by Ajanta publications. New Delhi-1989.

9. HAJELA T. N - Principles Problems and Practice of Co-Operation

10. HOUGH E. M - The Co-Operative Movement in India, Oxford University, Press – 1981

11. Jawaharlal Nehru Community Development, Panchayat raj and Co-operation

12. K.D.Basava - Indian Economics vidyavahini Prakashana, Hubli Millennium Edition

13. MATHUR B.S - Co-Operation in India Sahitya Bhavan, Hospital Road, AGRA – 1995 Shivalal Agrwal & Company – 1991

14. NAKKIRAM S. - Urban Co-Opeative Banking in India Rainbow Publications, Coimbattore, 1982

15. RAO N. R - "Essay on Public Finance and Urban Co-operative Banking", Prasarang, Karnatak University, Dharwad

16. RUDDER DUTTA - and K.P.M.SUNDRAM INDIAN ECONOMY, S. Chand & Company Ltd., New Delhi-1983

17. SARAOA V. - The Theory of Co-operative Himalaya-Publishing House-Bombay – 1986

18. SINHA B.P. - Glimpses of Co-operative in India Himalayan Publishing Houses Bombay–1991

19. TYAGI R.S. - Recents Trends in Co-operative Movement in India Asian Publishing House 1986 – 1982.

20. V. Sharada - Theory of Co-Operation Himalayan Publishing Houses – 1986

ಕನ್ನಡ ಪುಸ್ತಕಗಳು

೧. ಪ್ರೋ. ಎಚ್.ಆರ್.ಕೃಷ್ಣಮೂರ್ತಿ – ಭಾರತದ ಆರ್ಥಿಕಾಭಿವೃದ್ಧಿ, ಸಪ್ನಾ ಬುಕ್ಕ ಸ್ಟಾಲ್ ಗಾಂಧಿನಗರ ಬೆಂಗಳೂರು ೧೯೯೬.

೨. ಎಂ. ಎಸ್. ಚಾಂಕವಟೆ – ಕಾರ್ಮಿಕ ಚಳುವಳಿ ಮತ್ತು ಸಾಮಾಜಿಕ ಹೊಣೆಗಾರಿಕೆ.

೩. ಪ್ರೋ. ಎನ್.ಬಿ. ದುರಗಿ – ಹಳ್ಳಿಗಳಲ್ಲಿ ಸಾಲದ ಸಾಲಭ್ಯ ಮತ್ತು ಅದರ ಸಮಸ್ಯೆಗಳು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೧೯೮೮

೪. ಪ್ರೊ, ಪಿ. ಎ. ಭಟ್ – ಸಾರ್ವಜನಿಕ ಅರ್ಥಶಾಸ್ತ್ರ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೧೯೭೯,

೫. ಡಾ: ಟಿ.ವಿ.ರಾಜು, ಡಾ: ಕೆ.ಶೇಷಮೂರ್ತಿ – ವ್ಯವಹಾರ ಅಧ್ಯಯನ ಸಪ್ನಾ ಬುಕ್ಕ ಹೌಸ್ ಗಾಂಧಿನಗರ ಬೆಂಗಳೂರು–೨೦೦೫

ಲೇಖನಗಳು

೧. ಡಾ॥ ಎ. ಪಿ. ಬಿರಾದರ ಪಾಟೀಲ : ಬೆಳಗಾವಿ ಜಿಲ್ಲೆಯಲ್ಲಿ ಸಹಕಾರ ಆಂದೋಲನ ದಿ. ಬೆಲ್ಲದಬಾಗೇವಾಡಿ ಅರ್ಬನ್ ಬ್ಯಾಂಕ ವಜ್ರಮಹೋತ್ಸವ ಪ್ರಕಟಣೆ ೨೦೦೫

೨. ಡಾ॥ ಎಸ್. ಎಸ್. ಮಸಳಿ : ಭಾರತದ ಸಹಕಾರ ಆಂದೋಲನ ದಿ. ಬೆಲ್ಲದಬಾಗೇವಾಡಿ ಕೃಷಿ ಸೇವಾ ಸಹಕಾರಿ ಬ್ಯಾಂಕ ಶತಮಾನೋತ್ಸವ ಪ್ರಕಟಣೆ ೨೦೦೫.

೩. ಡಾ॥ ಬಸವರಾಜ ಜಗಜಂಪಿ : ಸಹಕಾರ ಒಂದು ಚಿಂತನೆ ದಿ. ಬೆಲ್ಲದಬಾಗೇವಾಡಿ ಅರ್ಬನ್ ಬ್ಯಾಂಕ ವಜ್ರಮಹೋತ್ಸವ ಪ್ರಕಟಣೆ ೨೦೦೫

Reports

1. All Indian Rural Credit Survey Report 1956.
2. Government of India Sixth five year plan 1980
3. Government of India First Five year plan 1951.
4. Report of the All India Rural Credit Review Committee 1969.
5. Report of the Rural Banking Enquiry Committee 1980

GAZETTEER:

1. Gazetteer of India – 1987.
2. Gazetteer of Karnataka – 1982.
3. Gazetteer of Belgaum district – 1966.

News Papers

1. Economic Times Bombay Edition.
2. Indian Express – Bombay Edition.
3. Journal of Agricultural Economics.

ಕನ್ನಡ

೧. ಪ್ರಜಾವಾಣಿ,
೨. ದಿಕ್ಸೂಚಿ ವರದಿಗಳು.
೩. ಸಂಯುಕ್ತ ಕರ್ನಾಟಕ.
೪. ಯೋಜನಾ.